# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಗುರುವಾರ, ಜೂನ್ 20, 2024

ಸಂಪುಟ : 51 ಸಂಚಿಕೆ : 37 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




# ಭಾರತ ಜ್ಞಾನ ಕೇಂದ್ರವಾಗಲಿ

## ನಳಂದ ನೂತನ ಕ್ಯಾಂಪಸ್ ಉದ್ಘಾಟಿಸಿದ ಪ್ರಧಾನಿ ಮೋದಿ

ರಾಜಗೀರ್, ಜೂ. 19 – ಭಾರತ ವಿಶ್ವದ ಮುಂಚೂಣಿ ಜ್ಞಾನ ಕೇಂದ್ರವಾಗಬೇಕು ಹಾಗೂ ಉನ್ನತ ಶಿಕ್ಷಣ ವಲಯವು ಸಂಶೋಧನಾ ಕೇಂದ್ರಿತವಾಗಬೇಕು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಆಶಿಸಿದ್ದಾರೆ.

ನಳಂದ ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್ ಉದ್ಘಾಟಿಸಿ ಅವರು ಮಾತನಾಡಿದರು.

ಜ್ಞಾನವನ್ನು ಬೆಂಕಿಯಿಂದ ನಾಶಮಾಡಲಾಗದು ಎಂಬುದಕ್ಕೆ ನಳಂದವೇ ಸಾಕ್ಷಿಯಾಗಿದೆ. ಭಾರತ 21ನೇ ಶತಮಾನದಲ್ಲಿ ತನ್ನ ಪಾತ್ರ ವಹಿಸಲು ಹೆಜ್ಜೆ ಹಾಕುತ್ತಿದೆ. ಈ ಶತಮಾನವು ಏಷಿಯಾಗೆ ಸೇರಿದ್ದಾಗಿದೆ ಎಂದೂ ಪ್ರಧಾನಿ ಹೇಳಿದ್ದಾರೆ. ನಳಂದ ವಿಶ್ವವಿದ್ಯಾಲಯವನ್ನು 12ನೇ ಶತಮಾನದಲ್ಲಿ ದಾಳಿಕೋರರು ನಾಶಗೊಳಿಸಿದ್ದರು.

ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಿದ ನಂತರವೇ ಯಾವುದೇ ದೇಶ ಅಭಿವೃದ್ಧಿ ಹೊಂದಲು ಹಾಗೂ ಆರ್ಥಿಕ ಮತ್ತು ಸಾಂಸ್ಕೃತಿಕ ನಾಯಕತ್ವ ಪಡೆಯಲು ಸಾಧ್ಯ ಎಂದು ಮೋದಿ ಹೇಳಿದರು.

ನಮ್ಮ ದೇಶವೂ ಇತಿಹಾಸದಲ್ಲಿ ಈ ರೀತಿಯ ಸ್ಥಾನ ಹೊಂದಿತ್ತು. ನಳಂದ ಹಾಗೂ ವಿಕ್ರಮಶಿಲೆಗಳು ಸಮೃದ್ಧಿಯಾಗಿದ್ದವು. ಭಾರತ ಮತ್ತೆ (2ನೇ ಪುಟಕ್ಕೆ)

# ಭತ್ತದ ಬೆಂಬಲ ಬೆಲೆ 117 ರೂ. ಹೆಚ್ಚಳ

ನವದೆಹಲಿ, ಜೂ. 19 – ಕೇಂದ್ರ ಸರ್ಕಾರ 2024-25ರ ಮುಂಗಾರು ಸಾಲಿಗೆ ಭತ್ತದ ಬೆಂಬಲ ಬೆಲೆಯನ್ನು 117 ರೂ.ಗಳಷ್ಟು ಹೆಚ್ಚಿಸಿದ್ದು, 2,300 ರೂ.ಗಳಿಗೆ ನಿಗದಿ ಪಡಿಸಿದೆ.

ಕೇಂದ್ರ ಸರ್ಕಾರ ಈಗಾಗಲೇ ಸಾಕಷ್ಟು ಹೆಚ್ಚುವರಿ ಭತ್ತದ ದಾಸ್ತಾನು ಹೊಂದಿದೆ. ಆದರೂ, ಭತ್ತದ ಬೆಂಬಲ ಬೆಲೆಯನ್ನು ಹೆಚ್ಚಿಸಿದೆ. ಇದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಸರ್ಕಾರ ಮೂರನೇ ಅವಧಿಗೆ ಅಧಿಕಾರಕ್ಕೆ ಬಂದ ನಂತರ ತೆಗೆದುಕೊಂಡಿರುವ ಮೊದಲ ಪ್ರಮುಖ ನಿರ್ಧಾರವಾಗಿದೆ.

ಕೃಷಿ ವೆಚ್ಚ ಹಾಗೂ ಬೆಲೆಗಳ ಆಯೋಗದ ಶಿಫಾರಸ್ಸಿನ ಆಧಾರದ ಮೇಲೆ 14 ಮುಂಗಾರು ಬೆಳೆಗಳ ಕನಿಷ್ಠ ಬೆಂಬಲ ಬೆಲೆಗೆ ಅನುಮೋದನೆ ನೀಡಿರುವುದಾಗಿ ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ಬೆಂಬಲ ಬೆಲೆಗಾಗಿ ಕೇಂದ್ರ (4ನೇ ಪುಟಕ್ಕೆ)

## ಕೇಜ್ರಿವಾಲ್ ಕಸ್ಟಡಿ ಜು.3ರವರೆಗೆ ವಿಸ್ತರಣೆ

ನವದೆಹಲಿ, ಜೂ. 19 – ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ನ್ಯಾಯಾಂಗ ಕಸ್ಟಡಿಯನ್ನು ದೆಹಲಿ ನ್ಯಾಯಾಲಯ ಜುಲೈ 3ರವರೆಗೆ ವಿಸ್ತರಿಸಿದೆ.

ಕೇಜ್ರಿವಾಲ್ ನ್ಯಾಯಿಕ ಕಸ್ಟಡಿ ಅವಧಿ ಪೂರ್ಣಗೊಂಡಿತ್ತು. ಈ ಹಿನ್ನೆಲೆಯಲ್ಲಿ ಅವರನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ವಿಶೇಷ ನ್ಯಾಯಮೂರ್ತಿ ನಿಯಾಯ್ ಬಿಂದು ಅವರ ಎದುರು ಹಾಜರು ಪಡಿಸಲಾಗಿತ್ತು. ನಂತರ ನ್ಯಾಯಾಲಯ ಕಸ್ಟಡಿ ಅವಧಿಯನ್ನು ವಿಸ್ತರಿಸಿದೆ.

## ಜಾಗತಿಕ ಸಂಶೋಧನೆ: ರಾಜ್ಯದ ಕೊಡುಗೆ 22%

ಬೆಂಗಳೂರು, ಜೂ. 19-ಕರ್ನಾಟಕ ಅನ್ವೇಷಣೆಯಲ್ಲಿ ಮುಂಚೂಣಿಯಲ್ಲಿದೆ. ಜಾಗತಿಕವಾಗಿ ಸಂಶೋಧನೆ ಹಾಗೂ ಅಭಿವೃದ್ಧಿಯಲ್ಲಿ ರಾಜ್ಯದ ಕೊಡುಗೆ ಶೇ.22ರಷ್ಟಿದೆ ಎಂದು ಕರ್ನಾಟಕ ಐ.ಟಿ. ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಕರ್ನಾಟಕವಷ್ಟೇ ಅಲ್ಲದೇ ಭಾರತವನ್ನು ಕೌಶಲ್ಯ, ಸಂಶೋಧನೆ ಹಾಗೂ ಉತ್ಪಾದನಾ ತಾಣವನ್ನಾಗಿ ಮಾಡಲು ರಾಜ್ಯ ಸರ್ಕಾರ ಶ್ರಮಿಸುತ್ತಿದೆ ಎಂದವರು ಹೇಳಿದ್ದಾರೆ. (4ನೇ ಪುಟಕ್ಕೆ)

## ಮುಂಗಾರು ವಾಡಿಕೆಗಿಂತ ಶೇ.20ರಷ್ಟು ಕಡಿಮೆ

ನವದೆಹಲಿ ಜೂ. 19 – ಈ ವರ್ಷದ ಮುಂಗಾರು ಆರಂಭವಾದ ನಂತರ ಇಲ್ಲಿಯವರೆಗೆ ವಾಡಿಕೆಗಿಂತ ಶೇ.20ರಷ್ಟು ಕಡಿಮೆ ಮಳೆಯಾಗಿದೆ. ಇಡೀ ತಿಂಗಳಲ್ಲೂ ಮಳೆ ವಾಡಿಕೆಗಿಂತ ಕಡಿಮೆ ಇರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮುಂಗಾರು ವಾಡಿಕೆಗಿಂತ ಎರಡು ದಿನ ಮುಂಚೆ ಕೇರಳಕ್ಕೆ ತಲುಪಿತ್ತು. ನಂತರ ವೇಗವಾಗಿ ಹಲವು ರಾಜ್ಯಗಳಿಗೆ ಹರಡಿತ್ತು. ಆದರೆ, ಜೂನ್ 12ರಿಂದ 18ರ ನಡುವೆ ಮುಂಗಾರಿನಲ್ಲಿ ಗಣನೀಯ ಪ್ರಗತಿಯಾಗಿಲ್ಲ. (4ನೇ ಪುಟಕ್ಕೆ)

# ದರ್ಶನ್ ಅಭಿಮಾನಿ ಸಂಘಗಳ ಮೇಲೆ ಪೊಲೀಸ್ ಕಣ್ಣು

ಬೆಂಗಳೂರು, ಜೂ. 19- ರೇಣುಕಸ್ವಾಮಿ ಹತ್ಯೆ ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರು, ಈಗ ನಟ ದರ್ಶನ್ ಅಭಿಮಾನಿ ಸಂಘಗಳ ಪರಿಶೀಲನೆಗೆ ಮುಂದಾಗಿದ್ದಾರೆ.

ರೇಣುಕಸ್ವಾಮಿ ಹತ್ಯೆ ನಂತರ ಅಭಿಮಾನಿ ಗಳ ಸಂಘಗಳ ಚಟುವಟಿಕೆ ಶಂಕಾಸ್ಪದವಾಗಿದೆ. ಚಿತ್ರದುರ್ಗದ ಅಭಿಮಾನಿಗಳ ಸಂಘದ ಸಂಚಾಲಕ ರಾಘವೇಂದ್ರ ಅಲಿಯಾಸ್ ರಘು ಹಾಗೂ ಆತನ ಸಹಚರರು ರೇಣುಕಸ್ವಾಮಿ ಅಪಹರಣದಲ್ಲಿ ಭಾಗಿಯಾಗಿದ್ದರು ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ರಾಜ್ಯಾದ್ಯಂತ ಇರುವ ದರ್ಶನ್ ಅಭಿಮಾನಿಗಳ ಸಂಘದ ಪ್ರಮುಖ ಸದಸ್ಯರು ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾರೆಯೇ ಎಂಬ ಬಗ್ಗೆ ಪೊಲೀಸರು ಪರಿಶೀಲಿಸುತ್ತಿದ್ದಾರೆ.

ಹಣ ಬಲ ಹಾಗೂ ಪ್ರಭಾವ ಬಳಸಿಕೊಂಡು ದರ್ಶನ್ ಇವರನ್ನು ರಕ್ಷಿಸುತ್ತಿದ್ದಾರೆ ಎಂದು ಇನ್ನೊಬ್ಬ ಪೊಲೀಸ್ ಅಧಿಕಾರಿ ಹೇಳಿದ್ದಾರೆ. ದರ್ಶನ್ ಚಲನಚಿತ್ರ ಬಿಡುಗಡೆಯಾಗುವ ಸಂದರ್ಭದಲ್ಲಿ ಚಿತ್ರದ



ಪರವಾದ ಹವಾ ಎಬ್ಬಿಸಲು ದರ್ಶನ್, ನಿರ್ಮಾಪಕ, ನಿರ್ದೇಶಕ ಹಾಗೂ ಫೈನಾನ್ಷಿಯರ್‌ಗಳು ಅಭಿಮಾನಿ ಸಂಘಗಳ ಸದಸ್ಯರಿಗೆ ಹಣ ನೀಡುತ್ತಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ದರ್ಶನ್ ಚಲನಚಿತ್ರದ ಯಶಸ್ಸಿನಲ್ಲಿ ಪಾಲು ಪಡೆಯಲು ಅಭಿಮಾನಿ ಸಂಘಗಳು ಶ್ರಮಿಸುತ್ತಿದ್ದವು. ಹಲವು ಜಿಲ್ಲೆಗಳಲ್ಲಿ ಅಭಿಮಾನಿಗಳ ನಡುವೆ ಈ ಸಂಬಂಧ ಕೆಲವೊಮ್ಮೆ ಸ್ಪರ್ಧೆಗಳೂ ನಡೆಯುತ್ತಿದ್ದವು ಎನ್ನಲಾಗಿದೆ.

ದರ್ಶನ್ ಚಿತ್ರಗಳು ಬೇರೆ ನಟರ ಚಿತ್ರದ ಜೊತೆಗೇ ಬಿಡುಗಡೆಯಾದ ಸಂದರ್ಭ ದಲ್ಲಿ, ದರ್ಶನ್ ಅಭಿಮಾನಿಗಳು ಪ್ರತಿಸ್ಪರ್ಧಿ ನಟರ ಜೊತೆ ಸಂಘರ್ಷಕ್ಕೂ ಮುಂದಾಗುತ್ತಿದ್ದರು ಎಂದು ಮೂಲಗಳು ಹೇಳಿವೆ.

ರಾಜ್ಯದ ವಿವಿಧೆಡೆ (2ನೇ ಪುಟಕ್ಕೆ)

## ಹತ್ಯೆ ಪ್ರಕರಣದಿಂದ ತಪ್ಪಿಸಿಕೊಳ್ಳಲು 30 ಲಕ್ಷ ರೂ. : ದರ್ಶನ್ ತಪ್ಪೊಪ್ಪಿಗೆ

ಬೆಂಗಳೂರು, ಜೂ. 19 - ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಭಾಗಿಯಾಗಿರುವುದಾಗಿ ನಟ ದರ್ಶನ್ ಒಪ್ಪಿಕೊಂಡಿರುವುದಾಗಿ ನ್ಯಾಯಾಲಯಕ್ಕೆ ಸಲ್ಲಿಸಲಿರುವ ರಿಮಾಂಡ್ ಕಾಪಿಯಲ್ಲಿ ಪೊಲೀಸರು ತಿಳಿಸಿದ್ದಾರೆ.

ಪ್ರಕರಣ ತನ್ನ ಮೇಲೆ (2ನೇ ಪುಟಕ್ಕೆ)

## ಎಸ್‌ಪಿಪಿ ಬದಲಾವಣೆಗೆ ಒತ್ತಡವಿಲ್ಲ: ಸಿದ್ದರಾಮಯ್ಯ

ಬೆಂಗಳೂರು, ಜೂ. 19 - ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಮೊಕದ್ದಮೆಯ ವಿಶೇಷ ಸರ್ಕಾರಿ ಅಭಿಯೋಜಕರ (ಎಸ್‌ಪಿಪಿ) ಬದಲಾವಣೆಗೆ ನನ್ನ ಮೇಲೆ ಯಾವ ಸಚಿವರ ಅಥವಾ ಶಾಸಕರ ಒತ್ತಡವಿಲ್ಲ, ಒತ್ತಡ ಹಾಕಿದರೆ ಕೇಳುವುದೂ ಇಲ್ಲ ಎಂದು ಮುಖ್ಯಮಂತ್ರಿ (4ನೇ ಪುಟಕ್ಕೆ)

# ನೆಟ್ ಪರೀಕ್ಷೆ ರದ್ದು; ಸಿಬಿಐ ತನಿಖೆಗೆ ನಿರ್ಧಾರ

ನವದೆಹಲಿ, ಜೂ. 19 – ಯುಜಿಸಿ - ನೆಟ್ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವ ಮಾಹಿತಿಯ ಹಿನ್ನೆಲೆಯಲ್ಲಿ, ಈ ಪರೀಕ್ಷೆಯನ್ನು ರದ್ದುಗೊಳಿಸಲಾಗಿದೆ ಎಂದು ಕೇಂದ್ರ ಶಿಕ್ಷಣ ಸಚಿವಾಲಯ ತಿಳಿಸಿದೆ.

ನೆಟ್ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವ ಬಗ್ಗೆ ರಾಷ್ಟ್ರೀಯ ಸೈಬರ್ ಅಪರಾಧ ಬೆದರಿಕೆ ವಿಶ್ಲೇಷಣಾ ಘಟಕ ವರದಿ ನೀಡಿದೆ. ಈ ವರದಿ ಆಧರಿಸಿ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಸಚಿವಾಲಯ ಹೇಳಿದೆ.

ಪರೀಕ್ಷೆಯಲ್ಲಿ ಉನ್ನತ ಮಟ್ಟದ ಪಾರದರ್ಶಕತೆ ಹಾಗೂ ಪಾವಿತ್ರ್ಯತೆ ಕಾಯ್ದುಕೊಳ್ಳುವ ಉದ್ದೇಶದಿಂದ ಜೂನ್‌ನಲ್ಲಿ ನಡೆದ ಯುಜಿಸಿ - ನೆಟ್ ಪರೀಕ್ಷೆ ರದ್ದುಗೊಳಿಸಲಾಗಿದೆ. ಹೊಸದಾಗಿ ಪರೀಕ್ಷೆ ನಡೆಸಲಾಗುವುದು. ಅಲ್ಲದೇ ಅವ್ಯವಹಾರ ನಡೆದ ಬಗ್ಗೆ ಸಿ.ಬಿ.ಐ. ತನಿಖೆ ನಡೆಸಲಾಗುವುದು ಎಂದು ಸಚಿವಾಲಯ ಹೇಳಿದೆ.

ಕಳೆದ ಜೂನ್ 18ರಂದು ಒಂದೇ ದಿನದಂದು ನೆಟ್ ಪರೀಕ್ಷೆ ನಡೆಸಲಾಗಿತ್ತು. 11 ಲಕ್ಷ ಅಭ್ಯರ್ಥಿಗಳು ಪರೀಕ್ಷೆಗೆ ನೋಂದಾಯಿಸಿದ್ದರು. ಕಿರಿಯ ಸಂಶೋಧನಾ (2ನೇ ಪುಟಕ್ಕೆ)

# ಹೈಸ್ಕೂಲ್ ಮೈದಾನದಲ್ಲಿ ನಾಳೆ ಅಂತರರಾಷ್ಟ್ರೀಯ ಯೋಗ ದಿನಾಚರಣೆ



### 5 ರಿಂದ 6 ಸಾವಿರ ಯೋಗಪಟುಗಳು ಭಾಗಿಯಾಗುವ ನಿರೀಕ್ಷೆ

ದಾವಣಗೆರೆ, ಜೂ.19 - ಸ್ವಂತ ಮತ್ತು ಸಮಾಜಕ್ಕಾಗಿ ಯೋಗ ಎಂಬ ಘೋಷವಾಕ್ಯದಡಿ ಜೂನ್ 21 ರಂದು ಅಂತ ರ ರಾಷ್ಟ್ರೀಯ ಯೋಗ ದಿನಾಚರಣೆಯನ್ನು ನಗರದ ಹೈಸ್ಕೂಲ್ ಮೈದಾನದಲ್ಲಿ ಆಚರಿಸಲಾಗುತ್ತಿದೆ. 5 ರಿಂದ 6 ಸಾವಿರ ಜನರು ಈ ಕಾರ್ಯಕ್ರಮದಲ್ಲಿ ಭಾಗಿಯಾಗುವ ನಿರೀಕ್ಷೆ ಇದೆ ಎಂದು ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಯೋಗ ದಿನಾಚರಣೆ ಕುರಿತು ಮಾಹಿತಿ ನೀಡಿದ ಅವರು, ಅಂದು ಬೆಳಿಗ್ಗೆ 5.30ರಿಂದ 6.30ರವರೆಗೆ ಬ್ರಹ್ಮಾಕುಮಾರಿ ಸಂಸ್ಥೆಯಿಂದ ಧ್ಯಾನ ಕಾರ್ಯಕ್ರಮ ನಡೆಯಲಿದೆ. 6.30ರಿಂದ 7ರವರೆಗೆ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ. ನಂತರ 7ರಿಂದ 7.45ರವರೆಗೆ ಸಾಮಾನ್ಯ ಯೋಗ ಶಿಷ್ಟಾಚಾರದಂತೆ ಯೋಗಾಸನ ಪ್ರದರ್ಶನ ಕಾರ್ಯಕ್ರಮ ನಡೆಯಲಿದೆ ಎಂದರು.

ಯೋಗ ದಿನಾಚರಣೆಯನ್ನು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಯುಷ್ ಇಲಾಖೆ ಸೇರಿದಂತೆ ಎಲ್ಲಾ ಇಲಾಖೆಗಳು, ತಪೋವನ ಆಯುರ್ವೇದ, ಯೋಗ ಮತ್ತು ನ್ಯಾಚುರೋಪತಿ ಮೆಡಿಕಲ್ ಕಾಲೇಜು, ಅಶ್ವಿನಿ ಆಯುರ್ವೇದ ಮೆಡಿಕಲ್ ಕಾಲೇಜು, ಎನ್.ಸಿ.ಸಿ, ಎನ್.ಎಸ್.ಎಸ್, ಪ್ರಜಾಪಿತ ಬ್ರಹ್ಮಾಕುಮಾರಿ ವಿಶ್ವವಿದ್ಯಾನಿಲಯ, ಪತಂಜಲಿ ಯೋಗ ಶಿಕ್ಷಣ ಸಮಿತಿ, ಪತಂಜಲಿ ಯೋಗ ಸಮಿತಿ ಇವರ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದರು.

ಹೈಸ್ಕೂಲ್ ಮೈದಾನದಲ್ಲಿ ಜಿಲ್ಲಾ ಮಟ್ಟದ ಕಾರ್ಯಕ್ರಮ ನಡೆಯಲಿದೆ. ಎಲ್ಲಾ ತಾಲ್ಲೂಕುಗಳಲ್ಲಿ ತಾಲ್ಲೂಕು ಮಟ್ಟದ ಕಾರ್ಯಕ್ರಮ ನಡೆಯಲಿದೆ ಎಂದವರು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಯೋಗ ಒಕ್ಕೂಟದ ಅಧ್ಯಕ್ಷ ವಾಸುದೇವ ರಾಯ್ಕರ್, ಹೈಸ್ಕೂಲ್ ಮೈದಾನದಲ್ಲಿ ನಡೆಯಲಿರುವ ಕಾರ್ಯಕ್ರಮದ ಸಾನ್ನಿಧ್ಯವನ್ನು ತರಳಬಾಳು ಜಗದ್ಗುರು ಶ್ರೀ (4ನೇ ಪುಟಕ್ಕೆ)

## ಅರಬಗಟ್ಟೆ, ಸೌರ ಘಟಕ ಯೋಜನೆಗೆ ತಾತ್ಕಾಲಿಕ ತಡೆ


ಹೊನ್ನಾಳಿ, ಜೂ. 19 - ತಾಲ್ಲೂಕು ಅರಬಗಟ್ಟೆ ಗ್ರಾಮದಲ್ಲಿ ಸೌರ ಘಟಕ ನಿರ್ಮಾಣಕ್ಕೆ ಸ್ಥಳೀಯರಿಂದ ವಿರೋಧ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಯೋಜನೆಯನ್ನು ತಾತ್ಕಾಲಿಕವಾಗಿ ತಡೆಯಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪಿಎಂ - ಕುಸುಮ್ ಯೋಜನೆಯಡಿ ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಒದಗಿಸಲು ಸೌರ ಘಟಕ ನಿರ್ಮಾಣಕ್ಕೆ ಮುಂದಾಗಲಾಗಿತ್ತು. ಆದರೆ, ಸ್ಥಳೀಯರು ವಿರೋಧಿಸಿರುವ ಕಾರಣ ತಾತ್ಕಾಲಿಕವಾಗಿ ಯೋಜನೆಯನ್ನು ತಡೆಯಲಾಗಿದೆ ಎಂದರು.

ರೈತರ ಆಕ್ಷೇಪಣೆ ಬಗ್ಗೆ ಪರಿಶೀಲಿಸಿ ಸರ್ಕಾರಕ್ಕೆ ವರದಿ ಕಳಿಸಲಾಗುವುದು. ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

ಹೆಬ್ಬಾಳು ಗ್ರಾಮದಲ್ಲಿ ಪೌಲ್ಟ್ರಿ ಫಾರಂಗಳಿಂದಾಗಿ ನೊಣಗಳ ಹಾವಳಿಯಾಗಿರುವ ಹಿನ್ನೆಲೆಯಲ್ಲಿ, ಮುಂದಿನ ವಾರ ಪೌಲ್ಟ್ರಿ ಫಾರಂಗಳ ಮಾಲೀಕರ ಸಭೆ ಕರೆಯಲಾಗಿದೆ ಎಂದವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. (4ನೇ ಪುಟಕ್ಕೆ)

## ಡಾ. ಸುರೇಶ್ ಖಟಾವ್‌ಕರ್ ನಿಧನ



ಬೆಂಗಳೂರು ವಾಸಿ
**ಡಾ. ಸುರೇಶ ಖಟಾವ್‌ಕರ್ (69)**
ಇವರು ದಿನಾಂಕ 19.6.2024ರ ಬುಧವಾರ ಮಧ್ಯಾಹ್ನ 1.50ಕ್ಕೆ ಬೆಂಗಳೂರಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಓರ್ವ ಪುತ್ರ, ಇಬ್ಬರು ಪುತ್ರಿಯರು ಮತ್ತು ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 20.6.2024ರ ಗುರುವಾರ 12 ಗಂಟೆಗೆ ಬೆಂಗಳೂರಿನ ಬನಶಂಕರಿ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.
**ದುಃಖತಪ್ತರು :**
**ಖಟಾವ್‌ಕರ್ ಕುಟುಂಬ ವರ್ಗ, ಮೊ : 9743209923**


## ಬೇಕಾಗಿದ್ದಾರೆ

**OPTOMETRIST**
ಬೇಕಾಗಿದ್ದಾರೆ
ಕನಿಷ್ಠ ಒಂದು ವರ್ಷದ ಅನುಭವವಿರುವ ಮೂರು ಜನ ಬೇಕಾಗಿದ್ದಾರೆ
ಸಂಪರ್ಕಿಸಿ :
**ಆಪ್ಟಿಕಲ್ ಪ್ಯಾರಡೈಸ್**
ಎಂ.ಎಂ.ಕೆ. ಕಾಂಪ್ಲೆಕ್ಸ್, ಎವಿಕೆ ಕಾಲೇಜ್ ರೋಡ್, ದಾವಣಗೆರೆ.
**ಮೊ. : 88614 29090**



# ವಿದ್ಯಾರ್ಥಿಗಳು ಮೌಢ್ಯದಲ್ಲಿ ನಂಬಿಕೆ ಇಡಬಾರದು : ಸಿದ್ದರಾಮಯ್ಯ

ಬೆಂಗಳೂರು, ಜೂ. 19 - ವಿದ್ಯಾವಂತರಲ್ಲೇ ಜಾತಿ ಪ್ರಜ್ಞೆ ಹೆಚ್ಚಾಗುತ್ತಿದೆ. ಡಾಕ್ಟರ್ ಓದಿದವರೂ ಮೌಢ್ಯ ಬಿಟ್ಟಿಲ್ಲ. ಹಣೆಬರಹ, ಕರ್ಮ ಸಿದ್ಧಾಂತದಲ್ಲಿ ನಂಬಿಕೆ ಇಟ್ಟುಕೊಂಡಿದ್ದಾರೆ. ವಿದ್ಯಾರ್ಥಿಗಳು ಮೌಢ್ಯದಲ್ಲಿ ನಂಬಿಕೆ ಇಡಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಕರೆ ನೀಡಿದ್ದಾರೆ.

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಮಾತನಾಡಿದ ಅವರು, ದಲಿತ ಸಂಘರ್ಷ ಸಮಿತಿ ನಡೆಸಿದ 'ನಮಗೆ ಸಾರಾಯಿ ಅಂಗಡಿ ಬೇಡ, ವಸತಿ ಶಾಲೆ ಬೇಕು' ಎನ್ನುವ ಹೋರಾಟದಿಂದ ಪ್ರೇರಿತನಾಗಿ ಮೊದಲ ಬಜೆಟ್ ಮಂಡಿಸುವ ವೇಳೆ ಗ್ರಾಮೀಣ ಭಾಗದಲ್ಲಿ ಮೊರಾರ್ಜಿ ಶಾಲೆಗಳನ್ನು ಆರಂಭಿಸಿದೆ ಎಂದರು.

ಅಂದಿನಿಂದ ನಿರಂತರವಾಗಿ ಮೊರಾರ್ಜಿ ವಸತಿ ಶಾಲೆಗಳನ್ನು ತೆರೆಯುತ್ತಲೇ ಇದ್ದೇನೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ 833 ವಸತಿ ಶಾಲೆಗಳಿವೆ. ಅಲ್ಪಸಂಖ್ಯಾತರ ಇಲಾಖೆಯದೂ ಸೇರಿ ಒಟ್ಟು 946 ವಸತಿ ಶಾಲೆಗಳಿವೆ ಎಂದವರು ಹೇಳಿದರು.

ಕೆಲವು ಹೋಬಳಿಗಳಲ್ಲಿ ಒಂದಕ್ಕಿಂತ ಹೆಚ್ಚು ವಸತಿ ಶಾಲೆಗಳಿವೆ, ಈ ವರ್ಷ 20 ವಸತಿ ಶಾಲೆಗಳನ್ನು ಆರಂಭಿಸಲು ಅನುಮತಿ ನೀಡಿದ್ದೇನೆ, ಹೋಬಳಿಗೊಂದು ವಸತಿ ಶಾಲೆ ನನ್ನ ಗುರಿ ಮತ್ತು ಉದ್ದೇಶವಾಗಿದೆ ಎಂದು ತಿಳಿಸಿದರು.

ಪೋಷಕರು, ಶಿಕ್ಷಕರು ಮೊದಲು ಕಂದಾಚಾರ, ಮೌಢ್ಯದಿಂದ ಹೊರಬರಬೇಕು, ಆಗ ಮಕ್ಕಳೂ ವೈಜ್ಞಾನಿಕವಾಗಿ ಬೆಳೆದು ಉತ್ತಮ ಭವಿಷ್ಯ ರೂಪಿಸಿಕೊಳ್ಳುತ್ತಾರೆ, ಮಕ್ಕಳು ಅಲ್ಪಮಾನವರಾಗದಂತೆ ಕಾಪಾಡುವ ಜವಾಬ್ದಾರಿ ಶಿಕ್ಷಕರು, ಪೋಷಕರ ಮೇಲಿದೆ ಎಂದು ಹೇಳಿದರು.

ಸರ್ಕಾರಿ ವಸತಿ ಶಾಲೆಗಳ ಮಕ್ಕಳು ಈ ಬಾರಿ ಶೇ.96 ರಷ್ಟು ಫಲಿತಾಂಶ ಪಡೆದಿದ್ದಾರೆ, ಮುಂದಿನ ಬಾರಿ ಶೇ.100 ರಷ್ಟು ಅಂಕ ಪಡೆಯಬೇಕು ಎಂದು ಕಿವಿಮಾತು ಹೇಳಿದರು.

# ವಿಧಿ ವಿಜ್ಞಾನ ಸೌಲಭ್ಯಕ್ಕೆ 2,254 ಕೋಟಿ ರೂ.

ನವದೆಹಲಿ, ಜೂ. 19 – ದೇಶದಲ್ಲಿ ವಿಧಿ ವಿಜ್ಞಾನ ಮೂಲಭೂತ ಸೌಲಭ್ಯ ಕಲ್ಪಿಸಲು 2,254.43 ಕೋಟಿ ರೂ.ಗಳ ಯೋಜನೆಗೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ. ಈ ಯೋಜನೆಯ ಮೂಲಕ ಹೊಸ ಕ್ಯಾಂಪಸ್‌ಗಳು ಹಾಗೂ ಪ್ರಯೋಗಾಲಯಗಳನ್ನು ರೂಪಿಸಲಾಗುವುದು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ನಡೆದ ಸಂಪುಟ ಸಭೆಯಲ್ಲಿ ಯೋಜನೆಗೆ ಸಮ್ಮತಿ ದೊರೆತಿದೆ. ರಾಷ್ಟ್ರೀಯ ವಿಧಿ ವಿಜ್ಞಾನ ಮೂಲಭೂತ ಸೌಲಭ್ಯ ವಿಸ್ತರಣೆ ಯೋಜನೆ ಮೂಲಕ 2024-29ರ ಅವಧಿಯಲ್ಲಿ 2,254.43 ಕೋಟಿ ರೂ. ವೆಚ್ಚ ಮಾಡಲಾಗುವುದು.

# 'ಯೋಗ' ಯಾವುದೇ ಒಂದು ಧರ್ಮಕ್ಕೆ ಸೀಮಿತ ಆಗುವುದು ಬೇಡ

## ಚಿತ್ರದುರ್ಗ ಬೃಹನ್ಮಠದ ಯೋಗ ನಡಿಗೆ ಕಾರ್ಯಕ್ರಮದಲ್ಲಿ ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ



ಚಿತ್ರದುರ್ಗ, ಜೂ. 19 - ವ್ಯಕ್ತಿಯ ಮನಸ್ಸು ಮತ್ತು ದೇಹದ ಮೇಲೆ ಧನಾತ್ಮಕ ಪರಿಣಾಮ ಬೀರುವ ಯೋಗವನ್ನು ಯಾವುದೇ ಒಂದು ಧರ್ಮಕ್ಕೆ ಸೀಮಿತಗೊಳಿಸಬಾರದು ಎಂದು ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮಿಗಳು ಹೇಳಿದರು.

ನಗರದ ಶ್ರೀ ಮುರುಘ ರಾಜೇಂದ್ರ ಬೃಹನ್ಮಠದ ವತಿಯಿಂದ ನಡೆದ ಯೋಗ ನಡಿಗೆಯಲ್ಲಿ ಭಾಗವಹಿಸಿ ಶ್ರೀಗಳು ಮಾತನಾಡಿದರು.

ಇಂದಿನ ದಿನಮಾನಗಳಲ್ಲಿ ಒತ್ತಡದ ಬದುಕಿನಿಂದ ಬಿಡುಗಡೆ ಹೊಂದಲು ಒಂದಷ್ಟು ಸಮಯ ನಮ್ಮ ಆರೋಗ್ಯದ ಬಗ್ಗೆ ಕಾಳಜಿ ಇಟ್ಟುಕೊಂಡು ಬದುಕಬೇಕಿದೆ. ಯೋಗವು ಆರೋಗ್ಯಕರ ದೇಹದಲ್ಲಿ, ಆರೋಗ್ಯಕರ ಮನಸ್ಸಿನ ಗುರಿ ಹೊಂದುವುದು ಜೀವನ ವಿಧಾನವಾಗಿದೆ. ಇಂದಿನ ಯೋಗ ನಡಿಗೆಗೆ ಒಂದಷ್ಟು ಅರ್ಥ ಸಿಕ್ಕಿದೆ ಎಂದರು.

ಶ್ರೀ ಮುರುಘಾಮಠದ ಆಡಳಿತ ಮಂಡಳಿ ಸದಸ್ಯ ಡಾ. ಬಸವಕುಮಾರ ಸ್ವಾಮಿಗಳು ಮಾತನಾಡಿ, ಯೋಗವೆಂದರೆ ದೇಹವನ್ನು ಬಗ್ಗಿಸುವುದು ಅಥವಾ ತಿರುಗಿಸುವುದು ಮತ್ತು ಉಸಿರನ್ನು ಹಿಡಿದಿಟ್ಟುಕೊಳ್ಳುವುದು ಮಾತ್ರವಲ್ಲ. ನಮ್ಮ ವಾಸ್ತವವನ್ನು ನೋಡುವ ಮತ್ತು ಅನುಭವಿಸುವ ಸ್ಥಿತಿಗೆ ನಮ್ಮನ್ನು ತರಲು ಇದೊಂದು ವಿಧಾನವಾಗಿದೆ. ಮೆದುಳಿನ ಕಾರ್ಯವನ್ನು ಸುಧಾರಿಸುತ್ತದೆ. ರಕ್ತದೊತ್ತಡವನ್ನು ನಿಯಂತ್ರಣದಲ್ಲಿಡುತ್ತದೆ. ಆತಂಕ, ಹೃದಯ ಸಂಬಂಧಿ ಕಾಯಿಲೆಗಳ ಅಪಾಯವನ್ನು ಕಡಿಮೆ ಮಾಡುತ್ತದೆ. ದೇಹ ಮತ್ತು ಮನಸ್ಸಿನ ನಡುವೆ ಸಾಮರಸ್ಯವನ್ನು ಆದರ್ಶೀಕರಿಸುವಲ್ಲಿ ನೆರವಾಗುತ್ತದೆ ಎಂದರು.

ಹೊಳಲ್ಕೆರೆ ಶಾಸಕ ಎಂ. ಚಂದ್ರಪ್ಪ ಮಾತನಾಡಿ, ಪ್ರಪಂಚಕ್ಕೆ ಮಾದರಿಯಾದುದು ಈ ಯೋಗ. ಪ್ರಪಂಚದಾದ್ಯಂತ ಯೋಗ ದಿನ ಆಚರಿಸಲಾಗುತ್ತಿದೆ. ಪೂಜ್ಯರ ನೇತೃತ್ವದಲ್ಲಿ ಯೋಗ ನಡಿಗೆ ಜಾಥಾದಲ್ಲಿ ಭಾಗವಹಿಸಿದ್ದು ನನ್ನ ಪುಣ್ಯ. ಉತ್ತಮ ಆರೋಗ್ಯಕ್ಕಾಗಿ ಯೋಗ ಮತ್ತು ನಡಿಗೆ ಮಾಡಬೇಕು. ಇಂತಹ ಜಾಗೃತಿ ಕಾರ್ಯಕ್ರಮಗಳು ಇತರರಿಗೆ ಪ್ರೇರಣೆ ಆಗಿದೆ ಎಂದರು.

ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಮಾತನಾಡಿ, ಯೋಗ ಭಾರತದ ಸಂಸ್ಕೃತಿಯ ಪ್ರತೀಕ. ದೇಹ ಮತ್ತು ಮನಸ್ಸು ಒಂದಾಗುವ ಪ್ರಕ್ರಿಯೆಯೇ ಯೋಗ. ಅದಕ್ಕೆ ಇಂದಿನ ಯೋಗ ನಡಿಗೆಯೇ ಸಾಕ್ಷಿ ಎಂದು ಹೇಳಿದರು.

ಜಿಲ್ಲಾ ಕಾಂಗ್ರೆಸ್ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಂ.ಕೆ ತಾಜ್‌ಪೀರ್ ಮಾತನಾಡಿ, ಯೋಗ ಒಂದು ದಿನಕ್ಕೆ ಸೀಮಿತ ಆಗಬಾರದು. ನಿತ್ಯವೂ ಇಂತಹ ಉತ್ತಮ ಹವ್ಯಾಸ ರೂಢಿಸಿಕೊಳ್ಳಬೇಕು. ನಮ್ಮ ಆರೋಗ್ಯ ನಮ್ಮ ಕೈಲಿದೆ. ಚಟಗಳು ನಮ್ಮನ್ನು ಅನಾರೋಗ್ಯದ ಕಂದಕಕ್ಕೆ ತಳ್ಳುತ್ತವೆ. ಎಲ್ಲರೂ ದುಶ್ಚಟಗಳಿಂದ ದೂರವಿರಬೇಕು. ಇದು ಕುಟುಂಬಕ್ಕೆ ಮತ್ತು ಸಮಾಜಕ್ಕೆ ಒಳ್ಳೆಯದು ಎಂದರು. ಕೆಡಿಪಿ ಸದಸ್ಯ ಕೆ.ಸಿ. ನಾಗರಾಜು ಮಾತನಾಡಿದರು.

ಇದಕ್ಕು ಮುನ್ನ ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ಪೂರ್ವಭಾವಿಯಾಗಿ ಆಯೋಜಿಸಿದ್ದ ಯೋಗ ನಡಿಗೆ (ಜಾಥಾ)ಯನ್ನು ಕಬೀರಾನಂದಾಶ್ರಮದ ಶ್ರೀ ಶಿವಲಿಂಗಾನಂದ ಸ್ವಾಮಿಗಳು ನಗಾರಿ ಬಾರಿಸುವುದರ ಮೂಲಕ ವಿಧ್ಯುಕ್ತವಾಗಿ ಚಾಲನೆ ನೀಡಿದರು.

ಶ್ರೀ ಬಸವ ಮಾಚಿದೇವ ಸ್ವಾಮೀಜಿ, ಗುರುಮಠಕಲ್ ಶ್ರೀ ಶಾಂತವೀರ ಗುರು ಮುರುಘರಾಜೇಂದ್ರ ಸ್ವಾಮೀಜಿ, ಶ್ರೀ ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಶ್ರೀ ಬಸವ ನಾಗಿದೇವ ಸ್ವಾಮೀಜಿ, ಸಾಯಿಗಾಂವ ಶ್ರೀ ಶಿವಾನಂದ ಸ್ವಾಮೀಜಿ, ಶ್ರೀ ಇಮ್ಮಡಿ ಬಸವ ಕೇತೇಶ್ವರ ಸ್ವಾಮೀಜಿ, ಶ್ರೀ ಬಸವಮೂರ್ತಿ ಕುಂಬಾರ ಗುಂಡಯ್ಯ ಸ್ವಾಮೀಜಿ ಬಳ್ಳೇಕಟ್ಟೆ, ಶ್ರೀ ಬಸವ ಕುಂಬಾರ ಗುಂಡಯ್ಯ ಸ್ವಾಮೀಜಿ ತೆಲಸಂಗ, ಶ್ರೀ ತಿಪ್ಪೇರುದ್ರ ಸ್ವಾಮೀಜಿ, ಸಂಸದ ಗೋವಿಂದ ಎಂ. ಕಾರಜೋಳ, ನಗರಸಭೆ ಆಯುಕ್ತರಾದ ಶ್ರೀಮತಿ ರೇಣುಕ, ಕೆಇಬಿ ಷಣ್ಮುಖಪ್ಪ, ಸುರೇಶ್‌ಬಾಬು, ಸಿದ್ದವ್ವನಹಳ್ಳಿ ಪರಮೇಶ್, ಡಿ.ಎಸ್. ಮಲ್ಲಿಕಾರ್ಜುನ್, ಪಿ.ವೀರೇಂದ್ರಕುಮಾರ್, ರಾಜಕೀಯ ಧುರೀಣರು, ಅಧಿಕಾರಿಗಳು, ವಿವಿಧ ಸಮಾಜಗಳ ಸಂಘ-ಸಂಸ್ಥೆಗಳ ಮುಖಂಡರು, ಶ್ರೀಮಠ ಹಾಗೂ ಎಸ್.ಜೆ.ಎಂ. ವಿದ್ಯಾಪೀಠದ ಶಾಲಾ-ಕಾಲೇಜುಗಳ ನೌಕರ ವರ್ಗದವರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಜಾಥಾವು ನಗರದ ನೀಲಕಂಠೇಶ್ವರಸ್ವಾಮಿ ದೇವಸ್ಥಾನದಿಂದ ಬೆಳಗ್ಗೆ 7.30ಕ್ಕೆ ಆರಂಭಗೊಂಡು ಒನಕೆ ಓಬವ್ವ ಸರ್ಕಲ್‌ನಲ್ಲಿ ಸಮಾಪ್ತಿಗೊಂಡಿತು.

# ವಾರಣಾಸಿ ವಿಮಾನ ನಿಲ್ದಾಣ ಅಭಿವೃದ್ಧಿಗೆ 2,869 ಕೋಟಿ ರೂ.

ನವದೆಹಲಿ, ಜೂ. 19 – ವಾರಣಾಸಿ ವಿಮಾನ ನಿಲ್ದಾಣದ ಅಭಿವೃದ್ಧಿಗೆ 2,869.65 ಕೋಟಿ ರೂ.ಗಳ ಯೋಜನೆಗೆ ಕೇಂದ್ರ ಸಂಪುಟ ಅನುಮೋದನೆ ನೀಡಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಲೋಕಸಭಾ ಕ್ಷೇತ್ರವಾಗಿರುವ ವಾರಣಾಸಿಯಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಿದ್ದು, ಅದು ವರ್ಷಕ್ಕೆ 33 ಲಕ್ಷ ಪ್ರಯಾಣಿಕರ ನಿರ್ವಹಿಸುವ ಸಾಮರ್ಥ್ಯ ಹೊಂದಿದೆ. ಇದನ್ನು 99 ಲಕ್ಷ ಪ್ರಯಾಣಿಕರ ಸಾಮರ್ಥ್ಯಕ್ಕೆ ವಿಸ್ತರಿಸಲಾಗುವುದು.

# ಗಾಂಜಾ ಮಾರುತ್ತಿದ್ದ ಬಂಧನ

ದಾವಣಗೆರೆ, ಜೂ.19- ನಗರದ ಎಸ್.ಎಸ್ ಹೈಟೆಕ್ ಬಡಾವಣೆಯ ರಸ್ತೆಯಲ್ಲಿ ಕಾನೂನು ಬಾಹಿರವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ 3 ಜನ ಆಪಾದಿತರನ್ನು ಕೆಟಿಜೆ ನಗರ ಪೊಲೀಸರು ಬಂಧಿಸಿದ್ದಾರೆ. ಬಂಧಿತರಿಂದ 1.30 ಲಕ್ಷ ಮೌಲ್ಯದ ಗಾಂಜಾ ಮತ್ತು ಕೃತ್ಯಕ್ಕೆ ಬಳಸಿದ್ದ ಬೈಕ್ ವಶಪಡಿಸಿಕೊಳ್ಳಲಾಗಿದೆ. ಮಹಮದ್ ಅಜ್ಗರ್, ಸುಭಾನ್ ವುಲ್ಲಾ ಯಾನೆ ಶಾಹೀದ್ ಅಫ್ರಿದಿ, ಜಾಫರ್ ಸಾಧಿಕ್ ಇವರು ಚಿತ್ರದುರ್ಗ ಮೂಲದ ಆರೋಪಿಗಳಾಗಿದ್ದಾರೆ. ಕಾರ್ಯಾಚರಣೆಯಲ್ಲಿ ಭಾಗವಹಿಸಿದ ಕೆಟಿಜೆ ನಗರ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕ ಸುನೀಲ್ ಕುಮಾರ್ ಮತ್ತು ಸಿಬ್ಬಂದಿ ಎಎಸ್‌ಐ ಈರಣ್ಣ, ಹರೀಶ್ ನಾಯ್ಕ್, ಪುರುಷೋತ್ತಮ, ಮಂಜಪ್ಪ, ಶಿವರಾಜ, ಹರೀಶ್ ಅವರ ಕಾರ್ಯದ ಬಗ್ಗೆ ಎಸ್ಪಿ ಉಮಾ ಪ್ರಶಾಂತ್ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

# ನೆಟ್ ರದ್ದು; ಸಿಬಿಐ ತನಿಖೆಗೆ ನಿರ್ಧಾರ

**(1ನೇ ಪುಟದಿಂದ)** ಫೆಲೋಶಿಪ್, ಸಹಾಯಕ ಪ್ರಾಧ್ಯಾಪಕರ ಹುದ್ದೆ ನೇಮಕಾತಿ ಹಾಗೂ ವಿಶ್ವವಿದ್ಯಾಲಯಗಳ ಪಿ.ಹೆಚ್.ಡಿ. ಪ್ರವೇಶಕ್ಕಾಗಿ ನೆಟ್ ಪರೀಕ್ಷೆ ನಡೆಸಲಾಗುತ್ತದೆ. ವೈದ್ಯಕೀಯ ಪ್ರವೇಶಕ್ಕೆ ನಡೆಸಲಾಗುವ ನೀಟ್‌ನಲ್ಲಿ ಅಕ್ರಮವಾಗಿದೆ ಎಂಬ ವಿವಾದ ಭುಗಿಲೆದ್ದಿರುವ ನಡುವೆಯೇ ಈ ಬೆಳವಣಿಗೆಯಾಗಿದೆ.

# ಕ್ಷೇತ್ರದಲ್ಲಿ ಆಗಬೇಕಾದ ಯೋಜನೆಗಳ ಜಾರಿಗೆ ಹೋರಾಟ

## ರಾಜನಹಳ್ಳಿ ಮಠದಲ್ಲಿ ಶ್ರೀಗಳ ಆಶೀರ್ವಾದ ಪಡೆದ ಡಾ. ಪ್ರಭಾ ಮಲ್ಲಿಕಾರ್ಜುನ್ ಭರವಸೆ



ಮಲೇಬೆನ್ನೂರು, ಜೂ. 19- ರಾಜನಹಳ್ಳಿಯ ವಾಲ್ಮೀಕಿ ಗುರುಪೀಠಕ್ಕೆ ಮಂಗಳವಾರ ಸಾಯಂಕಾಲ ದಾವಣಗೆರೆ ಲೋಕಸಭಾ ಕ್ಷೇತ್ರದ ನೂತನ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಆಗಮಿಸಿ, ಶ್ರೀ ವಾಲ್ಮೀಕಿ ಪ್ರಸನ್ನಾನಂದ ಶ್ರೀಗಳಿಗೆ ಹುಟ್ಟುಹಬ್ಬದ ಶುಭಾಶಯ ಕೋರಿ ಅವರ ಆಶೀರ್ವಾದ ಪಡೆದರು.

ಈ ವೇಳೆ ನೂತನ ಸಂಸದರನ್ನು ಶ್ರೀಗಳು ಸನ್ಮಾನಿಸಿ, ಅಭಿನಂದಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು, ಶ್ರೀಗಳ ಹುಟ್ಟುಹಬ್ಬದ ಈ ಶುಭ ಸಂದರ್ಭಕ್ಕೆ ಸಾಕ್ಷಿಯಾಗಿರುವುದು ಖುಷಿ ತಂದಿದೆ. ಚುನಾವಣೆಯಲ್ಲಿ ಎಲ್ಲಾ ಜನಾಂಗದವರೂ ಈ ಬಾರಿ ನನ್ನನ್ನು ಬೆಂಬಲಿಸಿದ್ದರಿಂದ ಗೆಲುವು ಸುಲಭವಾಯಿತು.

26 ವರ್ಷಗಳ ನಂತರ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಬಾವುಟವನ್ನು ಹಾರಿಸಿದ್ದೇವೆ. ಕ್ಷೇತ್ರದಲ್ಲಿ ಆಗಬೇಕಾಗಿರುವ ಯೋಜನೆಗಳ ಬಗ್ಗೆ ನನಗೆ ಅರಿವಿದೆ. ಈ ಬಗ್ಗೆ ಎಲ್ಲರ ಸಹಕಾರ ಪಡೆದು, ಯೋಜನೆಗಳ ಜಾರಿಗೆ ಪ್ರಾಮಾಣಿಕ ಹೋರಾಟ ಮಾಡುತ್ತೇನೆಂದು ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಶ್ರೀಗಳಿಗೆ ಹೇಳಿದರು.

ಜಗಳೂರು ಶಾಸಕ ದೇವೇಂದ್ರಪ್ಪ, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಕೆ.ಪಿ. ಪಾಲಯ್ಯ, ಬಿ.ಎಂ. ವಾಗೀಶ್ ಸ್ವಾಮಿ, ಕುಕ್ಕುವಾಡ ಮಂಜುನಾಥ್, ಜಿ. ಮಂಜುನಾಥ್ ಪಟೇಲ್, ಜಿಗಳಿ ಆನಂದಪ್ಪ, ಕುರುಬರಹಳ್ಳಿ ಭರಮಣ್ಣ, ಕೆ.ಬಿ. ಮಂಜುನಾಥ್, ದೇವರಬೆಳಕೆರೆ ಮಹೇಶ್ವರಪ್ಪ, ಗುತ್ತೂರು ಹಾಲೇಶ್‌ಗೌಡ, ಕೊಕ್ಕನೂರು ಸೋಮಣ್ಣ, ತಿಮ್ಮೇನಹಳ್ಳಿ ರಾಜಣ್ಣ, ಮಲೇಬೆನ್ನೂರಿನ ಬಿ. ವೀರೇಶ್, ಸಿರಿಗೆರೆ ಪರಶುರಾಮ್, ಹರಳಹಳ್ಳಿ ಮಂಜು, ಮುದೇನೂರು ಭರತ್, ಪಾರ್ವತಿ ಬೋರಯ್ಯ, ಗೌರಮ್ಮ ಮಂಜುನಾಥ್, ರಾಜನಹಳ್ಳಿಯ ಸುಭಾಷ್ ಚಂದ್ರ ಬೋಸ್, ಎ.ಕೆ. ನಾಗೇಂದ್ರಪ್ಪ, ಭೀಮಣ್ಣ, ಮಾರುತಿ ದಾಸರ್, ಯಲವಟ್ಟಿ ಕೊಟ್ರೇಶ್ ನಾಯ್ಕ, ಕೊಂಡಜ್ಜಿ ತಿಪ್ಪಣ್ಣ, ಹನಗವಾಡಿ ಸಾರಥಿ ಉಮೇಶ್, ಟಿ. ಹನುಮಂತಪ್ಪ, ಉಕ್ಕಡಗಾತ್ರಿ ಪ್ರಕಾಶ್, ನಂದಿಗುಡಿ ಶ್ರೀಕಾಂತ್ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದು, ಶ್ರೀಗಳ ಹುಟ್ಟುಹಬ್ಬಕ್ಕೆ ಶುಭಾಶಯ ಕೋರಿದರು.

ದಾವಣಗೆರೆ ಮಹಾನಗರ ಪಾಲಿಕೆ ಸದಸ್ಯೆ ಶ್ರೀಮತಿ ಸವಿತಾ ಮತ್ತು ಗಣೇಶ್ ಹುಲ್ಲುಮನೆ ದಂಪತಿಯ ಈ ಸಂದರ್ಭದಲ್ಲಿ ಶ್ರೀಗಳು ಸನ್ಮಾನಿಸಿ, ಗೌರವಿಸಿದರು.

# ಭಾರತ ಜ್ಞಾನ ಕೇಂದ್ರವಾಗಲಿ

**(1ನೇ ಪುಟದಿಂದ)** ವಿಶ್ವದ ಮುಂಚೂಣಿ ಜ್ಞಾನ ಕೇಂದ್ರವಾಗಬೇಕಿದೆ. ಇದಕ್ಕಾಗಿ ನಮ್ಮ ಮಕ್ಕಳಲ್ಲಿ ಆರಂಭದಲ್ಲೇ ಆವಿಷ್ಕಾರದ ಮನೋಭಾವ ಬೆಳೆಸಬೇಕು ಎಂದು ಮೋದಿ ಹೇಳಿದರು.

ಈ ಉದ್ದೇಶಕ್ಕಾಗಿಯೇ ಕೋಟಿ ಮಕ್ಕಳಿಗೆ ಆರಂಭಿಕ ಹಂತದಲ್ಲೇ ಅಟಲ್ ಟಿಂಕರಿಂಗ್ ಲ್ಯಾಬ್‌ಗಳ ಮೂಲಕ ಆಧುನಿಕ ತಂತ್ರಜ್ಞಾನ ಪರಿಚಯಿಸಲಾಗುತ್ತಿದೆ. ಗಗನಯಾನ ಹಾಗೂ ಚಂದ್ರಯಾನಗಳು ಬಾಹ್ಯಾಕಾಶ ವಲಯದಲ್ಲಿ ಆಸಕ್ತಿ ಹೆಚ್ಚಿಸುತ್ತಿವೆ ಎಂದವರು ಹೇಳಿದರು.

ದಶಕದ ಹಿಂದೆ ದೇಶದಲ್ಲಿ ಕೇವಲ 100 ನವೋದ್ಯಮಗಳಿದ್ದವು. ಈಗ ಅವುಗಳ ಸಂಖ್ಯೆ 1.30 ಲಕ್ಷಕ್ಕೆ ತಲುಪಿದೆ. ನಾವು ದಾಖಲೆ ಸಂಖ್ಯೆಯ ಪೇಟೆಂಟ್ ಹಾಗೂ ಸಂಶೋಧನಾ ಪ್ರಬಂಧಗಳನ್ನು ದಾಖಲಿಸುತ್ತಿದ್ದೇವೆ ಎಂದೂ ಮೋದಿ ತಿಳಿಸಿದರು.

# ಹತ್ಯೆ ಪ್ರಕರಣದಿಂದ ತಪ್ಪಿಸಿಕೊಳ್ಳಲು 30 ಲಕ್ಷ ರೂ. : ದರ್ಶನ್ ತಪ್ಪೊಪ್ಪಿಗೆ

**(1ನೇ ಪುಟದಿಂದ) ಬರದಂತೆ ಮಾಡಲು ಹಾಗೂ ಶವ ವಿಲೇವಾರಿ ಮಾಡಲು ದರ್ಶನ್ 30 ಲಕ್ಷ ರೂ.ಗಳನ್ನು ಪ್ರಕರಣದ ಮತ್ತೊಬ್ಬ ಆರೋಪಿ ಪ್ರದೋಶ್‌ಗೆ ನೀಡಿರುವುದಾಗಿ ತಿಳಿಸಲಾಗಿದೆ. ಪ್ರದೋಶ್ ಅವರ ನಿವಾಸದಲ್ಲಿ ಪೊಲೀಸರು ಹಣವನ್ನು ವಶಪಡಿಸಿಕೊಂಡಿದ್ದಾರೆ.**

# ದರ್ಶನ್ ಅಭಿಮಾನಿ ಸಂಘಗಳ ಮೇಲೆ ಪೊಲೀಸ್ ಕಣ್ಣು

**(1ನೇ ಪುಟದಿಂದ)** ಕೆಲ ರೌಡಿಗಳ ಜೊತೆ ದರ್ಶನ್ ಸಂಬಂಧ ಹೊಂದಿರುವ ಶಂಕೆ ಇದ್ದು, ಈ ಹಿನ್ನೆಲೆಯಲ್ಲಿ ದರ್ಶನ್ ವಿರುದ್ಧ ರೌಡಿ ಶೀಟರ್ ಪಟ್ಟಿ ತೆರೆಯಲೂ ಸಹ ಪೊಲೀಸರು ಪರಿಶೀಲಿಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

# ಎತ್ತುಗಳ ಕಳ್ಳತನ : ಆರೋಪಿ ಬಂಧನ

ಹೊನ್ನಾಳಿ, ಜೂ.19- ಎತ್ತುಗಳ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಥಳೀಯ ಹೊನ್ನಾಳಿ ಪೊಲೀಸರು ಆರೋಪಿಯನ್ನು ವಾಹನ ಸಮೇತ ವಶಪಡಿಸಿಕೊಂಡ ಘಟನೆ ಭಾನುವಾರ ನಡೆದಿದೆ.

ತಾಲ್ಲೂಕಿನ ಚೀಲಾಪುರ ಗ್ರಾಮದ ಮಹಮ್ಮದ್ ಆಸೀಫ್ ಬಂಧಿತ ಆರೋಪಿಯಾಗಿದ್ದು, ಬಂಧಿತನಿಂದ 3 ಲಕ್ಷ ರೂ. ಮೌಲ್ಯದ ಗೂಡ್ಸ್ ವಾಹನ, ಅಂದಾಜು 90 ಸಾವಿರ ರೂ. ಮೌಲ್ಯದ ಒಂದು ಜೊತೆ ಎತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಚೀಲಾಪುರ ಗ್ರಾಮದ ವಾಸಿ ಧರ್ಮಾನಾಯ್ಕ್ ಅವರು ಎತ್ತುಗಳ ಮಾಲೀಕರಾಗಿದ್ದು, ಕಳ್ಳತನವಾದ ಬಗ್ಗೆ ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.

ಬಕ್ರೀದ್ ಹಬ್ಬದ ಪ್ರಯುಕ್ತ ಗೊಲ್ಲರಹಳ್ಳಿ ಗ್ರಾಮದ ಬಸವಾಪಟ್ಟಣ ಕ್ರಾಸಿನ ಚೆಕ್ ಪೋಸ್ಟ್ ಬಳಿ ದನಗಳನ್ನು ತುಂಬಿ ತಂದ ಗೂಡ್ಸ್ ವಾಹನ ನಿಲ್ಲಿಸಲು ತಿಳಿಸಿದಾಗ, ಚಾಲಕ ವಾಹನ ನಿಲ್ಲಿಸಿ ಓಡಿ ಹೋಗಲು ಯತ್ನಿಸಿದವನನ್ನು ವಿಚಾರಿಸಿದಾಗ ಕಳ್ಳತನ ಮಾಡಿ ತಂದಿರುವುದು ಬೆಳಕಿಗೆ ಬಂದಿದೆ. ನ್ಯಾಯಾಲಯದ ಆದೇಶದ ಮೇರೆಗೆ ಎತ್ತುಗಳನ್ನು ವಾರಸುದಾರರಿಗೆ ನೀಡಲಾಗಿದೆ.

ಹೊನ್ನಾಳಿ ಪೊಲೀಸ್ ನಿರೀಕ್ಷಕ ಎಚ್.ಎಸ್. ಸುನೀಲ್ ಕುಮಾರ್ ನೇತೃತ್ವದಲ್ಲಿ ಸಿಬ್ಬಂದಿ ಟಿ. ತಿಪ್ಪೇಸ್ವಾಮಿ, ಹರೀಶ್, ರವಿ ಎನ್. ಚೇತನ್ ಕುಮಾರ್, ಮಂಜುನಾಥ್ ಮತ್ತು ಪ್ರಸನ್ನ ಪ್ರಕರಣ ಭೇದಿಸುವಲ್ಲಿ ಯಶಸ್ವಿಯಾಗಿದ್ದಾರೆ.

# ನ್ಯಾಮತಿ : ವಿದ್ಯುತ್ ಸ್ಪರ್ಷ - ಸಾವು

ನ್ಯಾಮತಿ, ಜೂ. 19- ಮನೆಯ ಮುಂದೆ ನೀರಿನ ಮೋಟಾರ್‌ಗೆ ಅಳವಡಿಸಿದ ಕರೆಂಟ್ ವೈರನ್ನು ಮುಟ್ಟಿದಾಗ ಆಕಸ್ಮಿಕವಾಗಿ ಕರೆಂಟ್ ಕೈಗೆ ಹೊಡೆದು ಗಾಯಗಳಾಗಿ ಮೃತಪಟ್ಟಿರುವ ಘಟನೆ ನ್ಯಾಮತಿ ತಾಲ್ಲೂಕಿನ ಸೋಗಿಲು ಗ್ರಾಮದಲ್ಲಿ ನಡೆದಿದೆ.

ನ್ಯಾಮತಿ ತಾಲ್ಲೂಕಿನ ಸೋಗಿಲು ಗ್ರಾಮದ ಸೋಮ್ಲಾನಾಯ್ಕ ಅವರ ಪುತ್ರ ನಾಲ್ಕನೇ ತರಗತಿ ವಿದ್ಯಾರ್ಥಿ ವಾಸುನಾಯ್ಕ (10) ತಂದೆ- ತಾಯಿ ಇಬ್ಬರೂ ಕೂಲಿ ಕೆಲಸಕ್ಕೆ ಹೋಗಿದ್ದ ಸಂದರ್ಭದಲ್ಲಿ ಮನೆಯ ಮುಂದೆ ನೀರಿಗೆ ಅಳವಡಿಸಲಾಗಿದ್ದ ಮೋಟಾರಿನ ಕರೆಂಟ್ ವೈರನ್ನು ಮುಟ್ಟಿದ ಪರಿಣಾಮ ಈ ಘಟನೆ ನಡೆದಿದೆ.

ಶಂಕ್ರನಾಯ್ಕ ಫೋನ್‌ನ ಮೂಲಕ ವಿಷಯ ತಿಳಿಸಿದ ತಕ್ಷಣ ಹೊಲದಿಂದ ಬಂದು ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತಾದರೂ ಶಿವಮೊಗ್ಗ ಮೆಗ್ಗಾನ್ ವೈದ್ಯರು ಪರೀಕ್ಷಿಸಿ ಮಾರ್ಗ ಮಧ್ಯೆ ಮೃತಪಟ್ಟಿರುವುದಾಗಿ ತಿಳಿದು ಬಂದಿದೆ. ಸೋಮ್ಲಾನಾಯ್ಕ ಅವರ ಪತ್ನಿ ನೀಡಿದ ದೂರಿನ ಅನ್ವಯ ನ್ಯಾಮತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


**28ನೇ ವರ್ಷದ ಪುಣ್ಯಸ್ಮರಣೆ**



**ನಟರಾಜಯ್ಯ ಡಿ.ಜೆ.**

(ನಿಧನ 20.06.1996)

ನೀವು ನಮ್ಮನ್ನಗಲಿ ಇಂದಿಗೆ 28 ವರ್ಷಗಳಾದವು.

ಸದಾ ನಿಮ್ಮ ಸ್ಮರಣೆಯಲ್ಲಿರುವ

ಪತ್ನಿ : **ಭಾಗ್ಯ ಜಿ.ಎಂ.**

ಮಗ: **ರಿತೀಶ್ ಕುಮಾರ್ ಡಿ.ಎನ್.**

**ಶ್ರೀಮತಿ ಅಶ್ವಿನಿ ರಿತೀಶ್**

**ಹಾಗೂ ಬಂಧು-ಮಿತ್ರರು.**


# ಮನೆ ಕಳ್ಳತನ : ಇಬ್ಬರು ಆರೋಪಿಗಳ ಬಂಧನ

ದಾವಣಗೆರೆ, ಜೂ. 19 - ಸಿದ್ದರಾಮೇಶ್ವರ ಬಡಾವಣೆ, ಭಟ್ಟಿ ಲೇಔಟ್‌ನ ಶ್ರೀಮತಿ ಸುಧಾ ಇವರ ಮನೆಯಲ್ಲಿ ರಾತ್ರಿ ಸಮಯದಲ್ಲಿ ಮನೆಯಲ್ಲಿದ್ದ 15 ಗ್ರಾಂ ಬಂಗಾರವನ್ನು ಮತ್ತು 450 ಗ್ರಾಂ ಬೆಳ್ಳಿಯ ಒಡವೆಗಳನ್ನು ಕಳ್ಳತನ ಮಾಡಿದ್ದ ಎನ್ನಲಾದ ಲಂಬು ದಾದು ಮತ್ತು ಹುಸೇನಿ ಎಂಬುವವರನ್ನು ಬಂಧಿಸಿದ್ದಾರೆ. ಆರೋಪಿತರಿಂದ 8 ಗ್ರಾಂ 260 ಮಿಲಿಗ್ರಾಂ ಬಂಗಾರದ ಗಟ್ಟಿಯನ್ನು ಮತ್ತು 395 ಗ್ರಾಂ ಬೆಳ್ಳಿಯ ಒಡವೆಗಳನ್ನು ಹಾಗೂ 5000/- ಬೆಲೆಯ ಹಿತ್ತಾಳೆಯ ಹಂಡೆವು ಒಟ್ಟು ಅಂದಾಜು 90,000/- ರೂ ಮೌಲ್ಯದ ಸ್ವತ್ತನ್ನು ವಶಕ್ಕೆ ಪಡೆದುಕೊಂಡಿದ್ದು, ಆರೋಪಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಪೊಲೀಸ್ ಅಧೀಕ್ಷಕ ವಿಜಯ್ ಕುಮಾರ್ ಎಂ. ಸಂತೋಷ ಮತ್ತು ಮಂಜುನಾಥ ಜಿ. ಹಾಗೂ ದಾವಣಗೆರೆ ನಗರ ಉಪ ವಿಭಾಗದ ಡಿವೈಎಸ್ಪಿ ಶ್ರೀಮಲ್ಲೇಶ್ ದೊಡ್ಡಮನಿ, ಗಾಂಧಿನಗರ ವೃತ್ತ ನಿರೀಕ್ಷಕ ಟಿ.ಆರ್ ನಹೀಂ ಅಹಮ್ಮದ್ ರವರುಗಳ ಮಾರ್ಗದರ್ಶನದಲ್ಲಿ ಗಾಂಧಿನಗರ ಠಾಣೆಯ ಪಿ.ಎಸ್.ಐ ಆರ್.ಜೆ ಹಿರೇಮಠ್ ಮತ್ತು ಸಿಬ್ಬಂದಿಗಳನ್ನೊಳಗೊಂಡ ತಂಡವು ಆರೋಪಿತರನ್ನು ಪತ್ತೆ ಹಚ್ಚಿದ್ದಾರೆ.

ಹಿರೇಮಠ್ ಪಿ.ಎಸ್.ಐ ರವರ ನೇತೃತ್ವದಲ್ಲಿ ಎ.ಎಸ್.ಐ ಮಹಮ್ಮದ್ ಖಾನ್, ಮಾರುತಿ, ಖಾಜಾ ಹುಸೇನಿ ಅತ್ತಾರ್, ಶಫೀಉಲ್ಲಾ ಸಿದ್ದಕಲಿ, ಬತ್ತೇರ ಮಾರುತಿ, ಎಲ್ ಗಿರಿಧರ್, ಶ್ರೀಮತಿ ಲಕ್ಷ್ಮಿದೇವಿ, ಹನುಮಂತಪ್ಪ ಹಾಗೂ ಜಿಲ್ಲಾ ಪೊಲೀಸ್ ಕಛೇರಿಯ ಪೊಲೀಸ್ ನಿರೀಕ್ಷಕರಾದ ಇಸ್ಮಾಯಿಲ್ ಹಾಗು ಸಿಬ್ಬಂದಿಗಳ ತಂಡವನ್ನು ಪೊಲೀಸ್ ಅಧೀಕ್ಷಕರಾದ ಉಮಾ ಪ್ರಶಾಂತ್ ಪ್ರಶಂಸಿಸಿದ್ದಾರೆ.

# ಕ್ಲಾಕ್ ಟವರ್‌ಗೆ ಡಿಕ್ಕಿ ಹೊಡೆದ ಕಾರು : ಶ್ರೀರಾಮ ಸೇನೆಯ ಮಣಿ ಸರ್ಕಾರ್‌ಗೆ ಗಾಯ



ದಾವಣಗೆರೆ, ಜೂ.19- ನಗರದ ನಿಜಲಿಂಗಪ್ಪ ಬಡಾವಣೆಯ ರಿಂಗ್ ರಸ್ತೆಯ ಕ್ಲಾಕ್ ಟವರ್ ಬಳಿ ಬುಧವಾರ ಬೆಳಿಗ್ಗೆ ನಡೆದ ರಸ್ತೆ ಅಪಘಾತದಲ್ಲಿ ಶ್ರೀರಾಮ ಸೇನೆಯ ಮುಖಂಡ ಮಣಿ ಸರ್ಕಾರ್ ತೀವ್ರ ಗಾಯಗೊಂಡಿದ್ದಾರೆ. ಅತಿಯಾದ ವೇಗದಿಂದ ಬಂದ ಕಾರು, ನಿಯಂತ್ರಣ ಕಳೆದುಕೊಂಡು ಬೈಕ್ ಹಾಗೂ ಸರ್ಕಲ್ ನ ಕಟ್ಟೆಗೆ ಡಿಕ್ಕಿ ಹೊಡೆದಿದೆ. ಕಾರಿನಲ್ಲಿದ್ದ ಮಣಿ ಸರ್ಕಾರ್ ಅವರನ್ನು ನಗರದ ಸಿಟಿ ಸೆಂಟ್ರಲ್ ಆಸ್ಪತ್ರೆಗೆ ಹಾಗೂ ಬೈಕ್ ಸವಾರ ಹಾಲೇಶ್ ಅವರನ್ನು ಸಿ.ಜಿ.ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಮಣಿ ಸರ್ಕಾರ್ ಅವರ ಎರಡೂ ಕಾಲುಗಳಿಗೆ ಗಂಭೀರವಾದ ಪೆಟ್ಟಾಗಿದೆ. ಅಪಘಾತದ ದೃಶ್ಯಾವಳಿಗಳು ಸ್ಥಳೀಯ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿವೆ. ಡಿಕ್ಕಿಯ ತೀವ್ರತೆಗೆ ಕಾರಿನ ಮುಂಭಾಗ ಸಂಪೂರ್ಣ ನಜ್ಜುಗುಜ್ಜಾಗಿದ್ದು, ಅದರ ಬಿಡಿಭಾಗಗಳು ರಸ್ತೆಯಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಬೈಕ್ ಕೂಡಾ ಸಂಪೂರ್ಣ ಜಖಂಗೊಂಡಿದೆ.

# ಕಾಂಗ್ರೆಸ್ ಸರ್ಕಾರ ಜನ ವಿರೋಧಿ ಸರ್ಕಾರ : ಎಂ.ಪಿ.ರೇಣುಕಾಚಾರ್ಯ

## ಮುಂಬರುವ ಚುನಾವಣೆಗಳಲ್ಲೂ ಎನ್.ಡಿ.ಎ. ಅಭ್ಯರ್ಥಿಗಳು ಗೆಲ್ಲುವಂತೆ ನೋಡಿಕೊಳ್ಳಿ : ಡಾ.ಸರ್ಜಿ



ಹೊನ್ನಾಳಿ, ಜೂ. 19 - ಬಿಜೆಪಿ ಪಕ್ಷದಲ್ಲಿ ನನ್ನನ್ನೊಳಗೊಂಡಂತೆ ನಾಯಕರು ಯಾರೂ ಇಲ್ಲ. ಎಲ್ಲಾ ಕಾರ್ಯಕರ್ತರೇ ಒಗ್ಗಟ್ಟಿನಿಂದ ಕೆಲಸ ಮಾಡುವ ಮೂಲಕ ಪಕ್ಷವು ಇಂದು ಹೆಮ್ಮರವಾಗಿ ಬೆಳೆಯಲು ಕಾರಣವಾಗಿದೆ ಎಂದು ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ ಹರ್ಷ ವ್ಯಕ್ತಪಡಿಸಿದರು.

ಪಟ್ಟಣದ ಗುರುಭವನದಲ್ಲಿ ಹೊನ್ನಾಳಿ-ನ್ಯಾಮತಿ ಬಿಜೆಪಿ ವತಿಯಿಂದ ಇತ್ತೀಚೆಗೆ ಜಯ ಗಳಿಸಿದ ನೈರುತ್ಯ ಪದವೀಧರ ಕ್ಷೇತ್ರದ ಅಭ್ಯರ್ಥಿ ಡಾ. ಧನಂಜಯ ಸರ್ಜಿ ಮತ್ತು ನೈರುತ್ಯ ಶಿಕ್ಷಕರ ಕ್ಷೇತ್ರದ ಭೋಜೇಗೌಡ ಅವರಿಗೆ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ವಿಧಾನ ಪರಿಷತ್ತಿನ ಚುನಾವಣೆಯಲ್ಲಿ ಅಭ್ಯರ್ಥಿಗಳಿಗೆ ಕೊಟ್ಟ ಮಾತಿನಂತೆ ಹೊನ್ನಾಳಿ-ನ್ಯಾಮತಿ-ಚನ್ನಗಿರಿ ತಾಲ್ಲೂಕುಗಳನ್ನು ಸವಾಲಾಗಿ ಸ್ವೀಕರಿಸಿ, ಪಕ್ಷದ ಕಾರ್ಯಕರ್ತರುಗಳು, ಮುಖಂಡರುಗಳು ಒಗ್ಗಟ್ಟಾಗಿ ಕೆಲಸ ಮಾಡಿ ಶಿಕ್ಷಕರ, ಪದವೀಧರರ ಮನವೊಲಿಸಿ ಚುನಾವಣೆಯಲ್ಲಿ ಮತ ಹಾಕಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದಕ್ಕೆ ಇಂದು ನಾವು ಬೆಂಬಲಿಸಿದ ಅಭ್ಯರ್ಥಿಗಳು ನಿರೀಕ್ಷೆಯಂತೆ ಜಯಭೇರಿ ಬಾರಿಸಿ ತಮ್ಮ ಸೇವೆಯನ್ನು ಮಾಡಲಿದ್ದು ತಮ್ಮ ಅತ್ಯಮೂಲ್ಯ ಮತ ಹಾಕಿ ಬೆಂಬಲಿಸಿದ ಮತದಾರರಿಗೆ, ಕಾರ್ಯಕರ್ತರಿಗೆ ಮತ್ತು ಮುಖಂಡರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುವುದಾಗಿ ತಿಳಿಸಿದರು.

ದೇವೇಗೌಡರು ತಮ್ಮ ಇಳಿ ವಯಸ್ಸಿನಲ್ಲಿಯೂ ಅನೇಕ ಕ್ಷೇತ್ರಗಳಲ್ಲಿನ ಪಕ್ಷದ ಅಭ್ಯರ್ಥಿಗಳ ಪರವಾಗಿ ಪ್ರಚಾರ ಮಾಡಿದ್ದು ಪಕ್ಷದ ವರ್ಚಸ್ಸು ಹೆಚ್ಚಿಸಿ ಎನ್.ಡಿ.ಎ. ಅಭ್ಯರ್ಥಿಗಳ ಗೆಲುವಿಗೆ ಸಹಕಾರಿಯಾಯಿತು ಎಂದು ತಿಳಿಸಿದರು.

ಕಾಂಗ್ರೆಸ್ ಸರ್ಕಾರವು ಎಲ್ಲಾ ರೀತಿಯಿಂದಲೂ ವಿಫಲವಾಗಿದ್ದು ಪೆಟ್ರೋಲ್, ಡಿಸೇಲ್ ಬೆಲೆಯೇರಿಕೆ ಮಾಡುವುದರ ಮೂಲಕ ಎಲ್ಲಾ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಲು ಕಾರಣವಾಗಿದ್ದು ಜನವಿರೋಧಿ ಸರ್ಕಾರವಾಗಿ ಪರಿಣಮಿಸಿದೆ ಕೂಡಲೇ ಬೆಲೆ ಕಡಿಮೆ ಮಾಡದೇ ಇದ್ದಲ್ಲಿ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು.

ನೈರುತ್ಯ ಶಿಕ್ಷಕರ ಕ್ಷೇತ್ರದ ಚುನಾಯಿತ ಅಭ್ಯರ್ಥಿ ಎಸ್.ಎಲ್.ಭೋಜೇಗೌಡ ಮಾತನಾಡಿ, ನಾಯಕರುಗಳು ಒಗ್ಗಟ್ಟಾದಂತೆ ತಳಮಟ್ಟದ ಕಾರ್ಯಕರ್ತರುಗಳು ಕೂಡ ಒಗ್ಗಟ್ಟಾಗಿ ಕೆಲಸ ಮಾಡಿದ್ದಕ್ಕೆ ಎನ್.ಡಿ.ಎ. ಮೈತ್ರಿ ಅಭ್ಯರ್ಥಿಗಳು ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವಾಯಿತೆಂದು ಸಂತಸ ವ್ಯಕ್ತಪಡಿಸಿದರು.

ಈ ಹಿಂದೆ ಎಚ್.ಡಿ.ಕುಮಾರಸ್ವಾಮಿ ಮತ್ತು ಬಿ.ಎಸ್.ಯಡಿಯೂರಪ್ಪ ಅವರ 20-20 ಸರ್ಕಾರದಲ್ಲಿ ನಡೆದ ಅಭಿವೃದ್ಧಿ ಕಾರ್ಯಗಳನ್ನು ರಾಜ್ಯದ ಜನತೆ ಕೊಂಡಾಡಿದ್ದರು. ಮೈತ್ರಿ ಅಬಾಧಿತವಾಗಿರಲಿದ್ದು ಮೈತ್ರಿಯು ಬಹಳ ಪವಿತ್ರತೆಯಿಂದಿಂದಿರುವಂತೆ ಎರಡೂ ಪಕ್ಷ ಮುಖಂಡರುಗಳು, ಕಾರ್ಯಕರ್ತರುಗಳು ನೋಡಿಕೊಳ್ಳಬೇಕಾಗುತ್ತದೆ ಎಂದು ಸಲಹೆ ನೀಡಿದರು.

ಸರ್ಕಾರದ ಲೋಪ ದೋಷಗಳನ್ನು ಎತ್ತಿ ತೋರಿಸಿ ಶಿಕ್ಷಕರ, ಅನುದಾನಿತ, ಅನುದಾನ ರಹಿತ, ಶಿಕ್ಷಣ ಸಂಸ್ಥೆಗಳ ಸಮಸ್ಯೆಗಳಿಗೆ ಧ್ವನಿಯಾಗಿ ಕೆಲಸ ನಿರ್ವಹಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆಂದು ಭರವಸೆ ನೀಡಿದರು.

ಮುಖ್ಯಮಂತ್ರಿಯವರು ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಲು ಹೊರಟಿದ್ದು ಕನ್ನಡವೇ ಸರಿಯಾಗಿ ಬರುವುದಿಲ್ಲವೆಂದು ಹೇಳುವ ವ್ಯಕ್ತಿಯನ್ನು ಶಿಕ್ಷಣ ಸಚಿವರನ್ನಾಗಿ ಮಾಡಿದ್ದು ವಿಪರ್ಯಾಸವೇ ಸರಿ ಎಂದು ಮಾರ್ಮಿಕವಾಗಿ ನುಡಿದರು.

ನೈರುತ್ಯ ಪದವೀಧರ ಕ್ಷೇತ್ರದ ಚುನಾಯಿತ ಅಭ್ಯರ್ಥಿ ಡಾ. ಧನಂಜಯ ಸರ್ಜಿ ಮಾತನಾಡಿ, ಮತ ಎಣಿಕೆಯ ಸಮಯವನ್ನು ಪ್ರತಿಯೊಬ್ಬ ಕಾರ್ಯಕರ್ತರು, ಮುಖಂಡರುಗಳು ಹಬ್ಬದೋಪಾದಿಯಲ್ಲಿ ಸಂಭ್ರಮಿಸಿದ್ದು ಎಸ್.ಎಲ್.ಭೋಜೇಗೌಡ ಮತ್ತು ತಮ್ಮ ಗೆಲುವು ಕಾರ್ಯಕರ್ತರಿಗೆ ಮತ್ತು ಮುಖಂಡರಿಗೆ ಸಲ್ಲಲಿದ್ದು, ತಮ್ಮ ಋಣವನ್ನು ಪ್ರಾಮಾಣಿಕವಾಗಿ ಕೆಲಸ ಮಾಡುವ ಮೂಲಕ ತೀರಿಸುವುದಾಗಿ ವಾಗ್ದಾನ ಮಾಡಿದರು.

ಚುನಾವಣಾ ಪೂರ್ವದಲ್ಲಿ ತಮ್ಮ ಬಗ್ಗೆ ಇಲ್ಲ-ಸಲ್ಲದ ಆರೋಪಗಳನ್ನು ಪ್ರತಿಪಕ್ಷದವರು ಮತ್ತು ಅಭ್ಯರ್ಥಿಯು ಮಾಡಿದರೂ ತಾವು ಯಾವುದಕ್ಕೂ ತಲೆ ಕೆಡಿಸಿಕೊಳ್ಳದೇ ಚುನಾವಣಾ ಪ್ರಚಾರದಲ್ಲಿ ಮಗ್ನನಾಗಿ ಕಾರ್ಯನಿರ್ವಹಿಸಿದ್ದು ಗೆಲುವಿಗೆ ಕಾರಣವಾಯಿತು ಎಂದು ಸಂತಸ ಹಂಚಿಕೊಂಡರು.

ಮುಂಬರುವ ಜಿ.ಪಂ. ಮತ್ತು ತಾ.ಪಂ. ಚುನಾವಣೆಗಳಲ್ಲೂ ಎನ್.ಡಿ.ಎ. ಅಭ್ಯರ್ಥಿಗಳು ಜಯಗಳಿಸುವತ್ತ ಎಲ್ಲರೂ ಗಮನಹರಿಸಬೇಕೆಂದು ಮನವಿ ಮಾಡಿದರು.

ಅಭಿನಂದನಾ ಸಮಾರಂಭದಲ್ಲಿ ತಾಲ್ಲೂಕು ಬಿಜೆಪಿ ಅಧ್ಯಕ್ಷ ಜೆ.ಕೆ.ಸುರೇಶ್, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಧನಂಜಯ ಕಡ್ಲೇಬಾಳ್, ಪುರಸಭಾ ಸದಸ್ಯ ರಂಗನಾಥ್, ಬಾಬು ಹೋಬಳಿದಾರ್, ಬಿಜೆಪಿ ಮುಖಂಡರಾದ ಕೆ.ಪಿ.ಕುಬೇರಪ್ಪ, ನೆಲಹೊನ್ನೆ ಮಂಜುನಾಥ್, ಅರಕೆರೆ ನಾಗರಾಜ್, ಶಾಂತರಾಜ್ ಪಾಟೀಲ್, ದೊಡ್ಡೇರಿ ರಾಜಣ್ಣ, ದಿಡಗೂರು ಪಾಲಾಕ್ಷಪ್ಪ, ಸುರೇಂದ್ರ ನಾಯ್ಕ್, ಕೆ.ಎಲ್.ರಂಗನಾಥ್, ಅಜಯ್ ಚೀಲೂರು, ಇಂಚರ ಮಂಜುನಾಥ್, ಉಮೇಶ್ ಮತ್ತಿತರರು ಉಪಸ್ಥಿತರಿದ್ದರು.

# ಮೈಸೂರು - ಚೆನ್ನೈ ಬುಲೆಟ್ ರೈಲು ಕಾಲಮಿತಿಯಲ್ಲಿ ಪೂರ್ಣ

## ಕುಮಾರಸ್ವಾಮಿಗೆ ರೈಲ್ವೆ ಸಚಿವ ವೈಷ್ಣವ್ ಭರವಸೆ

ಬೆಂಗಳೂರು, ಜೂ. 19 - ಮೈಸೂರು-ಬೆಂಗಳೂರು-ಚೆನ್ನೈ ಬುಲೆಟ್ ಟ್ರೈನ್ ಸೇರಿದಂತೆ, ಕರ್ನಾಟಕದ ರೈಲ್ವೆ ಯೋಜನೆಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸುವುದಲ್ಲದೆ, ಅಗತ್ಯ ಆರ್ಥಿಕ ನೆರವು ದೊರಕಿಸುವುದಾಗಿ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಭರವಸೆ ನೀಡಿದ್ದಾರೆ.

ಕರ್ನಾಟಕದ ರೈಲ್ವೆ ಯೋಜನೆಗಳಿಗೆ ಸಂಬಂಧಿಸಿದಂತೆ ಕುಮಾರಸ್ವಾಮಿ ಇಂದು ದೆಹಲಿಯಲ್ಲಿ ವೈಷ್ಣವ್ ಅವರನ್ನು ಭೇಟಿ ಮಾಡಿ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಚರ್ಚೆ ನಡೆಸಿದ ಸಂದರ್ಭದಲ್ಲಿ ಈ ಆಶ್ವಾಸನೆ ನೀಡಿದ್ದಾರೆ.

ದೇವೇಗೌಡರು ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಮಂಜೂರಾಗಿದ್ದ ಬೆಂಗಳೂರು-ಸತ್ಯಮಂಗಲ-ಚಾಮರಾಜನಗರ (ಕನಕಪುರ-ಮಳವಳ್ಳಿ ಮಾರ್ಗ) ರೈಲ್ವೆ ಯೋಜನೆಯನ್ನು ಕೈಗೆತ್ತಿಕೊಂಡು ಆದಷ್ಟು ಶೀಘ್ರ ಪೂರ್ಣಗೊಳಿಸುವುದಾಗಿಯೂ ರೈಲ್ವೆ ಸಚಿವರು ಭರವಸೆ ನೀಡಿದ್ದಾರೆ.

ಹೊರ ರಾಜ್ಯದಿಂದ ಬರುವ ರೈಲುಗಳನ್ನು ಬೆಂಗಳೂರು ಮಾರ್ಗವಾಗಿ ಮಂಡ್ಯ-ಮೈಸೂರಿಗೆ ವಿಸ್ತರಿಸುವ ಪ್ರಸ್ತಾವವೂ ಚರ್ಚೆಯಲ್ಲಿ ಬಂದಿದೆ.

ಕೆಲವು ಯೋಜನೆಗಳು ಕುಂಟುತ್ತಾ ಸಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ಯೋಜನಾ ವೆಚ್ಚ ಹೆಚ್ಚುತ್ತಿದೆ, ಅಲ್ಲದೆ, ಕರ್ನಾಟಕ ಸರ್ಕಾರದ ಜೊತೆಗಿನ ತಲಾ ಶೇಕಡ 50 ಪಾಲುದಾರಿಕೆ ಯೋಜನೆಗಳಿಗೂ ಚಾಲನೆ ದೊರಕಿಸುವಂತೆ ಕುಮಾರಸ್ವಾಮಿ ಮನವಿ ಮಾಡಿದ್ದಾರೆ.

ಬುಲೆಟ್ ಟ್ರೈನ್ ವಿಚಾರದಲ್ಲಿ ಈಗಾಗಲೇ ತಮಿಳುನಾಡು, ಆಂಧ್ರ ಪ್ರದೇಶ ಭಾಗದಲ್ಲಿ ಪ್ರತ್ಯೇಕ ಮಾರ್ಗಕ್ಕಾಗಿ ಸಮೀಕ್ಷೆ ಮತ್ತು ಭೂಸ್ವಾಧೀನ ಕಾರ್ಯ ನಡೆದಿದೆ.

ರಾಷ್ಟ್ರದಲ್ಲಿ ಬುಲೆಟ್ ಟ್ರೈನ್‌ಗಳನ್ನು ಕೆಲವು ಮಾರ್ಗಗಳಲ್ಲಿ ಅಳವಡಿಸುವ ಪ್ರಧಾನಿ ಅವರ ಆಲೋಚನೆ ಈಗಾಗಲೇ ಕಾರ್ಯರೂಪಕ್ಕೆ ತರಲಾಗುತ್ತಿದೆ ಎಂದಿದ್ದಾರೆ.

ಉನ್ನತ ಮೂಲಗಳ ಪ್ರಕಾರ ಚೆನ್ನೈ-ಮೈಸೂರು ನಡುವಿನ ಬುಲೆಟ್ ಟ್ರೈನ್ ಯೋಜನೆಗಾಗಿಯೇ ಪ್ರತ್ಯೇಕ ರೈಲು ಮಾರ್ಗ ನಿರ್ಮಾಣವಾಗಲಿದೆ, ಕೆಲವೆಡೆ ರೈಲ್ವೆ ಎಲಿವೇಟೆಡ್ ಮಾರ್ಗ ಅಳವಡಿಸಲಾಗುವುದು ಎಂಬ ಮಾಹಿತಿ ಇದೆ.

# ಜನರ ನಿರೀಕ್ಷೆಯಂತೆ ಕ್ಷೇತ್ರದ ಅಭಿವೃದ್ಧಿಗೆ ಶ್ರಮವಹಿಸಿ

## ನೂತನ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಕಾಗಿನೆಲೆ ಶ್ರೀಗಳ ಕಿವಿಮಾತು



ಮಲೇಬೆನ್ನೂರು, ಜೂ. 19 - ದಾವಣಗೆರೆ ಲೋಕಸಭಾ ಕ್ಷೇತ್ರದ ನೂತನ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಸೋಮವಾರ ಕಾಗಿನೆಲೆ ಕನಕಗುರು ಪೀಠದ ಬೆಳ್ಳೂಡಿ ಶಾಖಾ ಮಠಕ್ಕೆ ಆಗಮಿಸಿ ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ ಆಶೀರ್ವಾದ ಪಡೆದರು.

ಈ ವೇಳೆ ಶ್ರೀಗಳು ಡಾ. ಪ್ರಭಾ ಅವರನ್ನು ಶ್ರೀಮಠದಿಂದ ಗೌರವಿಸಿ ಜನರ ಅಪೇಕ್ಷೆಯಂತೆ ನೀವು ಆಯ್ಕೆಯಾಗಿದ್ದೀರಿ, ಜನರ ನಿರೀಕ್ಷೆಯಂತೆ ಕ್ಷೇತ್ರದ ಅಭಿವೃದ್ಧಿಗೆ ಶ್ರಮವಹಿಸಿ ಕೆಲಸ ಮಾಡಿ ಎಂದು ಕಿವಿ ಮಾತು ಹೇಳಿದರು.

ಹರಿಹರ ತಾಲ್ಲೂಕಿನ ಪ್ರಮುಖ ಬೇಡಿಕೆಯಾದ ಭೈರನಪಾದ ನೀರಾವರಿ ಯೋಜನೆ ಜಾರಿ ಹಾಗೂ ಭದ್ರಾ ಅಚ್ಚುಕಟ್ಟಿನ ಕೊನೆ ಭಾಗದ ರೈತರಿಗೆ ನೀರು ತಲುಪಿಸುವುದು ಹಾಗೂ ಹರಿಹರ ನಗರಕ್ಕೆ ಶಾಶ್ವತ ಕುಡಿಯುವ ನೀರಿನ ಯೋಜನೆ ರೂಪಿಸಿ ಎಂದು ಕಾಗಿನೆಲೆ ಶ್ರೀಗಳು ನೂತನ ಸಂಸದರಿಗೆ ಹೇಳಿದರು.

ನಂತರ ಮಾತನಾಡಿದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು, ಕ್ಷೇತ್ರದ ಜನರ ಹಾಗೂ ಗುರುಗಳ ಆಶೀರ್ವಾದದಿಂದಾಗಿ ನಮಗೆ ಗೆಲುವು ಸಿಕ್ಕಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಎರಡು ದಿನ ಕ್ಷೇತ್ರದಲ್ಲಿ ಪ್ರಚಾರ ಮಾಡಿದ್ದು ನನ್ನ ಗೆಲುವಿಗೆ ಸಹಕಾರಿಯಾಗಿದೆ. ಜನರ ನಿರೀಕ್ಷೆಯಂತೆ ಮತ್ತು ನಿಮ್ಮ ಸಲಹೆಯಂತೆ ಜಿಲ್ಲಾ ಉಸ್ತುವಾರಿ ಸಚಿವರ ಹಾಗೂ ಶಾಸಕರುಗಳ ಜೊತೆ ಗೂಡಿ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದು ಶ್ರೀಗಳಿಗೆ ಮಾತು ಕೊಟ್ಟರು.

ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಕೂಡಾ ಹರಿಹರ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡುವಂತೆ ನೂತನ ಸಂಸದರಲ್ಲಿ ಕೋರಿದರು.

ಮುಖಂಡರಾದ ಎಂ. ಬಸಪ್ಪ, ಕೃಷ್ಣಾ ಸಾ ಭೂತೆ, ಬಿ.ರೇವಣಸಿದ್ದಪ್ಪ, ಕೆ. ಜಡಿಯಪ್ಪ, ಸಿ.ಎನ್. ಹುಲಿಗೇಶ್, ಕುಂಬಳೂರು ವಿರೂಪಾಕ್ಷಪ್ಪ, ಎಸ್.ಜಿ. ಪರಮೇಶ್ವರಪ್ಪ, ಎಸ್.ಎಲ್. ಆನಂದಪ್ಪ, ಕೆ.ಬಿ. ರಾಜಶೇಖರ್, ಹಬೀಬುಲ್ಲಾ ಸಾಬ್, ಜಿ. ಮಂಜುನಾಥ್ ಪಟೇಲ್, ಬಿ. ವೀರಯ್ಯ, ಪೂಜಾರ್ ಹಾಲೇಶಪ್ಪ, ಕರೇಕಟ್ಟೆ ಲೋಕೇಶ್, ಹನಗವಾಡಿ ಕುಮಾರ್, ಬೆಳ್ಳೂಡಿ ಬಸವರಾಜ್, ಕೆ.ವಿ. ರುದ್ರೇಶ್, ಕೆ.ಎನ್. ಹಳ್ಳಿಯ ಗುಬ್ಬಿ ರಂಗನಾಥ್, ಗುಂಡೇರಿ ಹನುಮಂತಪ್ಪ, ಮಲೇಬೆನ್ನೂರಿನ ಕೆ.ಪಿ. ಗಂಗಾಧರ್, ಪಿ.ಹೆಚ್. ಶಿವಕುಮಾರ್, ಪಿ.ಆರ್. ಕುಮಾರ್, ಬೆಳ್ಳೂಡಿ ಗ್ರಾ.ಪಂ. ಅಧ್ಯಕ್ಷ ಬಿ. ಉಮೇಶ್ ಸದಸ್ಯರಾದ ದುಂಡಿ ಸಿದ್ದೇಶ್, ವೀರೇಶ್ ಪೂಜಾರ್, ಶಂಕ್ರಪ್ಪ, ಯುವರಾಜ್ ಪರಮೇಶ್, ಮಾಗನೂರು ಹನುಮಪ್ಪ, ಯು.ಪಿ. ಶಿವಕುಮಾರ್, ಎಂ.ಆರ್. ಬಸವರಾಜ್, ಪ್ರಕಾಶ್, ವಕೀಲ ಲಿಂಗರಾಜ್, ಹನಗವಾಡಿಯ ಸಾರಥಿ ಉಮೇಶ್, ಟಿ. ಹನುಮಂತಪ್ಪ, ಎಳೆಹೊಳೆ ಕರಿಬಸಪ್ಪ, ಹಾಲಿವಾಣದ ಕೆ.ಪಿ. ಕುಮಾರ ಸ್ವಾಮಿ, ಕೆ. ರೇವಣಸಿದ್ದಪ್ಪ, ಜಿಗಳಿಯ ನಂದಿಗಾವಿ ತಿಪ್ಪಣ್ಣ, ಡಿ.ಎಂ. ಹರೀಶ್ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

## ಇಲಾಖಾ ನೌಕರರು ಹೆಸರು ವಿವರ ಸಲ್ಲಿಸಿ

ದಾವಣಗೆರೆ, ಜೂ.19- ಪ್ರತಿ ವರ್ಷ ಜನವರಿ ಅಥವಾ ಫೆಬ್ರವರಿ 2024ನೇ ಮಾಹೆಯಲ್ಲಿ ಎಲ್ಲಾ ಇಲಾಖಾ ನೌಕರರಿಂದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘಕ್ಕೆ ವಾರ್ಷಿಕ ಸದಸ್ಯತ್ವ ಶುಲ್ಕ 2 ನೂರು ರೂ. ಗಳನ್ನು ಕಟಾಯಿಸಿರುವ ನೌಕರರ ವಿವರ ನೀಡಲು ತಿಳಿಸಿದ್ದಾರೆ.

ಜಿಲ್ಲಾ ಸಂಘದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚರ್ಚಿಸಿ ಚುನಾವಣೆ ನಡೆಸಲು ಅರ್ಹ ಮತದಾರರನ್ನು ನಿಗದಿತ ನಮೂನೆಯಲ್ಲಿ ತಮ್ಮ ಇಲಾಖೆ ಹಾಗೂ ಅಧೀನ ಕಚೇರಿಗಳಲ್ಲಿ (ದಾವಣಗೆರೆ ತಾಲ್ಲೂಕು ವ್ಯಾಪ್ತಿಗೆ ಸಂಬಂಧಿಸಿದಂತೆ ಅರ್ಹ ಮತದಾರರ ಪಟ್ಟಿ ತಯಾರಿಸಲು ವಿವರವಾದ ಮಾಹಿತಿ) ಭರ್ತಿ ಮಾಡಿ ಪ್ರತಿಯನ್ನು ಜಿಲ್ಲಾ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಮುದಾಯ ಭವನಕ್ಕೆ ನಾಡಿದ್ದು ದಿನಾಂಕ 21ರ ಒಳಗಾಗಿ ಕಳುಹಿಸಬೇಕೆಂದು ಕ.ರಾ.ಸ.ನೌ. ಸಂಘದ ಜಿಲ್ಲಾಧ್ಯಕ್ಷ ವೀರೇಶ್.ಎಸ್. ಒಡೆಯನಪುರ ತಿಳಿಸಿದ್ದಾರೆ.

## ಡಿ.ಇಡಿ ಪ್ರವೇಶಾತಿಗೆ ಅರ್ಜಿ ಆಹ್ವಾನ

ದಾವಣಗೆರೆ, ಜೂ.19- ನಗರದಲ್ಲಿನ ವಿಕಲಾಂಗ ವ್ಯಕ್ತಿಗಳ ಸಂಯೋಜಿತ ಪ್ರಾದೇಶಿಕ ಕೇಂದ್ರದಲ್ಲಿ 2024-25ನೇ ಶೈಕ್ಷಣಿಕ ಸಾಲಿಗೆ ಡಿ.ಇಡಿ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ. ಮಾಹಿತಿಗಾಗಿ 8746043062, 8125359257 ಸಂಪರ್ಕಿಸುವಂತೆ ಆರ್‌ಸಿ ನಿರ್ದೇಶಕರಾದ ಮೀನಾಕ್ಷಿ ತಿಳಿಸಿದ್ದಾರೆ.

## ನಗರದಲ್ಲಿ ನಾಳೆ ಉಪನ್ಯಾಸ ಮಾಲಿಕೆ

ದಾವಣಗೆರೆ, ಜೂ.19- ಜಿಲ್ಲಾ ವಕೀಲರ ಸಂಘದಿಂದ ನಗರದ ವಕೀಲರ ಸಾಂಸ್ಕೃತಿಕ ಸಮುದಾಯ ಭವನದಲ್ಲಿ ನಾಡಿದ್ದು ದಿನಾಂಕ 21ರ ಬೆಳಗ್ಗೆ 10.30ಕ್ಕೆ ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, ಭಾರತೀಯ ಸಾಕ್ಷಿ ಮಸೂದೆ-2023 ಕುರಿತು 9ನೇ ಉಪನ್ಯಾಸ ಮಾಲಿಕೆ ಆಯೋಜಿಸಲಾಗಿದೆ. ಭಾರತದ ಲೋಕಪಾಲ ನ್ಯಾಯಾಂಗ ಸದಸ್ಯ ಹಾಗೂ ವಿಶ್ರಾಂತ ಮುಖ್ಯ ನ್ಯಾಯಮೂರ್ತಿ ಎಲ್. ನಾರಾಯಣಸ್ವಾಮಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ರಾಜೇಶ್ವರಿ ಎನ್. ಹೆಗಡೆ, 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಮಂಜಪ್ಪ ಹನುಮಂತಪ್ಪ ಅಣ್ಣಯ್ಯನವರ, 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಆರ್.ಎನ್. ಪ್ರವೀಣ್ ಕುಮಾರ್, ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಶ್ರೀರಾಮ ನಾರಾಯಣ ಹೆಗಡೆ, ವಕೀಲರ ಸಂಘದ ಜಿಲ್ಲಾಧ್ಯಕ್ಷ ಎಲ್.ಎಚ್. ಅರುಣ್ ಕುಮಾರ್ ಕಾರ್ಯಕ್ರಮದಲ್ಲಿ ಭಾಗವಹಿಸುವರು.

## ದರ್ಶನ್ ಫಾರಂಹೌಸ್ ಕೆಲಸಗಾರನಿಗೆ ನಾಗೇಶ್ವರ ರಾವ್ ಆರ್ಥಿಕ ನೆರವು

ದಾವಣಗೆರೆ, ಜೂ. 19- ಚಿತ್ರನಟ ದರ್ಶನ್ ಅವರ ಚಾಮರಾಜನಗರದ ಫಾರಂ ಹೌಸ್ ಕೆಲಸಗಾರ ಮಹೇಶ್ ಎಂಬ ವ್ಯಕ್ತಿಗೆ ಎತ್ತು ತಿವಿದು, ಗಾಯಗೊಂಡು ಹಾಸಿಗೆ ಹಿಡಿದಿದ್ದಾರೆ.

ಆತನ ಕಷ್ಟ ನೋಡಿ ರೈತ ಮುಖಂಡ ನಾಗೇಶ್ವರ ರಾವ್ ಅವರು ಮತ್ತವರ ಸ್ನೇಹಿತರು ಸೇರಿ 25 ಸಾವಿರ ರೂ.ಗಳನ್ನು ಮಹೇಶ್ ಬ್ಯಾಂಕ್ ಖಾತೆಗೆ ಜಮಾ ಮಾಡಿದ್ದಾರೆ.

ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚಿಗೆ ನಟ ದರ್ಶನ್ ಪ್ರಕರಣದ ಬಗ್ಗೆ ಮಾಧ್ಯಮಗಳಲ್ಲಿ ನೋಡುವಾಗ ಚಾಮರಾಜನಗರ ಫಾರಂಹೌಸ್ ನಲ್ಲಿ ಕೆಲಸ ಮಾಡುತ್ತಿದ್ದ ಮಹೇಶ್ ಎಂಬಾತನಿಗೆ ಆಗಿರುವ ಅನ್ಯಾಯದ ಬಗ್ಗೆ ತೀವ್ರ ನೋವುಂಟಾಗಿದೆ.

ಎತ್ತು ತಿವಿದ ಪರಿಣಾಮ ಮಹೇಶ್ ಹಾಸಿಗೆ ಹಿಡಿದಿದ್ದಾರೆ. ಚಿಕಿತ್ಸೆಗೆ ಸಹಾಯ ಕೇಳಿದರೆ ನಟ ದರ್ಶನ್ ನಾಯಿಗಳನ್ನು ಬಿಟ್ಟು ಹಲ್ಲೆ ಮಾಡಿಸಿದ್ದಾರೆ. ಇದು ಖಂಡನೀಯ ಎಂದರು.

ದರ್ಶನ್ ಅಭಿಮಾನಿಗಳು ಎಲ್ಲೆಡೆ ಇದ್ದಾರೆ. ಒಬ್ಬೊಬ್ಬರು ಒಂದು ರೂಪಾಯಿ ನೀಡಿದರೆ ಮಹೇಶ್ ಚಿಕಿತ್ಸೆಗೆ ಕೋಟಿ ರೂಪಾಯಿ ಆಗುತ್ತದೆ. ಆದ್ದರಿಂದ ಅಭಿಮಾನಿಗಳು ಆರ್ಥಿಕ ನೆರವು ನೀಡುವಂತೆ ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಎಂ.ಎನ್. ಚಂದ್ರಶೇಖರ್, ಪುಟ್ಟರಾಜು ಉಪಸ್ಥಿತರಿದ್ದರು.

# ಇಂಧನ ವಲಯದಲ್ಲಿ ಅದಾನಿಯಿಂದ 8.34 ಲಕ್ಷ ಕೋಟಿ ರೂ. ಹೂಡಿಕೆ

ನವದೆಹಲಿ, ಜೂ. 19 – ಇಂಧನ ರೂಪಾಂತರಣ ವಲಯದಲ್ಲಿ ಅದಾನಿ ಸಮೂಹ 100 ಶತಕೋಟಿ ಡಾಲರ್ (ಸುಮಾರು 8.34 ಲಕ್ಷ ಕೋಟಿ ರೂ.) ಹೂಡಿಕೆ ಮಾಡಲಿದೆ ಎಂದು ಸಮೂಹದ ಅಧ್ಯಕ್ಷ ಗೌತಮ್ ಅದಾನಿ ಹೇಳಿದ್ದಾರೆ.

ಸೌರ ಪಾರ್ಕ್‌ಗಳು ಹಾಗೂ ಪವನ ವಿದ್ಯುತ್ ಘಟಕಗಳನ್ನು ಸ್ಥಾಪಿಸುವ ಜೊತೆಗೆ, ಹಸಿರು ಹೈಡ್ರೋಜನ್ ಉತ್ಪಾದನೆಗಾಗಿ ಎಲೆಕ್ಟ್ರೋಲೈಜರ್ ಘಟಕಗಳನ್ನು ಸ್ಥಾಪಿಸಲಾಗುವುದು. ಪವನ ವಿದ್ಯುತ್ ಘಟಕ ಹಾಗೂ ಸೌರ ಫಲಕಗಳ ಉತ್ಪಾದನಾ ಕಾರ್ಖಾನೆಗಳನ್ನೂ ಸ್ಥಾಪಿಸಲಾಗುವುದು ಎಂದು ಅದಾನಿ ತಿಳಿಸಿದ್ದಾರೆ.

ನೀರಿನಿಂದ ಹೈಡ್ರೋಜನ್ ವಿಭಜಿಸುವ ಮೂಲಕ ಹಸಿರು ಹೈಡ್ರೋಜನ್ ತಯಾರಿಸಲಾಗುತ್ತದೆ. ಇದಕ್ಕಾಗಿ ಎಲೆಕ್ಟ್ರೋಲೈಜರ್‌ಗಳನ್ನು ಬಳಕೆ ಮಾಡಲಾಗುತ್ತದೆ. ಇದರಿಂದ ವಾಹನ ಸಾಗಣೆಗೆ ಪೆಟ್ರೋಲ್ - ಡೀಸೆಲ್ ಬದಲು ಹೈಡ್ರೋಜನ್ ಬಳಸಲು ಸಾಧ್ಯವಾಗಲಿದೆ. ಇದು ಸಾರಿಗೆ ವಲಯದಲ್ಲಿ ಬೃಹತ್ ಬದಲಾವಣೆ ತರುವ ನಿರೀಕ್ಷೆ ಇದೆ.

ಕ್ರಿಸಿಲ್ ಸಂಸ್ಥೆ ಆಯೋಜಿಸಿದ್ದ ಸಮಾರಂಭದಲ್ಲಿ ಮಾತನಾಡಿದ ಗೌತಮ್ ಅದಾನಿ, ವಿದ್ಯುತ್ ವಲಯದ ರೂಪಾಂತರಣ ಹಾಗೂ ಡಿಜಿಟಲ್ ಮೂಲಭೂತ ಸೌಲಭ್ಯಗಳು ಟ್ರಿಲಿಯನ್ ಡಾಲರ್ ಗಾತ್ರದ ಅವಕಾಶ ನೀಡುತ್ತಿವೆ. ಇದರಿಂದ ಭಾರತ ಸ್ಥಳೀಯವಾಗಿ ಹಾಗೂ ಜಾಗತಿಕವಾಗಿ ಬದಲಾವಣೆ ಕಾಣಬಹುದು ಎಂದು ಹೇಳಿದರು.

ಮುಂದಿನ ದಶಕದಲ್ಲಿ ನಾವು ಇಂಧನ ರೂಪಾಂತರಣ ವಲಯದಲ್ಲಿ 100 ಶತಕೋಟಿ ಡಾಲರ್‌ಗೂ ಹೆಚ್ಚು ಹೂಡಿಕೆ ಮಾಡುತ್ತೇವೆ. ನವೀಕರಣ ಇಂಧನ ವಲಯದಲ್ಲಿ ಸಂಯೋಜನೆ ತರುತ್ತೇವೆ. ಹಸಿರು ಇಂಧನಕ್ಕೆ ಅಗತ್ಯವಾದ ಪ್ರತಿಯೊಂದು ಪ್ರಮುಖ ಘಟಕಗಳನ್ನು ಈಗ ನಾವೇ ಉತ್ಪಾದಿಸುತ್ತಿದ್ದೇವೆ ಎಂದು ಹೇಳಿದರು.

ವಿಶ್ವದಲ್ಲೇ ಅತಿ ಕಡಿಮೆ ವೆಚ್ಚದಲ್ಲಿ ಹಸಿರು ಎಲೆಕ್ಟ್ರಾನ್ ಉತ್ಪಾದಿಸಲು ಅದಾನಿ ಸಮೂಹ ಉದ್ದೇಶಿಸಿದೆ. ಇದು ಹಲವು ವಲಯಗಳಿಗೆ ನೆರವಾಗಲಿದೆ.

ಗುಜರಾತ್‌ನ ಖಾವ್ಡಾದಲ್ಲಿ ನಾವು ವಿಶ್ವದಲ್ಲೇ ಅತಿ ದೊಡ್ಡ ನವೀಕರಣ ಇಂಧನ ಪಾರ್ಕ್ ನಿರ್ಮಿಸಿದ್ದೇವೆ. ಇದೊಂದೇ ಘಟಕದಲ್ಲಿ 30 ಜಿ.ಡಬ್ಲ್ಯೂ. ವಿದ್ಯುತ್ ಉತ್ಪಾದನೆಯಾಗುತ್ತಿದೆ. 2030ರ ವೇಳೆಗೆ ನವೀಕರಣ ವಿದ್ಯುತ್ ಉತ್ಪಾದನೆ 50 ಜಿ.ಡಬ್ಲ್ಯೂ.ಗೆ ತಲುಪಿಸುವ ಗುರಿ ಇದೆ ಎಂದವರು ಹೇಳಿದರು.

ವಿದ್ಯುತ್ ವಲಯದ ರೂಪಾಂತರಣದಿಂದ ಜಾಗತಿಕ ವಿದ್ಯುತ್ ಸ್ವರೂಪ ಶಾಶ್ವತವಾಗಿ ಬದಲಾಗುತ್ತದೆ. ರೂಪಾಂತರಣ ವಲಯದ ಮಾರುಕಟ್ಟೆ ಮೌಲ್ಯ 2023ರಲ್ಲಿ 3 ಟ್ರಿಲಿಯನ್ ಡಾಲರ್ ಆಗಿತ್ತು. ಇದು 2030ರ ವೇಳೆಗೆ 6 ಟ್ರಿಲಿಯನ್ ಡಾಲರ್‌ಗಳಿಗೆ ತಲುಪಲಿದೆ. 2025ರ ವೇಳೆಗೆ ಪ್ರತಿ ದಶಕದಲ್ಲಿ ಅದರ ಮೌಲ್ಯ ದುಪ್ಪಟ್ಟಾಗುವ ಅಂದಾಜಿದೆ ಎಂದವರು ಹೇಳಿದರು.

2030ರ ವೇಳೆಗೆ 500 ಗಿಗಾವ್ಯಾಟ್ ಸಾಮರ್ಥ್ಯದ ನವೀಕರಣ ವಿದ್ಯುತ್ ಗುರಿ ಭಾರತದ್ದಾಗಿದೆ. ಇದಕ್ಕಾಗಿ ಪ್ರತಿ ವರ್ಷ 150 ಶತಕೋಟಿ ಡಾಲರ್‌ಗಳ ಹೂಡಿಕೆಯ ಅಗತ್ಯವಿದೆ. ಹಸಿರು ಇಂಧನಕ್ಕೆ ಪರಿವರ್ತನೆಯಾಗುವುದರಿಂದ ಈ ವಲಯದಲ್ಲಿ ಲಕ್ಷಾಂತರ ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದೂ ಅವರು ಹೇಳಿದರು.

# ಕಟ್ಟಡ ಕಾರ್ಮಿಕರ ಕಿಟ್ ವಿತರಣೆಗೆ ಹೈ ಕೋರ್ಟ್ ತಡೆಯಾಜ್ಞೆ

ದಾವಣಗೆರೆ, ಜೂ. 19- ಕಟ್ಟಡ ಕಾರ್ಮಿಕರಿಗೆ ಅವಶ್ಯಕತೆ ಇಲ್ಲದ ಟೂಲ್, ಯುಮಿನಿಟಿ ಕಿಟ್ ಮತ್ತು ಇತರೆ ವಸ್ತುಗಳ ವಿತರಣೆಗೆ ರಾಜ್ಯ ಉಚ್ಚ ನ್ಯಾಯಾಲಯ ತಡೆಯಾಜ್ಞೆ ನೀಡಿದೆ ಎಂದು ಕರ್ನಾಟಕ ರಾಜ್ಯ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘ (ಎಐಟಿಯುಸಿ ಸಂಯೋಜಿತ) ಅಧ್ಯಕ್ಷ ಹೆಚ್.ಜಿ. ಉಮೇಶ್ ಆವರಗೆರೆ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕೊರೊನಾ ನಂತರದಲ್ಲೂ ಕಾರ್ಮಿಕರಿಗೆ ಕೊಡಬೇಕಾದ ನಿವೃತ್ತಿ ಪಿಂಚಣಿ, ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ, ಸಹಾಯ ಧನಕ್ಕೆ ಮೀಸಲಾದ ಹಣವನ್ನು ಕಿಟ್‌ಗಳಿಗೆ ಬಳಕೆ ಮಾಡಲಾಗಿದೆ. ಕಿಟ್ ಖರೀದಿಸಬಾರದು ಎಂದು ಹೋರಾಟ ಕೂಡ ನಡೆಸಲಾಗಿತ್ತು ಎಂದರು.

ಮುಖ್ಯಮಂತ್ರಿ ಸಿದ್ಧರಾಮಯ್ಯ, ಕಾರ್ಮಿಕ ಸಚಿವರಿಗೆ ಮನವಿ ಮಾಡಲಾಗಿತ್ತು. ಆದರೂ ಕಮೀಷನ್ ಆಸೆಗಾಗಿ ಕಿಟ್ ಖರೀದಿ ಮಾಡಲಾಗಿದೆ ಎಂದು ದೂರಿದರು.

ಎಐಟಿಯುಸಿ ಮತ್ತು ಇತರೆ ಕಾರ್ಮಿಕ ಸಂಘಟನೆಗಳು ಸಭೆ ನಡೆಸಿ, ಅಂತಿಮವಾಗಿ ಕಟ್ಟಡ ಕಾರ್ಮಿಕರಿಗೆ ಯಾವುದೇ ರೀತಿಯ ಉಪಯೋಗ ಇಲ್ಲದ ಕಿಟ್ ಖರೀದಿ ಮಾಡುವುದನ್ನು ತಡೆಯಬೇಕು ಎಂದು ಹೈಕೋರ್ಟ್ ಮೊರೆ ಹೋಗಲಾಗಿತ್ತು. ಏ.24 ರಂದು ಕಿಟ್ ವಿತರಣೆಗೆ ಕೋರ್ಟ್ ತಡೆಯಾಜ್ಞೆ ನೀಡಿದೆ ಎಂದು ಹೇಳಿದರು.

ಕೋರ್ಟ್ ಆದೇಶದ ಹೊರತಾಗಿಯೂ ಕಿಟ್ ವಿತರಣೆಗೆ ಕಾರ್ಮಿಕ ಕಲ್ಯಾಣ ಮಂಡಳಿ ಮುಂದಾಗಿರುವುದನ್ನು ಪ್ರಶ್ನಿಸಿದರೆ, ಈ ಹಿಂದೆಯೇ ಖರೀದಿ ಮಾಡಲಾಗಿತ್ತು ಎಂದು ಉತ್ತರಿಸುತ್ತಿದ್ದಾರೆಂದರು.

ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರ ಬಳಿ ಚರ್ಚೆಗೆ ಹೋದಾಗ ಕಾರ್ಮಿಕ ಸಂಘಟನೆಗಳ ಮುಖಂಡರೊಂದಿಗೆ ಏರು ಧ್ವನಿಯಲ್ಲಿ ಮಾತನಾಡಿದ್ದಾರೆ. ಬಂಡವಾಳಶಾಹಿ ಹಿನ್ನೆಲೆಯ ಹೊಂದಿರುವ ಅವರನ್ನು ಬದಲಾವಣೆ ಮಾಡುವಂತೆ ಸಿಎಂ ಸಿದ್ಧರಾಮಯ್ಯ ಅವರನ್ನು ಒತ್ತಾಯಿಸಿದರು.

ಸಚಿವ ಸಂತೋಷ್ ಲಾಡ್ ತಿಳಿಸಿರುವಂತೆ ಜುಲೈ ತಿಂಗಳ ಮೊದಲ ವಾರದಲ್ಲಿ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿನ ಹಲವಾರು ವಿಷಯಗಳ ಬಗ್ಗೆ ಚರ್ಚೆ ನಡೆಸದಿದ್ದರೆ ಜುಲೈ ಕೊನೆಯ ವಾರದಲ್ಲಿ ಧಾರವಾಡ ಚಲೋ ಕಾರ್ಯಕ್ರಮ ಹಮ್ಮಿಕೊಂಡು ಅಲ್ಲಿನ ಕಾರ್ಮಿಕ ಕಚೇರಿ ಮುತ್ತಿಗೆ ಹಾಕಲಾಗುವುದು ಎಂದು ಎಚ್ಚರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ವಿ.ಲಕ್ಷ್ಮಣ್, ಶಿವಕುಮಾರ್ ಡಿ.ಶೆಟ್ಟರ್, ಮುರುಗೇಶ್, ಸುರೇಶ್ ಯರಗುಂಟೆ, ಸಿದ್ದೇಶ್, ಕೆ. ಸುರೇಶ್, ಡಿ. ಷಣ್ಮುಗಂ ಉಪಸ್ಥಿತರಿದ್ದರು.

# ಗ್ರಾಮೀಣ ಜನರಿಗೆ ಆರೋಗ್ಯ ಕಾಳಜಿ ಅರಿವು ಮುಖ್ಯ



## ಡಾ. ಟಿ.ಜಿ.ರವಿಕುಮಾರ್

ದಾವಣಗೆರೆ, ಜೂ.19- ಗ್ರಾಮೀಣ ಭಾಗದ ಜನರಿಗೆ ಆರೋಗ್ಯದ ಕಾಳಜಿ ಇಲ್ಲದ ಕಾರಣ ಬಿಪಿ, ಶುಗರ್ ಕಾಯಿಲೆಯಿಂದ ತೊಂದರೆ ಎದುರಿಸುತ್ತಿದ್ದಾರೆ ಎಂದು ಡಾ.ಟಿ.ಜಿ. ರವಿಕುಮಾರ್ ಆತಂಕ ಪಟ್ಟರು.

ರೋಟರಿ ಸಂಸ್ಥೆಯಿಂದ ತಾಲ್ಲೂಕಿನ ಅತ್ತಿಗೆರೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಮತ್ತು ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಆರೋಗ್ಯ ನಮ್ಮ ಮೂಲಭೂತ ಹಕ್ಕು. ಅದನ್ನು ಎಲ್ಲರೂ ಪಡೆದುಕೊಳ್ಳಬೇಕು. ಉತ್ತಮ ಆರೋಗ್ಯಕ್ಕಾಗಿ 2 ಅಥವಾ 3 ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಅತ್ತಿಗೆರೆ ಗ್ರಾ.ಪಂ. ವ್ಯಾಪ್ತಿಯ ಸುತ್ತ-ಮುತ್ತಲಿನ ಹಳ್ಳಿಯ 500ಕ್ಕೂ ಅಧಿಕ ಸಾರ್ವಜನಿಕರು ಹಾಗೂ 300ಕ್ಕೂ ಅಧಿಕ ಶಾಲಾ ಮಕ್ಕಳು ಶಿಬಿರದ ಪ್ರಯೋಜನ ಪಡೆದರು.

ವಿನಾಯಕ ಮೆಡಿಕಲ್ಸ್ ಅವರು ದೇಣಿಗೆಯಾಗಿ ಶಿಬಿರದಲ್ಲಿ 75 ಸಾವಿರ ರೂ.ಗಳ ಮೌಲ್ಯದ ಔಷಧಿಗಳನ್ನು ವಿತರಿಸಿದರು. ಶಿಬಿರದಲ್ಲಿ ಭಾಗವಹಿಸಿದ ಮಕ್ಕಳಿಗೆ ಟೂಥ್ ಬ್ರಷ್ ನೀಡಲಾಯಿತು.

ಈ ವೇಳೆ ಟ್ರಸ್ಟಿನ ಗೌರವಾಧ್ಯಕ್ಷ ಗುರುಸಿದ್ದನಗೌಡ್ರು, ಡಾ.ಡಿ. ನಾಗರಾಜ್, ಕೆ.ಓ. ಮಹೇಶ್, ಲತಾ ಮಂಜುನಾಥ್, ಬಿ.ಸಿ. ಕಲ್ಲೇಶ್, ಎಚ್.ಕೆ. ಕಲ್ಲಪ್ಪ, ಇನ್ನರ್ ವ್ಹೀಲ್ ಸಂಸ್ಥೆಯ ಮಂಜುಳಾ ಕರ್ಜಗಿ, ಎಂ.ಕೆ. ಶೋಭಾ ಇದ್ದರು. ಇನ್ನರ್ ವ್ಹೀಲ್ ಸಂಸ್ಥೆ, ಆರ್‌ಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಪ್ರೀತಿ ಆರ್‌ಕೆ ಟ್ರಸ್ಟ್ ಮತ್ತು ಹೂವಿನಹಡಗಲಿಯ ಆರೋಗ್ಯ ಧಾಮದ ಸಹಯೋಗದಲ್ಲಿ ಕಾರ್ಯಕ್ರಮ ನಡೆಯಿತು.

## ನಗರದಲ್ಲಿ 23ರಂದು ಪಾರಂಪರಿಕ ವೈದ್ಯರುಗಳ ಸಭೆ

ದಾವಣಗೆರೆ, ಜೂ. 19- ನಗರದ ಹೆಚ್‌ಕೆಆರ್ ಸರ್ಕಲ್‌ನಲ್ಲಿರುವ ಪತಂಜಲಿ ಅಂಗಡಿ ಮೇಲ್ಭಾಗದಲ್ಲಿರುವ ಓಂ ವೆಲ್‌ನೆಸ್ ಸೆಂಟರ್ ನಲ್ಲಿ ಇದೇ ದಿನಾಂಕ 23ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ದಾವಣಗೆರೆ ಜಿಲ್ಲೆಯ ಪಾರಂಪರಿಕ ವೈದ್ಯರುಗಳ ಸಭೆ ಕರೆಯಲಾಗಿದೆ.

ಪಾರಂಪರಿಕ ವೈದ್ಯ ಪರಿಷತ್, ಕರ್ನಾಟಕ ಪಾರಂಪರಿಕ ವೈದ್ಯ ಗುರು-ಶಿಷ್ಯ ಪರಂಪರೆ ಮೂಲಕ ಪರಂಪರೆ ವೈದ್ಯವನ್ನು ಪುನರುತ್ಥಾನಗೊಳಿಸಲು ಕಾರ್ಯೋನ್ಮುಖವಾಗಿದ್ದು, ಮೊದಲ ತರಬೇತಿ ಶಿಬಿರ ಶ್ರೀ ಕ್ಷೇತ್ರ ಆದಿಚುಂಚನಗಿರಿಯಲ್ಲಿ 10 ದಿನಗಳ ಕಾಲ ಯಶಸ್ವಿಯಾಗಿ ನಡೆದಿರುತ್ತದೆ. ಪರಿಷತ್ತಿನ ಗೌರವಾಧ್ಯಕ್ಷರಾದ ಶ್ರೀ ಪ್ರಸನ್ನನಾಥ ಸ್ವಾಮೀಜಿಯವರ ಆದೇಶದ ಮೇರೆಗೆ ಈ ತರಬೇತಿಯನ್ನು ರಾಜ್ಯಾದ್ಯಂತ ವಿಸ್ತರಿಸಲಾಗುವುದೆಂದು ಪರಿಷತ್ ತೀರ್ಮಾನಿಸಿದ್ದು, ಗುರು-ಶಿಷ್ಯ ಪರಂಪರೆ ತರಬೇತಿ ನಡೆಸಲು ಜಿಲ್ಲಾ ಸಂಚಾಲಕರುಗಳಿಗೆ ಸೂಚಿಸಲಾಗಿರುವ ಪ್ರಯುಕ್ತ ವೈದ್ಯರುಗಳ ಸಭೆ ಕರೆಯಲಾಗಿದ್ದು, ಸಭೆಯಲ್ಲಿ ಭಾಗವಹಿಸಿ ನಿಮ್ಮ ಸಲಹೆ, ಸಹಕಾರ ನೀಡಬೇಕಾಗಿ ಪಾರಂಪರಿಕ ವೈದ್ಯ ಪರಿಷತ್ ಸಂಚಾಲಕರಾದ ಪುಷ್ಪಾ ತಿಳಿಸಿದ್ದಾರೆ.


## ಡ್ರೈವರ್-ಕಂ-ಅಟೆಂಡರ್ ಬೇಕಾಗಿದ್ದಾರೆ

ಭಾರತೀಯ ರೆಡ್ ಕ್ರಾಸ್ ಸಂಸ್ಥೆ ದಾವಣಗೆರೆ ಜಿಲ್ಲಾ ಶಾಖೆಗೆ ಸದೃಢ ಆರೋಗ್ಯವಂತ ವ್ಯಕ್ತಿಗಳು ಡ್ರೈವರ್- ಕಂ-ಅಟೆಂಡರ್ ಹುದ್ದೆಗೆ ಬೇಕಾಗಿದ್ದಾರೆ. ಹೆವಿ ವೆಹಿಕಲ್ ಚಾಲನೆ ಪರವಾನಿಗೆ ಹಾಗೂ ಹೆವಿ ವೆಹಿಕಲ್ ಬ್ಯಾಡ್ಜ್ ವುಳ್ಳ ಆಸಕ್ತ ಅಭ್ಯರ್ಥಿಗಳು ದಿನಾಂಕ 30-06-2024 ರಂದು ಸಂಜೆ 4:30ರ ಒಳಗಾಗಿ ತಮ್ಮ ಅರ್ಜಿಯನ್ನು ಸಂಸ್ಥೆಯ ಕಚೇರಿಯಲ್ಲಿ ಸಲ್ಲಿಸಬೇಕು. ಅರ್ಹ ವ್ಯಕ್ತಿಗಳ ನೇಮಕಾತಿಯನ್ನು ನೇರ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳಲಾಗುವುದು.

- ಸಹಿ, ಆಡಳಿತ ಮಂಡಳಿ ಪರವಾಗಿ,
ಶ್ರೀ ಆನಂದ್ ಜ್ಯೋತಿ, ಪ್ರಧಾನ ಕಾರ್ಯದರ್ಶಿಗಳು,
ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ದಾವಣಗೆರೆ ಜಿಲ್ಲಾ ಶಾಖೆ.


# 2025 ರೊಳಗೆ ಮಲೇರಿಯಾಮುಕ್ತ ಭಾರತಕ್ಕೆ ಸಮುದಾಯದ ಪಾತ್ರ ಮುಖ್ಯ



## ಕೊಕ್ಕನೂರಿನ ಕಾರ್ಯಕ್ರಮದಲ್ಲಿ ಟಿ.ಹೆಚ್. ಓ ಡಾ. ಖಾದರ್

ಮಲೇಬೆನ್ನೂರು, ಜೂ.19- ಕೊಕ್ಕನೂರು ಸರ್ಕಾರಿ ಪ್ರೌಢಶಾಲೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಿಂದ ಹಮ್ಮಿಕೊಂಡಿದ್ದ ಮಲೇರಿಯಾ ವಿರೋಧಿ ಮಾಸಾಚರಣೆ ಕಾರ್ಯಕ್ರಮವನ್ನು ಟಿಹೆಚ್‌ಓ ಡಾ. ಅಬ್ದುಲ್ ಖಾದರ್ ಉದ್ಘಾಟಿಸಿದರು.

ನಂತರ ಮಾತನಾಡಿದ ಖಾದರ್ ಅವರು, ಮಲೇರಿಯಾ ರೋಗವನ್ನು ನಿಯಂತ್ರಣ ಮಾಡಲು ಮನೆಯ ಸುತ್ತಮುತ್ತ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ನಮ್ಮ ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಂಡಲ್ಲಿ ಮಲೇರಿಯಾ ನಿಯಂತ್ರಣ ಸಾಧ್ಯ. ಇದಕ್ಕೆ ಸಮುದಾಯದ ಪಾತ್ರ ಬಹಳ ಮುಖ್ಯವಾಗಿದೆ. ಲಾರ್ವಾಗಳ ಉತ್ಪತ್ತಿ ಯಾವ ರೀತಿ ಆಗುತ್ತದೆ ಮತ್ತು ಅವುಗಳನ್ನು ಗಪ್ಪಿ ಹಾಗೂ ಗ್ಯಾಂಬೂಸಿಯಾ ಮೀನುಗಳನ್ನು ಬಿಡುವುದರ ಮೂಲಕ ನಾಶ ಮಾಡಬಹುದೆಂದು ವಿವರಿಸಿದರು.

ಈ ರೋಗವು ಚಳಿ ಜ್ವರ, ಅಸ್ವಸ್ಥತೆಯ ತಲೆನೋವು, ವಾಕರಿಕೆ ಮತ್ತು ವಾಂತಿ, ಅತಿಸಾರ ಹೊಟ್ಟೆ ನೋವು, ಕೆಮ್ಮು ಇತ್ಯಾದಿ ಲಕ್ಷಣಗಳನ್ನು ಹೊಂದಿರುತ್ತದೆ. ಆದ್ದರಿಂದ ಯಾವುದೇ ಜ್ವರ ಬರಲಿ ರಕ್ತ ಪರೀಕ್ಷೆ ಮಾಡಿಸಿ ಎಂದು ಡಾ.ಖಾದರ್ ಹೇಳಿದರು.

ತಾ. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಉಮ್ಮಣ್ಣ ಮಾತನಾಡಿ, ಹಿಂದೆ ಗ್ರಾಮದಲ್ಲಿ ಹೆಚ್ಚು ಹೆಚ್ಚು ಮಲೇರಿಯಾ ಪ್ರಕರಣಗಳು ಕಂಡು ಬರುತ್ತಿದ್ದವು. ಆದರೀಗ ಆರೋಗ್ಯ ಇಲಾಖೆಯವರ ಪರಿಶ್ರಮದಿಂದ ಗ್ರಾಮಗಳು ಮಲೇರಿಯಾ ಮುಕ್ತವಾಗುತ್ತಿವೆ. ನಿಮ್ಮ ಸುತ್ತಮುತ್ತಲಿನ ಪ್ರದೇಶದವನ್ನು ಸ್ವಚ್ಛವಾಗಿಟ್ಟುಕೊಳ್ಳಿ ಎಂದ ಅವರು ಮಲೇರಿಯಾ ಕುರಿತು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ತಿಳಿಸಿದರು.

ತಾ. ಕ್ಷೇತ್ರ ಶಿಕ್ಷಣಾಧಿಕಾರಿ ನಾಗರಾಜ್ ಮಾತನಾಡಿ, ಮಳೆಗಾಲ ಪ್ರಾರಂಭವಾಗಿರುವುದರಿಂದ ಮನೆಯ ಹಿಂದೆ, ಮುಂದೆ ಮತ್ತು ಘನ ತ್ಯಾಜ್ಯ ವಸ್ತುಗಳಲ್ಲಿ ನೀರು ಸಂಗ್ರಹವಾಗದಂತೆ ನಿಗಾ ವಹಿಸಿ, ಸಂಗ್ರಹಿಸಿದ ನೀರನ್ನು ಮುಚ್ಚಿ ಬಳಸಿ, ಇದರಿಂದ ಮಲೇರಿಯಾ ಹಾಗೂ ಡೆಂಗ್ಯೂ ಸೊಳ್ಳೆಗಳ ಉತ್ಪತ್ತಿ ತಾಣಗಳನ್ನು ನಿಯಂತ್ರಣ ಮಾಡಬಹುದು ಎಂದರು.

ಶ್ರೀ ಬೀರಲಿಂಗೇಶ್ವರ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಹಾಗೂ ವರದಿಗಾರ ನಾಗೇಂದ್ರಪ್ಪ ಮಾತನಾಡಿ, ಸಾಂಕ್ರಾಮಿಕ ರೋಗಗಳ ನಿರ್ಮೂಲನೆಯಿಂದ ಈ ದೇಶದ ಅಭಿವೃದ್ಧಿ ಸಾಧ್ಯ ಎಂದು ಹೇಳಿದರು.

ತಾ. ಹಿರಿಯ ಸುರಕ್ಷಾಧಿಕಾರಿ ಶ್ರೀಮತಿ ಸುಧಾ ಮಾತನಾಡಿ, ವೈಯಕ್ತಿಕ ಸ್ವಚ್ಛತೆಯಿಂದ ರೋಗಗಳನ್ನು ನಿಯಂತ್ರಣ ಮಾಡಬಹುದು. 'ಹೆಚ್ಚು ಸಮಾನತೆಯ ಜಗತ್ತಿಗೆ ಮಲೇರಿಯಾ ವಿರುದ್ಧದ ಹೋರಾಟವನ್ನು ತೀವ್ರಗೊಳಿಸೋಣ' ಎಂಬುದು ಈ ವರ್ಷದ ಘೋಷ ವಾಕ್ಯವಾಗಿದೆ ಎಂದರು.

ಶಾಲಾ ಮುಖ್ಯೋಪಾಧ್ಯಾಯ ರವಿಕುಮಾರ್ ಮಾತನಾಡಿ, ಸಾಂಕ್ರಾಮಿಕ ರೋಗದ ತಡೆಯನ್ನು ಶಾಲಾ ಹಂತದಲ್ಲಿಯೇ ಪಠ್ಯಗಳಲ್ಲಿ ಅಳವಡಿಸಿದ್ದು, ಅದರ ಬಗ್ಗೆ ಸರಿಯಾಗಿ ತಿಳಿದುಕೊಂಡು ನಡೆಯಬೇಕೆಂದು ಮಕ್ಕಳಿಗೆ ಕರೆ ನೀಡಿದರು.

ಆರೋಗ್ಯ ನಿರೀಕ್ಷಣಾಧಿಕಾರಿ ಚಂದ್ರಶೇಖರ್, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಪ್ರೀತಿ ಮತ್ತು ಆಶಾ ಕಾರ್ಯಕರ್ತೆಯರು ಹಾಗೂ ಶಾಲಾ ಶಿಕ್ಷಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.


## ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದನೆಂದರೆ ದಾವಣಗೆರೆ ಜಿಲ್ಲೆ, ಮಾಯಕೊಂಡ ಹೋಬಳಿ, ಕೊಡಗನೂರು ಗ್ರಾಮದ ರಿ. ಸರ್ವೆ ನಂ. : 163/3ರಲ್ಲಿ 3 ಎಕರೆ ಗುಂಟೆ ಜಮೀನು, ದಾವಣಗೆರೆ ತಾಲ್ಲೂಕು ಮಾಯಾಕೊಂಡ ಹೋಬಳಿ, ಸರ್ವೆ ನಂಬರ್ 180. ಆಸ್ತಿ ನಂಬರ್ 51-52ರಲ್ಲಿರುವ 50x80 ಅಡಿ ಅಳತೆಯ ಕಪ್ಪು ಹಂಚಿನ ಮನೆ ಮತ್ತು ಇದಕ್ಕೆ ಲಗತ್ತಾದ 50x80 ಅಡಿ ಅಳತೆಯ ಖಾಲಿ ನಿವೇಶನ ಇವುಗಳ ಬಗ್ಗೆ ಓ.ಎಸ್. ನಂ. : 17/2018. ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ದಾವೆ ನಡೆದು ಸದರಿ ದಾವೆಯ ತೀರ್ಪಿನ ವಿರುದ್ಧ ಮೇಲ್ಮನವಿ ಸಂ. 35/2020 ಚಾಲ್ತಿ ಇದ್ದಾಗ ಡೀಪಾಲ್ಟ್‌ಗೆ ವಜಾ ಆಗಿದ್ದು, ಸದರಿ ಆದೇಶವನ್ನು ತಳ್ಳಿಹಾಕಿ ಮೇಲ್ಮನವಿ ವಿಚಾರಣೆ ತೆಗೆದುಕೊಳ್ಳಲು ಕೋರಿ ಸಿ.ಮಿಸ್ 434/2023 ಮಾನ್ಯ 2ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ. ದಾವಣಗರೆ ಸಿಟಿ, 5ನೇ ವಾರ್ಡ್ 10ನೇ ಡಿವಿಜನ್ ಸಿದ್ದವೀರಪ್ಪ ಬಡಾವಣೆ, 3ನೇ ಕ್ರಾಸ್, ಡೋರ್ ನಂ. 1654/3-4ಪಿ, ವಿಸ್ತೀರ್ಣ 43x19 ಅಡಿವುಳ್ಳ 2 ಅಂತಸ್ತಿನ ಮನೆ, ಸದರಿ ಸ್ವತ್ತುಗಳ ಬಗ್ಗೆ ಯಾರೂ ವ್ಯವಹಾರ ಮಾಡಬಾರದಾಗಿ ಈ ಪ್ರಕಟಣೆ ಹೊರಡಿಸಿದೆ.

ಎ.ಎನ್. ಪುಷ್ಪಲತಾ
ಸ್ಥಳ : ದಾವಣಗೆರೆ
ದಿನಾಂಕ 16.06.2024

ಹೆಚ್.ಎನ್. ರಾಜಶೇಖರಪ್ಪ
ವಕೀಲರು, ಬಿ.ಎಸ್ಸಿ., ಬಿ.ಇಡಿ., ಎಲ್‌ಎಲ್.ಬಿ.
#162, ಮೊದಲನೇ ಮಹಡಿ, 10ನೇ ಕ್ರಾಸ್, 'ಎ' ಬ್ಲಾಕ್, ದೇವರಾಜ ಅರಸ್ ಲೇಔಟ್, ದಾವಣಗೆರೆ- 577006. ಮೊ : 99003 39773


# ಯೋಗಾಭ್ಯಾಸವನ್ನು ನಿತ್ಯ ಕಾಯಕದಂತೆ ಮಾಡಿ...

**ಯೋಗದ ಮಹತ್ವ :** ಇಂದಿನ ವೇಗದ ಯುಗದಲ್ಲಿ ಯೋಗಾಭ್ಯಾಸದಲ್ಲಿ ತೊಡಗಿಸಿಕೊಳ್ಳುವುದಕ್ಕೆ ಸಮಯ ಸಿಗುತ್ತದೆಯೇ? ಎಂಬುದು ಕೆಲವೊಬ್ಬರ ಪ್ರಶ್ನೆ. ಯೋಗಾಭ್ಯಾಸಕ್ಕೆ ಗಂಟೆಗಟ್ಟಲೆ, ದಿನಗಟ್ಟಲೆ ಸಮಯವೇನೂ ವ್ಯರ್ಥ ಮಾಡುವ ಅಗತ್ಯವಿಲ್ಲ. ಸಣ್ಣ ಕಾಲಾವಧಿಯಿಂದ ಪ್ರಾರಂಭಿಸಿ, ನಂತರ ಇಚ್ಛೆ ಮತ್ತು ಅಗತ್ಯಕ್ಕೆ ತಕ್ಕಂತೆ ಅಭ್ಯಾಸವನ್ನು ವಿಸ್ತರಿಸಿಕೊಳ್ಳಲು ವಿಪುಲ ಅವಕಾಶಗಳಿವೆ. ಜೀವನದಲ್ಲಿ ಶಾಂತಿ, ನೆಮ್ಮದಿ, ಸೌಹಾರ್ದ, ಸಂತೋಷ, ಯಶಸ್ಸು ಎಲ್ಲವೂ ಕೈಗೂಡಬೇಕೆಂದರೆ, ಯೋಗ್ಯ ಗುರುವಿನ ಮಾರ್ಗದರ್ಶನದಲ್ಲಿ ಯೋಗಕ್ಕೆ ಮೊರೆ ಹೋಗುವುದು ಜಾಣತನದ ನಿರ್ಧಾರ ಎನಿಸಿಕೊಳ್ಳುತ್ತದೆ. ಯೋಗವು ದೇಹದ ಆರೋಗ್ಯವನ್ನು ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಮೂಳೆ ಸ್ನಾಯುಗಳನ್ನು ಚುರುಕುಗೊಳಿಸಲು, ದೇಹಕ್ಕೆ ಶಕ್ತಿಯನ್ನು ತುಂಬಲು, ಬಳಲಿಕೆ ಹಾಗೂ ಸುಸ್ತನ್ನು ದೂರ ಮಾಡಲು ಯೋಗ ಸಹಕಾರಿ.

ಯೋಗವು ದೈಹಿಕ ಆರೋಗ್ಯ ಮಾತ್ರವಲ್ಲದೆ, ಮಾನಸಿಕ ಆರೋಗ್ಯಕ್ಕೂ ಮದ್ದು. ಪ್ರಾಣಾಯಾಮ, ಸೂರ್ಯ ನಮಸ್ಕಾರ, ಧ್ಯಾನ ಹಾಗೂ ಸರಳ ಆಸನಗಳನ್ನು ಮಾಡುವುದರ ಮೂಲಕವೂ ದೇಹ ಹಾಗೂ ಮಾನಸಿಕ ಆರೋಗ್ಯವನ್ನು ವೃದ್ಧಿಸಬಹುದು. ಕೋಪ, ಏಕಾಗ್ರತೆಯ ಕೊರತೆ, ಒತ್ತಡ ಈ ರೀತಿಯ ಮಾನಸಿಕ ಸಮಸ್ಯೆಗಳಿಗೆ ದಿನನಿತ್ಯ ಯೋಗ ಮಾಡುವ ಮೂಲಕ ಪರಿಹಾರ ಕಂಡುಕೊಳ್ಳಬಹುದು. ವಿದ್ಯಾರ್ಥಿ ಜೀವನದಿಂದಲೇ ನಿತ್ಯ ಯೋಗಾಸನಗಳನ್ನು ಅಭ್ಯಾಸ ಮಾಡಿದರೆ, ದೇಹ ಹಾಗೂ ಮನಸ್ಸು ನಮ್ಮ ಹಿಡಿತದಲ್ಲಿರುತ್ತದೆ. ಇತ್ತೀಚೆಗೆ ವಿದ್ಯಾರ್ಥಿಗಳು ಮತ್ತು ಉದ್ಯೋಗಿಗಳು ಕಂಪ್ಯೂಟರ್ ಮುಂದೆ ದೀರ್ಘಕಾಲ ಕುಳಿತುಕೊಳ್ಳುವುದು ಅಭ್ಯಾಸವಾಗಿದ್ದು, ಬದಲಾದ ಜೀವನಶೈಲಿಯಿಂದ ಅನೇಕ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗುತ್ತಿದ್ದಾರೆ. ಅವುಗಳನ್ನು ಹೋಗಲಾಡಿಸಲು ಯೋಗಾಸನಗಳೇ ಪರಿಹಾರವಾಗಿವೆ.

**ಯೋಗಾಭ್ಯಾಸ ಮಾಡುವಾಗ ಅನುಸರಿಸಬೇಕಾದ ಕ್ರಮಗಳು :**

* ಅಭ್ಯಾಸದ ಅವಧಿಗಳನ್ನು ಪ್ರಾರ್ಥನೆಯೊಂದಿಗೆ ಪ್ರಾರಂಭಿಸಿ.
* ಖಾಲಿ ಹೊಟ್ಟೆಯಲ್ಲಿ ಆಸನಗಳನ್ನು ಅಭ್ಯಾಸ ಮಾಡಿ.
* ಯೋಗಾಭ್ಯಾಸಗಳನ್ನು ನಿಧಾನವಾಗಿ, ಶಾಂತ ರೀತಿಯಲ್ಲಿ, ದೇಹ ಮತ್ತು ಉಸಿರಾಟದ ಅರಿವಿನೊಂದಿಗೆ ಮಾಡಿ.
* ದೇಹದ ಸುಲಭ ಚಲನೆಗೆ ಅನುಕೂಲವಾಗುವಂತೆ ಹಗುರವಾದ ಮತ್ತು ಆರಾಮದಾಯಕವಾದ ಹತ್ತಿ ಬಟ್ಟೆಗಳನ್ನು ಧರಿಸಿ.



* ಚೆನ್ನಾಗಿ ಗಾಳಿ ಇರುವ ಕೋಣೆ ಅಥವಾ ನಿಸರ್ಗದಲ್ಲಿ ಯೋಗಾಭ್ಯಾಸ ಮಾಡಿ.
* ಯೋಗಾಸನಗಳನ್ನು ಮಾಡಲು ಉತ್ತಮ ಹಿಡಿತವಿರುವ ಮ್ಯಾಟ್ ಬಳಸಿ.
* ದೇಹವನ್ನು ಬಿಗಿಯಾಗಿ ಹಿಡಿದುಕೊಳ್ಳದೆ ಸುಲಲಿತವಾಗಿ ಅಭ್ಯಾಸ ಮಾಡಿ.
* ಯೋಗವನ್ನು ಬಳಲಿಕೆ, ಅನಾರೋಗ್ಯ, ಅವಸರದಲ್ಲಿ ಅಥವಾ ತೀವ್ರ ಒತ್ತಡದ ಸ್ಥಿತಿಯಲ್ಲಿದ್ದಾಗ ಮಾಡಬೇಡಿ
* ಯೋಗ ಮಾಡಿದ ತಕ್ಷಣಕ್ಕೆ ನೀರು ಮತ್ತು ಆಹಾರವನ್ನು ಸೇವಿಸಬೇಡಿ.
* ಅನಾರೋಗ್ಯ , ಶಸ್ತ್ರಚಿಕಿತ್ಸೆಗೆ ಒಳಗಾದ ಸಂದರ್ಭ ಹಾಗೂ ಮೂಳೆ ಮುರಿತದ ಸಮಯದಲ್ಲಿ ಯೋಗಾಭ್ಯಾಸದಿಂದ ದೂರವಿರಿ.
* ಯೋಗಾಭ್ಯಾಸವನ್ನು ಧ್ಯಾನ/ ಆಳವಾದ ಮೌನ/ ಸಂಕಲ್ಪ/ ಶಾಂತಿ ಪಾಠ ಇತ್ಯಾದಿಗಳೊಂದಿಗೆ ಕೊನೆಗೊಳಿಸಿ.

ಯೋಗ ಮಾಡುವುದರಿಂದ ಆಗುವ ಲಾಭಗಳು :

* ಇದು ಒತ್ತಡವನ್ನು ನಿಯಂತ್ರಿಸುವುದು
* ದೈಹಿಕ ಸದೃಢತೆಯನ್ನು ಹೆಚ್ಚಿಸುವುದು
* ಉದ್ವೇಗವನ್ನು ಕಡಿಮೆ ಮಾಡುವುದು
* ಆರೋಗ್ಯಕರ ಜೀವನಕ್ಕೆ ದಾರಿಯಾಗುವುದು
* ಆತ್ಮಗೌರವವನ್ನು ಹೆಚ್ಚಿಸುವುದು
* ಮೂಳೆಯ ಆರೋಗ್ಯವನ್ನು ಉತ್ತಮಪಡಿಸುವುದು

**ಈ ವರ್ಷದ ಅಂತರರಾಷ್ಟ್ರೀಯ ಯೋಗ ದಿನದ ಮುಖ್ಯ ಧ್ಯೇಯ 'ಮಹಿಳಾ ಸಬಲೀಕರಣಕ್ಕಾಗಿ ಯೋಗ'. ಮಹಿಳೆಯರ ಯೋಗಕ್ಷೇಮವನ್ನು ಉತ್ತೇಜಿಸಲು ಮತ್ತು ಜಾಗತಿಕ ಆರೋಗ್ಯ ಮತ್ತು ಶಾಂತಿಯನ್ನು ಮುನ್ನಡೆಸಲು ಯೋಗ ಅತ್ಯವಶ್ಯಕವಾಗಿದೆ.**

* ಹೃದಯ ಮತ್ತು ಮೆದುಳಿನ ಕಾರ್ಯಾಚರಣೆಯನ್ನು ಚುರುಕುಗೊಳಿಸು ವುದು.
* ಸ್ನಾಯುವಿನ ಬಲವನ್ನು ಹೆಚ್ಚಿಸುವುದು
* ದೇಹದಲ್ಲಿನ ಕೊಲೆಸ್ಟ್ರಾಲ್ ಮಟ್ಟವನ್ನು ಹಿಡಿತದಲ್ಲಿಡು ವುದು.
* ದೇಹದ ತೂಕವನ್ನು ಕಡಿಮೆ ಮಾಡುವುದು
* ಆನಂದ ಮತ್ತು ಸಂತೋಷವನ್ನು ನೀಡುವುದು
* ರಕ್ತದಲ್ಲಿ ಸಕ್ಕರೆಯಂಶವನ್ನು ಕಡಿಮೆ ಮಾಡುವುದು
* ರಕ್ತ ಪರಿಚಲನೆಯನ್ನು ಉತ್ತಮಪಡಿಸುವುದು
* ಮನಸ್ಸಿನ ಏಕಾಗ್ರತೆಯನ್ನು ಉಂಟು ಮಾಡುವುದು.
* ಮಾನಸಿಕ ಸಮತೋಲನವನ್ನು ಸುಧಾರಿಸುವುದು
* ಶ್ವಾಸಕೋಶವನ್ನು ಉತ್ತಮಪಡಿಸುವುದು
* ಮನಃಶ್ಯಾಂತಿ ಉಂಟುಮಾಡುವುದು.
* ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವುದು.
* ದೇಹದ ಕಾಂತಿಯನ್ನು ಹೆಚ್ಚಿಸುವುದು
* ಉತ್ತಮ ನಿದ್ರೆಗೆ ಸಹಾಯ ಮಾಡುವುದು
* ವಿವಿಧ ಬಗೆಯ ಕಾಯಿಲೆಗಳಿಂದ ದೂರ ಮಾಡುವುದು

ಯೋಗದಿಂದ ಇಷ್ಟೆಲ್ಲಾ ಪ್ರಯೋಜನಗಳಿದ್ದರೂ ಇದನ್ನು ಮಾಡುವವರ ಸಂಖ್ಯೆ ತೀರಾ ವಿರಳ. ಜನತೆ ಒತ್ತಡದ ಬದುಕಿನಿಂದ ಹೊರಬಂದು ದಿನದ ಸ್ವಲ್ಪ ಸಮಯವನ್ನಾದರೂ ಯೋಗಕ್ಕೆ ಮೀಸಲಿಟ್ಟು ನಮ್ಮ ಆರೋಗ್ಯ ನಮ್ಮ ಕೈಯ್ಯಲ್ಲಿದೆ ಎಂಬ ಸತ್ಯವನ್ನು ಅರಿತು ಯೋಗಾಭ್ಯಾಸವನ್ನು ನಿತ್ಯ ಕಾಯಕದಂತೆ ಮಾಡುವುದು ಒಳಿತು.

- ಡಾ. ಶಿವಯ್ಯ ಎಸ್
ವಿಶ್ರಾಂತ ಪ್ರಾಧ್ಯಾಪಕರು, ದಾವಣಗೆರೆ
s.shivaiah26@gmail.com

# ಪಂಚಮಸಾಲಿ ಪೀಠಕ್ಕೆ ಸಂಸದೆ ಪ್ರಿಯಾಂಕ ಭೇಟಿ



ಮಲೇಬೆನ್ನೂರು, ಜೂ.19- ಚಿಕ್ಕೋಡಿ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾದ ಪ್ರಿಯಾಂಕ ಜಾರಕಿಹೊಳಿ ಹಾಗೂ ಅವರ ಸಹೋದರ ರಾಹುಲ್ ಜಾರಕಿಹೊಳಿ ಅವರು ಹನಗವಾಡಿ ಸಮೀಪದ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠಕ್ಕೆ ಭೇಟಿ ನೀಡಿ ವಚನಾನಂದ ಶ್ರೀಗಳ ಆಶೀರ್ವಾದ ಪಡೆದರು.

ತದನಂತರ ಸಂಸದೆ ಪ್ರಿಯಾಂಕ ಜಾರಕಿಹೊಳಿ ಅವರು ಕಾಗಿನೆಲೆ ಗುರುಪೀಠದ ಬೆಳ್ಳೂಡಿ ಶಾಖಾ ಮಠಕ್ಕೆ ಭೇಟಿ ನೀಡಿ. ಶ್ರೀ ರೇವಣಸಿದ್ದೇಶ್ವರ ಸನ್ನಿಧಿಗೆ ಪೂಜೆ ಸಲ್ಲಿಸಿ, ಭಕ್ತ ಕನಕದಾಸರ ಮತ್ತು ಸಂಗೊಳ್ಳಿ ರಾಯಣ್ಣ ಪ್ರತಿಮೆಗಳಿಗೆ ಮಾಲಾರ್ಪಣೆ ಮಾಡಿದರು.

ಶ್ರೀಗಳು ಬೆಂಗಳೂರು ಶಾಖಾ ಮಠದಲ್ಲಿದ್ದ ಕಾರಣದಿಂದ ಅವರ ಭೇಟಿ ಸಾಧ್ಯವಾಗಲಿಲ್ಲ.

ಜಗಳೂರು ಶಾಸಕ ದೇವೇಂದ್ರಪ್ಪ, ಕಾಂಗ್ರೆಸ್ ಮುಖಂಡರಾದ ನಂದಿಗಾವಿ ಶ್ರೀನಿವಾಸ್, ಹೊದಿಗೆರೆ ರಮೇಶ್, ಕೆ.ಪಿ ಪಾಲಯ್ಯ, ಗುತ್ತೂರು ಹಾಲೇಶಗೌಡ, ಹಿರಿಯ ವಕೀಲ ಪ್ರಕಾಶ್ ಪಾಟೀಲ್, ತಾಲ್ಲೂಕು ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಕುಂಬಳೂರು ವಾಸು, ರಾಘು ದೊಡ್ಡ ಮನಿ, ಉಕ್ಕಡಗಾತ್ರಿ ಮಂಜು, ಪಾರ್ವತಿ, ವಿಜಯಶ್ರೀ, ಗೌರಮ್ಮ, ಕೊಕ್ಕನೂರು ಸೋಮಣ್ಣ, ನಿವೃತ್ತ ಶಿಕ್ಷಕ ಜಿಗಳಿ ಜಿ.ಆರ್ ನಾಗರಾಜ್, ಹನಗವಾಡಿ ಹನುಮಂತಪ್ಪ, ಡಿ.ಕೆ ಶರತ್, ಕೊಂಡಜ್ಜಿ ತಿಪ್ಪಣ್ಣ, ಮಾರುತಿ ದಾಸರ್ ಮತ್ತಿತರರಿದ್ದರು.

# ಭತ್ತದ ಬೆಂಬಲ ಬೆಲೆ 117 ರೂ. ಹೆಚ್ಚಳ

**(1ನೇ ಪುಟದಿಂದ)** ಸರ್ಕಾರ 2 ಲಕ್ಷ ಕೋಟಿ ರೂ.ಗಳನ್ನು ನೀಡಲಿದೆ. ಇದು ಕಳೆದ ಅವಧಿಗಿಂತ 35 ಸಾವಿರ ಕೋಟಿ ರೂ.ಗಳಷ್ಟು ಹೆಚ್ಚಾಗಿದೆ. ಸಾಮಾನ್ಯ ಭತ್ತದ ಬೆಂಬಲ ಬೆಲೆಯನ್ನು ಕ್ವಿಂಟಾಲ್‌ಗೆ 117 ರೂ.ಗಳಷ್ಟು ಹೆಚ್ಚಿಸಿ 2,300 ರೂ.ಗಳಿಗೆ ನಿಗದಿ ಪಡಿಸಲಾಗಿದೆ. 'ಎ' ಗ್ರೇಡ್ ಭತ್ತದ ಬೆಂಬಲ ಬೆಲೆಯನ್ನು 2,320 ರೂ.ಗಳಿಗೆ ನಿಗದಿ ಪಡಿಸಲಾಗಿದೆ. ಹೈಬ್ರಿಡ್ ಜೋಳದ ಬೆಂಬಲ ಬೆಲೆಯನ್ನು 191 ರೂ.ಗಳಷ್ಟು ಹೆಚ್ಚಿಸಿ 3,371 ರೂ.ಗಳಿಗೆ ನಿಗದಿ ಪಡಿಸಲಾಗಿದೆ.

ತೊಗರಿ ಬೇಳೆ ಬೆಂಬಲ ಬೆಲೆಯನ್ನು 550 ರೂ.ಗಳಷ್ಟು ಹೆಚ್ಚಿಸಿ 7,550 ರೂ.ಗಳಿಗೆ ನಿಗದಿ ಪಡಿಸಲಾಗಿದೆ. ಆಮದು ಅವಲಂಬನೆ ತಪ್ಪಿಸಲು ಈ ಕ್ರಮ ನೆರವಾಗಲಿದೆ. ಸೂರ್ಯಕಾಂತಿ ಬೆಂಬಲ ಬೆಲೆಯನ್ನು 520 ರೂ. ಹೆಚ್ಚಿಸಿ 7,280 ರೂ.ಗಳಿಗೆ ನಿಗದಿ ಪಡಿಸಲಾಗಿದೆ. ಶೇಂಗಾ ಬೆಂಬಲ ಬೆಲೆಯನ್ನು 406 ರೂ. ಹೆಚ್ಚಿಸಿ 6,783 ರೂ.ಗಳಿಗೆ ಹಾಗೂ ಸೋಯಾಬೀನ್ ಬೆಂಬಲ ಬೆಲೆಯನ್ನು 292 ರೂ. ಹೆಚ್ಚಿಸಿ 4,862 ರೂ.ಗಳಿಗೆ ನಿಗದಿ ಪಡಿಸಲಾಗಿದೆ. ಹತ್ತಿ ಬೆಂಬಲ ಬೆಲೆಯನ್ನು 501 ರೂ.ಗಳಷ್ಟು ಹೆಚ್ಚಿಸಿ 7,121 ರೂ.ಗಳಿಗೆ ನಿಗದಿ ಪಡಿಸಲಾಗಿದೆ ಎಂದು ವೈಷ್ಣವ್ ಹೇಳಿದ್ದಾರೆ.

# ಹೈಸ್ಕೂಲ್ ಮೈದಾನದಲ್ಲಿ ಯೋಗ ದಿನ



**(1ನೇ ಪುಟದಿಂದ)** ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ವಹಿಸಿಕೊಳ್ಳಲಿದ್ದಾರೆ. ಶ್ರೀ ಗಂಗಾ ಆರೋಗ್ಯ ಮಹಾಮನೆ ಸ್ಥಾಪಕ ಚನ್ನಬಸವಣ್ಣನವರು ಯೋಗ ಪ್ರಾತ್ಯಕ್ಷಿಕೆ ನೀಡಲಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ನೆರವೇರಿಸಲಿದ್ದಾರೆ. ಶಾಸಕ ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಮತ್ತಿತರರು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ.

ಜಿಲ್ಲಾ ಆಯುಷ್ ಅಧಿಕಾರಿ ಡಾ. ಬಿ.ಯು. ಯೋಗೇಂದ್ರಕುಮಾರ್ ಮಾತನಾಡಿ, ಆಯುಷ್ ಇಲಾಖೆಯ ವತಿಯಿಂದ ಜಿಲ್ಲೆಯ ಹಾಸ್ಟೆಲ್ ಮಕ್ಕಳಿಗೆ ಹತ್ತು ದಿನಗಳ ಯೋಗ ತರಬೇತಿ ಶಿಬಿರಗಳನ್ನು ಕೈಗೊಳ್ಳಲಾಗುತ್ತಿದೆ. ಆಯುಷ್ ವೈದ್ಯರು ಯೋಗ ತರಬೇತಿ ನೀಡುತ್ತಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್ ಉಪಸ್ಥಿತರಿದ್ದರು.

# ಈಡಿಗ ಮಹಾಮಂಡಳಿಯ ಪದಾಧಿಕಾರಿಗಳ ಪಟ್ಟಿ ಘೋಷಣೆ

ದಾವಣಗೆರೆ, ಜೂ.19- ಚನ್ನಗಿರಿ ತಾಲ್ಲೂಕು ಕಬ್ಬಳ ಗ್ರಾಮದಲ್ಲಿ ಈಚೆಗೆ ನಡೆದ ರಾಷ್ಟ್ರೀಯ ಈಡಿಗ ಮಹಾಮಂಡಳಿಯ ವಾರ್ಷಿಕ ಸಭೆಯಲ್ಲಿ ಪ್ರಣವಾನಂದ ಶ್ರೀಗಳ ಸಾನ್ನಿಧ್ಯದಲ್ಲಿ ಜಿಲ್ಲೆ ಹಾಗೂ ತಾಲ್ಲೂಕಿನ ಪದಾಧಿಕಾರಿ ಮತ್ತು ಯುವ ಹಾಗೂ ಮಹಿಳಾ ಘಟಕದ ಪದಾಧಿಕಾರಿ ಪಟ್ಟಿ ಬಿಡುಗಡೆ ಮಾಡಿದರು.

ರಾಜ್ಯ ಗೌರವಾಧ್ಯಕ್ಷರಾಗಿ ಎಚ್.ವೈ. ಆನಂದ್, ಜಿಲ್ಲಾಧ್ಯಕ್ಷರಾಗಿ ಆರ್. ಪ್ರತಾಪ್, ಜಿಲ್ಲಾ ಉಪಾಧ್ಯಕ್ಷರಾಗಿ ಗಿರೀಶ್, ದಾನೇಶ್, ರಾಜೇಶ್, ರಮೇಶ್ ಸಿಂಗ್ರಿಹಳ್ಳಿ, ಪ್ರಧಾನ ಕಾರ್ಯದರ್ಶಿಯಾಗಿ ಪಿ. ಪ್ರಕಾಶ್, ಜಂಟಿ ಕಾರ್ಯದರ್ಶಿ ಮಹಾಂತೇಶ್, ಜಿಲ್ಲಾ ಸಂಚಾಲಕ ಡಿ.ಸಿ. ಸುರೇಶ್, ಸಂಘಟನಾ ಕಾರ್ಯದರ್ಶಿಯಾಗಿ ಬಿ.ಎನ್. ಮಲ್ಲಿಕಾರ್ಜುನ್ ಆಯ್ಕೆಯಾಗಿದ್ದಾರೆ.

**ರಾಜ್ಯ ಮತ್ತು ಜಿಲ್ಲಾ ಮಹಿಳಾ ಘಟಕ :** ರಾಜ್ಯ ಮಹಿಳಾ ಉಪಾಧ್ಯಕ್ಷೆ ಸ್ಥಾನಕ್ಕೆ ಯಶೋಧಮ್ಮ, ಜಿಲ್ಲಾಧ್ಯಕ್ಷೆ ದೀಪಾ, ಚನ್ನಗಿರಿ ತಾಲ್ಲೂಕು ಅಧ್ಯಕ್ಷೆ ಧನಲಕ್ಷ್ಮಿ ಆಯ್ಕೆಯಾಗಿದ್ದಾರೆ.

**ದಾವಣಗೆರೆ ತಾಲ್ಲೂಕು ಕಮಿಟಿ :** ಗೌರವಾಧ್ಯಕ್ಷರಾಗಿ ರಮೇಶ್ ನರಗನಹಳ್ಳಿ, ಅಧ್ಯಕ್ಷರಾಗಿ ವೆಂಕಟೇಶ್ ಕಿತ್ತೂರು, ಉಪಾಧ್ಯಕ್ಷರಾಗಿ ಸುನೀಲ್ ಚಿನ್ನಸಮುದ್ರ.

**ಜಗಳೂರು ತಾಲ್ಲೂಕು ಕಮಿಟಿ :** ಗೌರವಾಧ್ಯಕ್ಷರಾಗಿ ಅಜ್ಜಣ್ಣ ಮೆದಿಕೇರನಹಳ್ಳಿ, ಅಧ್ಯಕ್ಷರಾಗಿ ಗೋವಿಂದಪ್ಪ ಮರಿಕುಂಟೆ, ಉಪಾಧ್ಯಕ್ಷ ಸುರೇಶ್ ಸೋಮನಹಳ್ಳಿ, ಕಾರ್ಯದರ್ಶಿ ರಮೇಶ್ ಹೊಸಕೆರೆ ಮತ್ತು ಸಂಘಟನಾ ಕಾರ್ಯದರ್ಶಿಯಾಗಿ ಅಜ್ಜಯ್ಯ ಆಯ್ಕೆಯಾಗಿದ್ದಾರೆ.

**ಚನ್ನಗಿರಿ ತಾಲ್ಲೂಕು ಕಮಿಟಿ :** ಗೌರವಾಧ್ಯಕ್ಷ ಸ್ಥಾನಕ್ಕೆ ಪ್ರಭಾಕರ್ ಕಬ್ಬಳ, ಅಧ್ಯಕ್ಷರಾಗಿ ಹಾಲೇಶಪ್ಪ ಕಬ್ಬಳ, ಉಪಾಧ್ಯಕ್ಷರಾಗಿ ಸುರೇಶ್ ಸೇವಾನಗರ ಆಯ್ಕೆಯಾಗಿದ್ದಾರೆ.

**ನ್ಯಾಮತಿ ತಾಲ್ಲೂಕು ಕಮಿಟಿ :** ಗೌರವಾಧ್ಯಕ್ಷ ಸ್ಥಾನಕ್ಕೆ ಸುರೇಶ್ ರಾಣೇಬೆನ್ನೂರು, ಅಧ್ಯಕ್ಷ ಸ್ಥಾನಕ್ಕೆ ರಾಘವೇಂದ್ರ ಗೋಪೇನಹಳ್ಳಿ, ಉಪಾಧ್ಯಕ್ಷ ಸ್ಥಾನಕ್ಕೆ ನಾಗರಾಜಪ್ಪ ಗೋಪೇನಹಳ್ಳಿ ಆಯ್ಕೆಯಾಗಿದ್ದಾರೆ.

**ಹೊನ್ನಾಳಿ ತಾಲ್ಲೂಕು ಕಮಿಟಿ :** ಗೌರವಾಧ್ಯಕ್ಷ ಸ್ಥಾನಕ್ಕೆ ಜಯ್ಯಪ್ಪ ಇ.ಟಿ. ಕುಳಗಟ್ಟೆ, ಅಧ್ಯಕ್ಷ ಮಹಾಂತೇಶ್ ಇ.ಟಿ. ಕುಳಗಟ್ಟೆ, ಉಪಾಧ್ಯಕ್ಷ ತಿಪ್ಪೇಶ್, ಕಾರ್ಯದರ್ಶಿ ಇ.ಟಿ ರಂಗಸ್ವಾಮಿ, ಸದಸ್ಯರಾಗಿ ಇ.ಟಿ. ದಾಸಪ್ಪ ಮತ್ತು ರಾಜು ಚನ್ನಾಪುರ ಆಯ್ಕೆಯಾಗಿದ್ದಾರೆ.

**ದಾವಣಗೆರ ಜಿಲ್ಲಾ ಯುವ ಘಟಕ :** ಗೌರವಾಧ್ಯಕ್ಷರಾಗಿ ಶಿವರಾಜ್ ಎಸ್‌ಓಜಿ ಕಾಲೋನಿ, ಅಧ್ಯಕ್ಷ ಸಂತೋಷ್ ಅಣಜಿ, ಉಪಾಧ್ಯಕ್ಷರಾಗಿ ನಿಖಿಲ್ ಕೊಡಗನೂರು, ಸ್ವಾಮಿ ಮರಿಕುಂಟೆ, ಮಂಜುನಾಥ್ ಭಾರತ್ ಕಾಲೋನಿ, ಕಾರ್ಯದರ್ಶಿಯಾಗಿ ರಾಘವೇಂದ್ರ ಕೊಡಗನೂರು ಆಯ್ಕೆಯಾಗಿದ್ದಾರೆ.

# ಅಂತರರಾಷ್ಟ್ರೀಯ ಯೋಗ ದಿನ ಇಂದು ಯೋಗಾಸನ, ಯೋಗ ನೃತ್ಯ ಸ್ಪರ್ಧೆ

ದಾವಣಗೆರೆ, ಜೂ. 19 – ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ನಾಳೆ ದಿನಾಂಕ 20ರ ಗುರುವಾರ ಜಿಲ್ಲಾ ಮಟ್ಟದ ಮುಕ್ತ ಯೋಗಾಸನ ಸ್ಪರ್ಧೆ, ವಿದ್ಯಾರ್ಥಿಗಳಿಗಾಗಿ ಚಿತ್ರಕಲಾ ಸ್ಪರ್ಧೆ ಹಾಗೂ ಯೋಗ ನೃತ್ಯ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಜಿಲ್ಲಾ ಯೋಗ ಒಕ್ಕೂಟದ ಅಧ್ಯಕ್ಷ ವಾಸುದೇವ ರಾಯ್ಕರ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಜಯದೇವ ಸರ್ಕಲ್‌ನಲ್ಲಿರುವ ಶಿವಯೋಗ ಮಂದಿರದಲ್ಲಿ ಬೆಳಿಗ್ಗೆ 9 ಗಂಟೆಗೆ ಜಿಲ್ಲಾ ಮಟ್ಟದ ಮುಕ್ತ ಯೋಗಾಸನ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಹೇಳಿದರು.

10 ಗಂಟೆಯಿಂದ ಯೋಗ ನೃತ್ಯ ಸ್ಪರ್ಧೆ ನಡೆಯಲಿದೆ. 10.30ರಿಂದ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಜೂ. 21ರಂದು ರಕ್ತದಾನ ಶಿಬಿರ ಸಹ ಆಯೋಜಿಸಲಾಗಿದೆ ಎಂದು ಹೇಳಿದರು.

ಯೋಗ ದಿನಾಚರಣೆಯ ಹಿನ್ನೆಲೆಯಲ್ಲಿ ನಗರದ ವಿವಿಧ ಯೋಗ ಸಂಸ್ಥೆಗಳ ಜೊತೆಗೂಡಿ ಯೋಗ ತರಬೇತಿ ಶಿಬಿರವನ್ನೂ ಸಹ ನಡೆಸಲಾಗುತ್ತಿದೆ. ಪಾಂಡೋಮಟ್ಟಿ ವಿರಕ್ತಮಠದ ಶ್ರೀ ಗುರುಬಸವ ಸ್ವಾಮೀಜಿ ಕಾರ್ಯಕ್ರಮಗಳ ಉದ್ಘಾಟನೆ ನೆರವೇರಿಸಲಿದ್ದಾರೆ ಎಂದು ಹೇಳಿದರು.

# ಸೌರ ಘಟಕ ಯೋಜನೆಗೆ ತಾತ್ಕಾಲಿಕ ತಡೆ

**(1ನೇ ಪುಟದಿಂದ)** ಪೌಲ್ಟ್ರಿ ಫಾರಂಗಳಿಗೆ ನೀಡಲಾಗಿದ್ದ ಅನುಮತಿಯನ್ನು ಗ್ರಾಮ ಪಂಚಾಯ್ತಿಯವರು ರದ್ದುಗೊಳಿಸಿದ್ದಾರೆ. ನಂತರ ಪೌಲ್ಟ್ರಿ ಫಾರಂಗಳು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದಾರೆ. ನಾವೂ ಸಹ ವಕೀಲರ ಮೂಲಕ ಕ್ರಮ ತೆಗೆದುಕೊಳ್ಳುತ್ತಿದ್ದೇವೆ ಎಂದು ಜಿಲ್ಲಾಧಿಕಾರಿ ಹೇಳಿದರು.

ಪೌಲ್ಟ್ರಿ ಫಾರಂಗಳಿಗೆ ಅನುಮತಿ ನೀಡುವಾಗ ಸ್ವಚ್ಛತೆ ಷರತ್ತುಗಳನ್ನು ಪಾಲಿಸಬೇಕೆಂದು ತಿಳಿಸಲಾಗಿರುತ್ತದೆ. ಈ ನಿಯಮಗಳನ್ನು ಪಾಲಿಸುವ ಬಗ್ಗೆ ಮುಂದಿನ ವಾರ ಪೌಲ್ಟ್ರಿ ಫಾರಂಗಳ ಮಾಲೀಕರ ಸಭೆ ಮಾಡಲಿದ್ದೇವೆ. ಷರತ್ತುಗಳನ್ನು ಪಾಲಿಸದವರ ಅನುಮತಿ ರದ್ದುಗೊಳಿಸುತ್ತೇವೆ ಎಂದು ಹೇಳಿದರು.

# ಸಂಶೋಧನೆ: ರಾಜ್ಯದ ಕೊಡುಗೆ 22%

**(1ನೇ ಪುಟದಿಂದ)** ರಾಜ್ಯದಲ್ಲಿ 250 ಇಂಜಿನಿಯರಿಂಗ್ ಕಾಲೇಜು, 44 ವಿಶ್ವ ವಿದ್ಯಾಲಯ ಹಾಗೂ 25 ಸಾವಿರ ನವೋದ್ಯಮಗಳಿವೆ. ಕರ್ನಾಟಕ ಸಂಶೋಧನೆ ಹಾಗೂ ಅಭಿವೃದ್ಧಿಯಲ್ಲಿ ಭಾರತದ ರಾಜಧಾನಿ ಎಂದೂ ಅವರು ಹೇಳಿದ್ದಾರೆ.

# ರಾಣೇಬೆನ್ನೂರಿನಲ್ಲಿ ನಾಳೆ ಮಹಿಳಾ ಸಬಲೀಕರಣಕ್ಕಾಗಿ ಯೋಗ

ರಾಣೇಬೆನ್ನೂರು, ಜೂ. 19 - ಮಹಿಳಾ ಸಬಲೀಕರಣಕ್ಕಾಗಿ ಪತಂಜಲಿ ಯೋಗ ಪೀಠವು ಕೆ.ಎಲ್. ಸಹಯೋಗದೊಂದಿಗೆ ರಾಣೇಬೆನ್ನೂರು ರಾಜರಾಜೇಶ್ವರಿ ಮಹಿಳಾ ಕಾಲೇಜು ಆವರಣದಲ್ಲಿ ನಾಡಿದ್ದು ದಿನಾಂಕ 21ರಂದು ಬೆಳಿಗ್ಗೆ ವಿವೇಕಾನಂದಾಶ್ರಮದ ಶ್ರೀ ಪ್ರಕಾಶಾನಂದ ಮಹಾರಾಜರ ಸಾನ್ನಿಧ್ಯದಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಏರ್ಪಡಿಸಲಾಗಿದೆ.

ಶಾಸಕ ಪ್ರಕಾಶ ಕೋಳಿವಾಡ, ಬ್ರಹ್ಮಾಕುಮಾರಿ ಮಾಲತಿ, ಮಾಜಿ ಶಾಸಕ ಅರುಣಕುಮಾರ್ ಪೂಜಾರ, ತಹಶೀಲ್ದಾರ್ ಸುರೇಶ ಕುಮಾರ, ಡಿವೈಎಸ್ಪಿ ಗಿರೀಶ ಬೋಜಣ್ಣನವರ್, ಬಿಇಓ ಎಂ.ಎಚ್.ಪಾಟೀಲ, ವಿ.ಪಿ.ಲಿಂಗನಗೌಡ, ರವೀಂದ್ರ ಬಿಜಾಪೂರ, ಜ್ಯೋತಿ ಜಂಬಗಿ, ವಜ್ರೇಶ್ವರಿ ಲದ್ವಾ, ಆರ್.ಎನ್. ರಾಠೋಡ ಭಾಗವಹಿಸುವರು.

# ಮುಂಗಾರು 20ರಷ್ಟು ಕಡಿಮೆ

**(1ನೇ ಪುಟದಿಂದ)** ಇದರಿಂದಾಗಿ ಬಿರು ಬಿಸಿಲಿನಿಂದ ತತ್ತರಿಸಿರುವ ಉತ್ತರ ಭಾರತ, ತಂಪಿಗಾಗಿ ಇನ್ನಷ್ಟು ದಿನ ಕಾಯಬೇಕಿದೆ. ಆದರೆ, ಮಹಾರಾಷ್ಟ್ರ, ಛತ್ತೀಸ್‌ಘಡ, ಒಡಿಶಾ, ಆಂಧ್ರ ಕರಾವಳಿ, ಬಂಗಾಳಕೊಲ್ಲಿಯ ವಾಯುವ್ಯ, ಬಿಹಾರ ಹಾಗೂ ಜಾರ್ಖಂಡ್‌ಗಳಲ್ಲಿ ಮುಂಗಾರು ಮೂರ್ನಾಲ್ಕು ದಿನಗಳಲ್ಲಿ ಉತ್ತಮವಾಗಲಿದೆ ಎಂದು ಇಲಾಖೆ ಹೇಳಿದೆ.

ಜೂನ್ 1ರಿಂದ 18ರ ನಡುವೆ ದೇಶದಲ್ಲಿ 64.5 ಮಿ.ಮೀ. ಮಳೆಯಾಗಿದೆ. ಇದು ದೀರ್ಘಾವಧಿಯ ಸರಾಸರಿಯಾದ 80.6 ಮಿ.ಮೀ.ಗಿಂತ ಶೇ.20ರಷ್ಟು ಕಡಿಮೆಯಾಗಿದೆ.

# ಜಿಲ್ಲಾ ಕಾರಾಗೃಹದಲ್ಲಿ ಇಂದು ಯೋಗ ತರಬೇತಿ

ಜಿಲ್ಲಾ ಆಯುಷ್ ಇಲಾಖೆ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ದಾವಣಗೆರೆ ಜಿಲ್ಲಾ ಯೋಗ ಒಕ್ಕೂಟದ ಸಹಯೋಗದಲ್ಲಿ 10ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಇಂದು ಜಿಲ್ಲಾ ಕಾರಾಗೃಹದಲ್ಲಿ ಯೋಗ ತರಬೇತಿ ಶಿಬಿರ ನಡೆಯಲಿದೆ. ಬೆಳಿಗ್ಗೆ 7.30 ರಿಂದ 8.30ರವರೆಗೆ ನಡೆಯುವ ಶಿಬಿರದಲ್ಲಿ ಯೋಗ ಶಿಕ್ಷಕ ಬಿ.ಎಸ್. ನೀಲಪ್ಪ (94812 17798) ಯೋಗ ತರಬೇತಿ ನೀಡಲಿದ್ದಾರೆ.

# ಬದಲಾವಣೆಗೆ ಒತ್ತಡವಿಲ್ಲ

**(1ನೇ ಪುಟದಿಂದ)** ಸಿದ್ದರಾಮಯ್ಯ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸುದ್ದಿ ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿರುವುದು ಸುಳ್ಳು ಹಾಗೂ ಸತ್ಯಕ್ಕೆ ದೂರವಾದುದು, ಕಾನೂನು ಏನು ಹೇಳುತ್ತದೆಯೋ ಅದನ್ನೇ ಮಾಡುತ್ತೇವೆ ಎಂದರು.

ಪೊಲೀಸರಿಗೆ ಪ್ರಕರಣದಲ್ಲಿ ಎಲ್ಲಾ ಸ್ವಾತಂತ್ರ್ಯ ನೀಡಿದ್ದು, ಕಾನೂನಿನ ಪ್ರಕಾರ ತನಿಖೆ ಮಾಡಲು ಸೂಚಿಸಲಾಗಿದೆ. ಎಸ್‌ಪಿಪಿ ಬದಲಾವಣೆ ಪ್ರಸ್ತಾವನೆ ನನ್ನ ಮುಂದಿಲ್ಲ ಎಂದು ಅವರು ಮತ್ತೊಮ್ಮೆ ಸ್ಪಷ್ಟಪಡಿಸಿದರು.

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್ ಬೇಕಾಗಿದ್ದಾರೆ. ವಸತಿ ಸೌಲಭ್ಯವಿರುತ್ತದೆ.
ಸಂಪರ್ಕಿಸಿ : ಸಿ.ಜಿ.ಆಸ್ಪತ್ರೆ ಹಿಂಭಾಗ, ದಾವಣಗೆರೆ.
98450-35710, 77607-39990

**'ಸಿದ್ದ' ನವೋದಯ**
ಕೋಚಿಂಗ್ ಸೆಂಟರ್ - ದಾವಣಗೆರೆ
ಸ್ಥಳ 1 : ಸೇಂಟ್ಸ್ ಜಾನ್ಸ್ ಸ್ಕೂಲ್ ಬಿಲ್ಡಿಂಗ್ ಶಿವಕುಮಾರಸ್ವಾಮಿ ಬಡಾವಣೆ (ಬೆಳಿಗ್ಗೆ).
2 : ಶ್ರೀ ಸಿದ್ದ ಸಾಯಿ ಕೃಪ ಸಪ್ತಗಿರಿ ಶಾಲೆ ಹಿಂಭಾಗ, ಎಸ್.ಎಸ್. ಬಡಾವಣೆ ಬಿ ಬ್ಲಾಕ್ (ಸಂಜೆ)
3 : ಡಾ. ಸಿ.ವಿ.ರಾಮನ್ ಕಾಲೇಜ್ ಬಿಲ್ಡಿಂಗ್ ಶ್ರೀ ಸೋಮೇಶ್ವರ ವಿದ್ಯಾಲಯ ಪಕ್ಕ, ನಿಟ್ಟುವಳ್ಳಿ ರಸ್ತೆ (ಸಂಜೆ)
99807 26426, 98455 62991

**ಮನೆ ಬಾಡಿಗೆ ಅಥವಾ ಲೀಸ್**
ಬಿಎಸ್ಸೆನ್ನೆಲ್ ಹಿಂಭಾಗದ ರಸ್ತೆ, ಶಂಕರ್ ವಿಹಾರ್, 1ನೇ ಮುಖ್ಯರಸ್ತೆ, 6ನೇ ಕ್ರಾಸ್, 1ST ಫ್ಲೋರ್, ಬ್ಲಡ್ ಬ್ಯಾಂಕ್ ಹಿಂಭಾಗ 2BHK ಮನೆ ಬಾಡಿಗೆ ಅಥವಾ ಲೀಸ್‌ಗಿದೆ. (ಸಸ್ಯಹಾರಿಗಳಿಗೆ ಮಾತ್ರ)
89517 16682
98860 45659

**ಬೇಕಾಗಿದ್ದಾರೆ**
ಅನುಭವವುಳ್ಳ ಯುವತಿಯರು ಬಟ್ಟೆ ಅಂಗಡಿ ಕೆಲಸಕ್ಕೆ ಜಾಕಿ ಶೋರೂಮ್‌ಗೆ ಬೇಕಾಗಿದ್ದಾರೆ. ದರ್ಶನ್ ಆರ್ಕೆಡ್ ಡೆಂಟಲ್ ಕಾಲೇಜ್ ರೋಡ್, ದಾವಣಗೆರೆ. ಸಂಪರ್ಕಿಸಿ :
08192 224842
ಸಮಯ : 11Am to 6Pm ಬರುವಾಗ ದಯವಿಟ್ಟು ಫೋಟೋ ಬಯೋಡೇಟಾ ತನ್ನಿ

**ಬೇಕಾಗಿದ್ದಾರೆ**
ಪಿಯುಸಿ ಆಗಿರುವ ಮಹಿಳಾ ಅಭ್ಯರ್ಥಿಗಳು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ. ಬಯೋಡಾಟಾ, ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ಆರ್ಚೀಸ್ ಗ್ಯಾಲರಿ
ಶರಾವತಿ ಲೇಡಿಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
ಮೊ : 96324-33166

**ಸೂರ್ಯ ನವೋದಯ**
ಕೋಚಿಂಗ್ ಸೆಂಟರ್, ದಾವಣಗೆರೆ
ತರಬೇತಿ ನೀಡುವವರು ಶ್ರೀ ಸುರೇಶ ಪಿ. ಮುರಗಿ ಶ್ರೀಮತಿ ತೇಜಸ್ವಿನಿ ಅಭಿನಂದನ್ B.Sc, B.Ed. ತರಗತಿಗಳು ನಡೆಯುವ ಸ್ಥಳ : KSS ಕಾಲೇಜ್, ಸರಸ್ವತಿ ನಗರ, ಬೆಳಿಗ್ಗೆ 6ರಿಂದ 7.45, AGB ಕಾಲೇಜ್ ಈಶ್ವರಮ್ಮ ಶಾಲೆಯ ಹಿಂಭಾಗ ಸಂಜೆ 5.15 ರಿಂದ 7 ರವರೆಗೆ.
9902824909, 98447 48763

**ಬೇಕಾಗಿದ್ದಾರೆ**
ಕನ್ನಡ ಮಾಧ್ಯಮಕ್ಕೆ ಬಿಎ, ಬಿಎಡ್, ಆಗಿರುವ ಶಿಕ್ಷಕಿ ಬೇಕಾಗಿದ್ದಾರೆ. (ಸಮಾಜ ವಿಜ್ಞಾನ)
ನಿಟ್ಟುವಳ್ಳಿ ದಾವಣಗೆರೆ
90359 16750, 95358 85997

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**FLAT FOR SALE**
2BHK, SQ.FT : 1325
Flat for Lease, 3 BHK, SQFT : 1888
Vidyanagar, last city bus stop, AM Apartment, Nainika Prime Rose
89519 38228, 80502 22181

**ಹೋಟೆಲ್ ಮಾರಾಟಕ್ಕಿದೆ**
Zoca Cafe Franchise
ಮಾಮಾಜ್ ಜಾಯಿಟ್ ರೋಡ್, 3ನೇ ಮೇನ್, 4ನೇ ಕ್ರಾಸ್, ದಾವಣಗೆರೆ.
94483 39413
88928 99641

**URGENT REQUIREMENT**
Tele callers
(Only for ladies)
93535 28242

**ಉತ್ತಮ ಅಡಿಕೆ ಸಸಿಗಳು ದೊರೆಯುತ್ತವೆ**
ಬುಕ್ಕಾಂಬುದಿ 40 ವರ್ಷದ ಹಳೆಯ ಅಡಿಕೆ ಗೋಟುಗಳ 18 ತಿಂಗಳ ಸಸಿಗಳು ಹರಿಹರದಲ್ಲಿ ಮಾರಾಟಕ್ಕಿವೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
99645 33355

**3 BHK HOUSE FOR RENT**
At Uttam Badavane, 1st Main, B ward No. 30 Avaragere Road, conatct No.
99015 64535, 94498 04535

**ಮನೆಗಳು ಬಾಡಿಗೆಗೆ ಇವೆ**
ದಾವಣಗೆರೆ ಆಂಜನೇಯ ಬಡಾವಣೆ, ಹೇಮಾವತಿ ಹಾಸ್ಟೆಲ್ ಹಿಂಭಾಗದ ಕಾರ್ನರ್ ಬಿಲ್ಡಿಂಗ್, 2 BHK ಮನೆಗಳು ಬಾಡಿಗೆಗೆ ಇವೆ. ಸಂಪರ್ಕಿಸಿ :
94483 92975
99866 18266

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ, ಡಾಲರ್ಸ್‌ಕಾಲೋನಿ, ಶಿವಪಾರ್ವತಿ ಗ್ಲಾಸ್ ಹೌಸ್ ಲೇಔಟ್, ಗೀತಂ ಕಾಲೇಜ್ ಹತ್ತಿರ, ಜೆ.ಹೆಚ್. ಪಟೇಲ್ ಬಡಾವಣೆ, ಹೈಟೆಕ್ ಹಿಂಭಾಗ, ಎರಗುಂಟೆ ಇನ್ವೆಸ್ಟ್ ಸೈಟ್ಸ್, ಉತ್ತಮ ದರದಲ್ಲಿ ದೊರೆಯುತ್ತವೆ. 30x40, 40x50, 40x60, 30x50 ಎಲ್ಲಾ ಅಳತೆಯ ಸೈಟ್‌ಗಳಿವೆ.
97315 12365

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಬಾಡಿಗೆಗೆ ಇದೆ**
16x60 ಕಮರ್ಷಿಯಲ್ ಹಾಲ್ ಬಟ್ಟೆ ಅಂಗಡಿ - ಬೆಳ್ಳಿ ಬಂಗಾರದ ಬ್ಯಾಂಕ್-ಸೊಸೈಟಿ-ಆಫೀಸ್ ಔಷಧಿ ಅಂಗಡಿ - ಫರ್ನೀಚರ್ ಪ್ಲಾಸ್ಟಿಕ್ ಅಂಗಡಿ - ಐಸ್‌ಕ್ರೀಮ್ ಸ್ವೀಟ್ ಅಂಗಡಿ - ಪಾತ್ರೆ, ಅಂಗಡಿಗಳನ್ನು ಮಾಡಬಹುದು. ಚೌಕಿಪೇಟೆ, ದಾವಣಗೆರೆ. ಸಂಪರ್ಕಿಸಿ :
94486 68054

**ಮನೆ ಬಾಡಿಗೆಗೆ ಇದೆ**
1 BHK, ನಂ. 164, 10ನೇ ಕ್ರಾಸ್, ಎ ಬ್ಲಾಕ್, ದೇವರಾಜ್ ಅರಸ್ ಬಡಾವಣೆ, ದಾವಣಗೆರೆ.
(ಸಸ್ಯಹಾರಿಗಳಿಗೆ ಮಾತ್ರ)
90351 09371

**ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
Shah Opticals
4th Main, Opp. Drushti Eye Hospital, P.J Extension, Davanagere - 577002
93536 89957

**ಹುಡುಗರು ಬೇಕಾಗಿದ್ದಾರೆ**
20 ವರ್ಷ ಮೇಲ್ಪಟ್ಟ ಯುವಕರು, ಯಾವುದೇ ವಿದ್ಯಾರ್ಹತೆ ಅಗತ್ಯವಿಲ್ಲ, ತಿಂಗಳ ಸಂಬಳ ಅಥವಾ ಕಮೀಷನ್ ಆಧಾರದ ಮೇಲೆ ಕೆಲಸ ಮಾಡಬಹುದು. ಕೆಲಸಗಾರರನ್ನು ಸರಬರಾಜು ಮಾಡುವ ಗುತ್ತಿಗೆದಾರರು ಸಂಪರ್ಕಿಸಬಹುದು.
ಭೂಮಾತ ರೈತ ಉತ್ಪಾದಕರ ಕಂಪನಿ, ಲಿ., ನಾಗನೂರು, ದಾವಣಗೆರೆ ಜಿಲ್ಲೆ.
63621 21181, 996431 2394 98441 94874

**WANTED**
ವಿದ್ಯಾರ್ಹತೆ 10th, PUC, Office Boy, Salary - 7000 to 10000/- Contact :
99868 57728
99724 73951

**ಬೇಕಾಗಿದ್ದಾರೆ**
ಕೆಲಸಕ್ಕೆ ಹುಡುಗ-ಹುಡುಗಿಯರು ಬೇಕಾಗಿದ್ದಾರೆ.
ಶ್ರೀಧರ್ ಅಕ್ವೇರಿಯಂ
ಎಂ.ಸಿ.ಸಿ. 'ಎ' ಬ್ಲಾಕ್ ಚರ್ಚ್ ರಸ್ತೆ, ದಾವಣಗೆರೆ
63621 49155

**JOB OPPORTUNITY**
Female Office Assistant
Good in office work Computer skills Good in customer Dealing. Fresher can also apply. B.Com, M.Com & MBA. For Contact :
97312 18567
Send CV- hardsoftdvg@gmail.com

**ಮನೆ ಬಾಡಿಗೆಗೆ ಇದೆ**
ಎಲ್ಲಾ ಸೌಕರ್ಯ, ಉತ್ತರಕ್ಕೆ ಬಾಗಿಲಿರುವ, ವಾಸ್ತುವುಳ್ಳ ಡಬಲ್ ಬೆಡ್ ರೂಂ 1ನೇ ಮಹಡಿ ಮನೆ ಬಾಡಿಗೆಗಿದೆ. #1859/34, "ಭಾವ ಸಂಗಮ" 4ನೇ ಮೇನ್, LIC ಕಾಲೋನಿ, ನೂತನ ಕಾಲೇಜ್ ಹಿಂಭಾಗ, ದಾವಣಗೆರೆ-4.
9448746875, 8050357533

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು, ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು


• Body Massage
• Full body Scrub
• Head Massage
• Full body Steam & Facial
All five Services
Just @1499
MCC 'B' Block, Dvg
Contact number
87924 11695

**xerox ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ**
ರಾಂ & ಕೋ. ಸರ್ಕಲ್ ಹತ್ತಿರ, ದಾವಣಗೆರೆ.
70221 58935

**ERA GROUP OF COMPANIES CALL CENTRE**
ಮಹಿಳೆಯರು ಟೆಲಿಕಾಲರ್ಸ್ ಬೇಕಾಗಿದ್ದಾರೆ
ಕನ್ನಡ ಮತ್ತು ಇಂಗ್ಲಿಷ್ ಓದಲು ಮತ್ತು ಬರೆಯಲು ಬರಬೇಕು
QUALIFICATION : SSLC TO DEGREE
5000 K TO 12,000 K + INCENTIVES
ಸ್ಥಳ : K.R. MARKET, DAVANGERE.
95350 51589, 78670 75786

**SPBVS**
Akshar English Higher Primary School
TC Layout, Davanagere, We Are Hiring Computer Teacher - 1, Qualification - BCA KG Class Teacher - 2
97311 00216, 98442 56380

**ಸೈಟ್ ಬೇಕಾಗಿದೆ**
ಸರ್ಕಾರಿ ನೌಕರರ ಬಡಾವಣೆ, ಹಂತ-2, ಕುಂದುವಾಡ. ಜಿಎಂಐಟಿ ಕಾಲೇಜ್ ಎದುರು
ಮಧುಸೂದನ್
85534 62689

**ಬೇಕಾಗಿದ್ದಾರೆ**
ಅನುಭವವಿರುವ ರಿಸೆಪ್ಷನಿಸ್ಟ್ ಹಾಗೂ ಅಕೌಂಟೆಂಟ್ ಕೆಲಸಕ್ಕೆ ಬೇಕಾಗಿದ್ದಾರೆ. ವಿದ್ಯಾರ್ಹತೆ : ಬಿ.ಕಾಂ. ಪಾಸಾಗಿರಬೇಕು.
88843 22266

**ಬೇಕಾಗಿದ್ದಾರೆ**
ಟಾಟಾ ಪವರ್ ಸೋಲಾರ್ ಆಫೀಸ್‌ನಲ್ಲಿ ಕೆಲಸ ಮಾಡಲು ಪಿಯುಸಿ ಮತ್ತು ಡಿಗ್ರಿ ಆದ ಹುಡುಗರು ಬೇಕಾಗಿದ್ದಾರೆ.
M/s ಬಸವಶ್ರೀ ಸೋಲಾರ್ ಟೆಕ್ನಾಲಜೀಸ್
ನಂ. 43 ಹೆಚ್, ಎಸ್.ಜೆ.ಜೆ.ಎಂ. ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರಸ್ತೆ, ದಾವಣಗೆರೆ.
99001 42052

**ಬಾಡಿಗೆಗೆ ಇದೆ**
ಸಿಂಗಲ್ ಬೆಡ್ ರೂಂ ಬಾಡಿಗೆಗೆ ಇದೆ. 2ನೇ ಫ್ಲೋರ್, ಎಸ್.ಎಸ್. ಲೇಔಟ್, ಬಿ ಬ್ಲಾಕ್, 2ನೇ ಮೇನ್, #1970/20 ರಲ್ಲಿ ನೀರಿನ ಸೌಲಭ್ಯವಿದೆ. ಸಸ್ಯಹಾರಿಗಳು ಸಂಪರ್ಕಿಸಿ.
70190 08780

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**NEET, K-CET**
Long Term
ಬ್ಯಾಚ್‌ಗಳು ಪ್ರಾರಂಭ
ಸಮೃದ್ಧಿ ಅಕಾಡೆಮಿ
96202 62361

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಎಗ್ ಸೆಂಟರ್
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ.
96860 22969

**ಪಿಗ್ಮಿ ಕಲೆಕ್ಷನ್‌ಗೆ ಹುಡುಗರು ಬೇಕಾಗಿದ್ದಾರೆ**
ದಾವಣಗೆರೆಯಲ್ಲಿ ಪಿಗ್ಮಿ ಕಲೆಕ್ಷನ್ ಮಾಡಲು PUC ವಿದ್ಯಾರ್ಹತೆಯುಳ್ಳ ಕನ್ನಡ ಓದಲು ಹಾಗೂ ಬರೆಯಲು ಬರುವಂತಹ ಹುಡುಗರು ಬೇಕಾಗಿದ್ದಾರೆ. ಕೆಲಸದ ಸಮಯ ಬೆಳಿಗ್ಗೆ 10 ರಿಂದ 1 ರವರೆಗೆ. ಸಂಜೆ 5 ರಿಂದ 8 ಗಂಟೆಯವರೆಗೆ. ಆಸಕ್ತಿಯುಳ್ಳವರು ಕೆಳಗಿನ ಮೊಬೈಲ್ ನಂಬರಿಗೆ ಸಂಪರ್ಕಿಸಿ :
99640 17575

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಕೇರ್ ಟೇಕರ್ ಬೇಕಾಗಿದ್ದಾರೆ**
ವಯಸ್ಸಾದ ವ್ಯಕ್ತಿಯನ್ನು ನೋಡಿಕೊಳ್ಳಲು ಅನುಭವಿ ಕೇರ್ ಟೇಕರ್ ಬೇಕಾಗಿದ್ದಾರೆ. ಉತ್ತಮ ಸಂಬಳ ಇದೆ. ಸೇವಾ ಮನೋಭಾವ, ತಾಳ್ಮೆ ಇರುವವರಿಗೆ ಆದ್ಯತೆ, ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :
ಚನ್ನಗಿರಿ ವಿರೂಪಾಕ್ಷಪ್ಪ ಕಲ್ಯಾಣ ಮಂಟಪ
ಗಡಿಯಾರ ಕಂಬದ ಎದುರು, ದಾವಣಗೆರೆ.
94481 10895

# ಮೂರು ವಿಧಾನಸಭಾ ಉಪ ಚುನಾವಣೆಯಲ್ಲೂ ಮೈತ್ರಿ

ಬೆಂಗಳೂರು, ಜೂ. 19 - ಕರ್ನಾಟಕದಲ್ಲಿ ಜರುಗಲಿರುವ ಮೂರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲೂ ಬಿಜೆಪಿ-ಜೆಡಿಎಸ್ ಮೈತ್ರಿ ಮುಂದುವರೆಯಲಿದೆ.

ಉಪಚುನಾವಣೆ ಹಾಗೂ ಇತರೆ ರಾಜಕೀಯ ವಿಚಾರಗಳಿಗೆ ಸಂಬಂಧಿಸಿದಂತೆ ಎಚ್.ಡಿ. ಕುಮಾರಸ್ವಾಮಿ ಅವರೊಂದಿಗೆ ಕೇಂದ್ರ ಗೃಹ ಸಚಿವ ಅಮಿತ್ ಷಾ ದೆಹಲಿಯಲ್ಲಿಂದು ಚರ್ಚಿಸಿದ್ದಾರೆ.

ಹೆಚ್.ಡಿ. ಕುಮಾರಸ್ವಾಮಿ, ಬಸವರಾಜ ಬೊಮ್ಮಾಯಿ ಹಾಗೂ ಇ.ತುಕಾರಾಂ ಲೋಕಸಭೆಗೆ ಆಯ್ಕೆಗೊಂಡಿರುವುದರಿಂದ ಅವರುಗಳು ಪ್ರತಿನಿಧಿಸುತ್ತಿದ್ದ ಚನ್ನಪಟ್ಟಣ, ಶಿಗ್ಗಾಂವ್ ಹಾಗೂ ಸಂಡೂರು ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆ ನಡೆಯಲಿದೆ. ಚನ್ನಪಟ್ಟಣವನ್ನು ಜೆಡಿಎಸ್‌ಗೆ ಬಿಟ್ಟುಕೊಟ್ಟು, ಶಿಗ್ಗಾಂವ್ ಹಾಗೂ ಸಂಡೂರಿನಲ್ಲಿ ಬಿಜೆಪಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ಸಭೆಯಲ್ಲಿ ಸಮ್ಮತಿಸಲಾಗಿದೆ.

ಲೋಕಸಭಾ ಚುನಾವಣೆಯಲ್ಲಿ ಉಭಯ ಪಕ್ಷಗಳ ನಾಯಕರು ಮತ್ತು ಕಾರ್ಯಕರ್ತರು ಒಗ್ಗಟ್ಟಿನಿಂದ ಹೋರಾಟ ನಡೆಸಿ ಮೂರೂ ಕ್ಷೇತ್ರಗಳನ್ನು ತೆಕ್ಕೆಗೆ ತೆಗೆದುಕೊಳ್ಳಬೇಕು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಈ ಕ್ಷೇತ್ರಗಳಲ್ಲಿ ಜೆಡಿಎಸ್, ಬಿಜೆಪಿ ಹಾಗೂ ಕಾಂಗ್ರೆಸ್ ಜಯ ಗಳಿಸಿತ್ತು. ಆದರೆ, ಮೈತ್ರಿ ನಂತರ ನಡೆಯುತ್ತಿರುವ ಉಪಚುನಾವಣೆಯನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡು, ಬಲ ಹೆಚ್ಚಿಸಿಕೊಳ್ಳಲು ಉಭಯ ನಾಯಕರು ನಿರ್ಧರಿಸಿದ್ದಾರೆ.

ಉಪಚುನಾವಣೆ ನಡೆಯಲಿರುವ ಮೂರೂ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಈಗಲೇ ಹೆಸರಿಸುವುದು ಬೇಡ, ಪಕ್ಷ ಕ್ಷೇತ್ರ ಸಮೀಕ್ಷೆ ನಡೆಸಿದ ನಂತರ ಅದರ ವರದಿ ಆಧಾರದ ಮೇಲೆ ಸಮರ್ಥ ಅಭ್ಯರ್ಥಿಯನ್ನು ಕಣಕ್ಕಿಳಿಸೋಣ ಎಂದು ಷಾ ಅವರು ಕುಮಾರಸ್ವಾಮಿ ಅವರಿಗೆ ತಿಳಿಸಿದ್ದಾರೆ ಎನ್ನಲಾಗಿದೆ.

ಚನ್ನಪಟ್ಟಣ ಕ್ಷೇತ್ರದ ಉಪಚುನಾವಣೆಯಲ್ಲಿ ಡಿ.ಕೆ.ಶಿವಕುಮಾರ್ ಕುಟುಂಬ ಸ್ಪರ್ಧಿಸುವ ಮಾತುಗಳು ಕೇಳಿಬರುತ್ತಿರುವ ಜೊತೆಗೆ ಅವರು ಇಂದಿನಿಂದಲೇ ಕ್ಷೇತ್ರದಲ್ಲಿ ಪ್ರವಾಸ ಕೈಗೊಂಡಿರುವುದೂ ಈ ತುರ್ತು ಚರ್ಚೆಗೆ ಕಾರಣ ಎನ್ನಲಾಗಿದೆ. ಬೆಂಗಳೂರು ಗ್ರಾಮಾಂತರದಲ್ಲಿ ಡಿ.ಕೆ. ಕುಟುಂಬವನ್ನು ಮಣಿಸಿದಂತೆ ಇಲ್ಲಿಯೂ ಅವರು ಕಣಕ್ಕಿಳಿದರೆ ಅದೇ ಫಲಿತಾಂಶ ಮರುಕಳಿಸುವಂತಾಗಬೇಕು ಎಂದು ಷಾ ತಿಳಿಸಿದ್ದಾರೆ.

ಇದಲ್ಲದೆ, ಪಕ್ಷ ಸಂಘಟನೆ ಸೇರಿದಂತೆ, ಕೆಲವು ರಾಜಕೀಯ ವಿಚಾರಗಳ ಬಗ್ಗೆಯೂ ಉಭಯ ನಾಯಕರು ಚರ್ಚಿಸಿದ್ದಾರೆ ಎನ್ನಲಾಗಿದೆ.

## ನಾಳೆ ಅನಘ ಯೋಗ ಕ್ರಿಯೆ ಶಿಬಿರ ಆರಂಭ

ದಾವಣಗೆರೆ, ಜೂ. 19- ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ನಗರದ ಪಿ.ಜೆ. ಬಡಾವಣೆಯ ಮೂರನೇ ಕ್ರಾಸ್‌ನಲ್ಲಿರುವ ಶ್ರೀ ಪರಮಹಂಸ ಅಥರ್ವ ಆಯುರ್ಧಾಮದಲ್ಲಿ ಇದೇ ದಿನಾಂಕ 21 ರಂದು ಅನಘ ಯೋಗ ಕ್ರಿಯಾ ಶಿಬಿರ ಆರಂಭವಾಗಲಿದೆ ಎಂದು ಯೋಗ ತರಬೇತುದಾರ ಕೆ.ಎಂ. ಕೊಟ್ರೇಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಯೋಗವನ್ನು ಯಾವಾಗ, ಯಾವ ಕಾಲದಲ್ಲಿ, ಎಷ್ಟು ಸಮಯ ಮಾಡಬೇಕು ಎಂಬುದರ ಬಗ್ಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ. ಕ್ರಮಬದ್ಧವಾಗಿ ಯೋಗ ಕಲಿಸಿ ಕೊಡುವ ಉದ್ದೇಶದಿಂದ ಅನಘ ಯೋಗ ಕ್ರಿಯಾ ಶಿಬಿರವನ್ನು ಉಚಿತವಾಗಿ ಕಲಿಸಿ ಕೊಡಲಾಗುತ್ತಿದೆ ಎಂದು ಹೇಳಿದರು.

ಜೂ.21ರ ಶುಕ್ರವಾರ ಬೆಳಿಗ್ಗೆ 8 ಗಂಟೆಗೆ ಯೋಗ ಗುರು ಚನ್ನಬಸವಣ್ಣ ಅವರು ಶಿಬಿರವನ್ನು ಉದ್ಘಾಟಿಸುವರು. ಮೊದಲ ದಿನ ಸೂರ್ಯ ನಮಸ್ಕಾರ ಮಾತ್ರ ಕಲಿಸಿಕೊಡಲಾಗುವುದು ಎಂದರು.

ಜೂ. 24 ರಿಂದ 21 ದಿನಗಳ ಕಾಲ ಎರಡು ಬ್ಯಾಚ್‌ಗಳಲ್ಲಿ ಶಿಬಿರ ನಡೆಯಲಿದೆ. ಪ್ರತಿ ಬ್ಯಾಚ್‌ನಲ್ಲಿ 12 ಜನರಿಗೆ ಮಾತ್ರ ಅವಕಾಶ ಇದೆ. ಆಸಕ್ತರು ಹೆಚ್ಚಿನ ಮಾಹಿತಿ ಮತ್ತು ನೋಂದಣಿಗಾಗಿ 63622-26505 ಗೆ ಸಂಪರ್ಕಿಸುವಂತೆ ಕೋರಲಾಗಿದೆ. ಪತ್ರಿಕಾಗೋಷ್ಠಿಯಲ್ಲಿ ಡಾ.ಬಿ.ಸಿ. ಸುಮತಿ ಉಪಸ್ಥಿತರಿದ್ದರು.

## ಇಂದು ವಿಭಾಗೀಯ ಡಾಕ್ ಅದಾಲತ್

ದಾವಣಗೆರೆ, ಜೂ.19 - ದಾವಣಗೆರೆ ಅಂಚೆ ವಿಭಾಗೀಯ ಡಾಕ್-ಅದಾಲತ್ತನ್ನು ಇಂದು ಸಂಜೆ 4 ಗಂಟೆಗೆ ನಗರದ ಮಂಡಿಪೇಟೆಯ ಗಡಿಯಾರ ಕಂಬದ ಹತ್ತಿರವಿರುವ ಪ್ರಧಾನ ಅಂಚೆ ಕಚೇರಿಯ ಮೊದಲನೇ ಮಹಡಿಯ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ನಡೆಸಲಾಗುತ್ತದೆ. ಸಾರ್ವಜನಿಕರು ಮತ್ತು ಅಂಚೆ ಗ್ರಾಹಕರು ಅಂಚೆ ಸೇವೆಗಳಿಗೆ ಸಂಬಂಧಿಸಿದ ದೂರುಗಳನ್ನು ಮತ್ತು ಸಲಹೆಗಳನ್ನು ಅಂಚೆ ಅಧೀಕ್ಷಕರ ಕಚೇರಿಗೆ ಸಲ್ಲಿಸಬೇಕೆಂದು ಅಂಚೆ ಚಂದ್ರಶೇಖರ್ ತಿಳಿಸಿದ್ದಾರೆ.

# ಪ್ರತಿದಿನ ಯೋಗದಿಂದ ಉತ್ತಮ ಆರೋಗ್ಯ ಸಾಧ್ಯ



## ಯೋಗ ತರಬೇತಿ ಶಿಬಿರದಲ್ಲಿ ಬಸವಪ್ರಭು ಶ್ರೀಗಳು

ದಾವಣಗೆರೆ, ಜೂ. 19- ದೇಹ ಮತ್ತು ಮನಸ್ಸನ್ನು ಏಕಾಗ್ರತೆಯಿಂದ ಇಟ್ಟುಕೊಳ್ಳುವುದು ಯೋಗದಿಂದ ಸಾಧ್ಯ. ಕಾಯಿಲೆಗಳನ್ನು ತಡೆಯಲು ಪ್ರತಿ ದಿನ ಯೋಗ ಮಾಡಬೇಕು ಎಂದು ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಹೇಳಿದರು.

ಜಿಲ್ಲಾ ಆಯುಷ್ ಇಲಾಖೆ, ಜಿಲ್ಲಾ ಯೋಗ ಒಕ್ಕೂಟ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ದಾವಣಗೆರೆ ಇವರ ಸಹಯೋಗದಲ್ಲಿ ನಗರದ ಶಿವಯೋಗಿ ಮಂದಿರದಲ್ಲಿ 10 ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಯೋಗ ತರಬೇತಿ ಶಿಬಿರ, ಆಯುಷ್ ಪರಿಚಯ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಯೋಗದಿಂದ ಸದೃಢ ಆರೋಗ್ಯ ಕಾಪಾಡಿಕೊಳ್ಳಬಹುದು. ಆರೋಗ್ಯ ಚನ್ನಾಗಿದ್ದರೆ ಜೀವನದಲ್ಲಿ ಏನನ್ನಾದರೂ ಸಾಧಿಸಲು ಸಾಧ್ಯವಿದೆ ಎಂದರು. ಯೋಗದಿಂದ ವಿದ್ಯಾರ್ಥಿಗಳು ಪರೀಕ್ಷೆಯ ಭಯವನ್ನು ನೀಗಿಸಬಹುದು. ಇಂತಹ ಯೋಗವನ್ನು ಕಂಡು ಹಿಡಿದಿದ್ದು ಪತಂಜಲಿ ಮಹರ್ಷಿಗಳು. ಅರಿವು, ಆರೋಗ್ಯ ಎಲ್ಲವೂ ಯೋಗದಿಂದಲೇ ಸಾಧ್ಯ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಆಯುಷ್ ಅಧಿಕಾರಿ ಡಾ. ಬಿ.ಯು.ಯೋಗೇಂದ್ರ ಕುಮಾರ್ ಅವರು, 10ನೇ ಅಂತರರಾಷ್ಟ್ರೀಯ ಯೋಗ ದಿನದ ಮಹತ್ವ ಮತ್ತು ಆಚರಣೆ ಬಗ್ಗೆ ತಿಳಿಸಿದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮುಖ್ಯ ಆಯುಕ್ತ ಮುರುಘರಾಜೇಂದ್ರ ಜೆ.ಚಿಗಟೇರಿ ಮಾತನಾಡಿ, ಪ್ರತಿನಿತ್ಯ ಯೋಗ ಮಾಡಿ, ಯೋಗದಿಂದ ನಿರೋಗಿಯಾಗಲು ಕರೆ ನೀಡಿದರು.

ದಾವಣಗೆರೆ ಜಿಲ್ಲಾ ಯೋಗ ಒಕ್ಕೂಟದ ಅಧ್ಯಕ್ಷ ವಾಸುದೇವ ರಾಯ್ಕರ್ ಮಾತನಾಡಿ, ಯೋಗ ಒಕ್ಕೂಟ ಇಂದಿಗೂ 10 ವರ್ಷಗಳ ಕಾಲ ನಿರಂತರವಾಗಿ ಆಯುಷ್ ಇಲಾಖೆಯ ಸಹಯೋಗದಲ್ಲಿ ಯೋಗಕ್ಕೆ ಸಹಕಾರ ನೀಡುತ್ತಾ ಬಂದಿದೆ ಎಂದು ತಿಳಿಸಿದರು.

ಆಯುಷ್ ವೈದ್ಯಾಧಿಕಾರಿ ಬಿಸನಳ್ಳಿ ಡಾ.ಸಿದ್ದೇಶ್ ಯೋಗ ಮತ್ತು ಆಯುರ್ವೇದದ ಮಹತ್ವವನ್ನು ಮಕ್ಕಳಿಗೆ ತಿಳಿಸಿದರು.

ಜಿಲ್ಲಾ ಸ್ಕೌಟ್ ಆಯುಕ್ತ ಎ.ಪಿ. ಷಡಕ್ಷರಪ್ಪ, ಜಿಲ್ಲಾ ಉಪಾಧ್ಯಕ್ಷೆ ಶಾಂತ ಯಾವಗಲ್, ಜಿಲ್ಲಾ ಗೈಡ್ ಆಯುಕ್ತರಾದ ಶಾರದ ಮಾಗಾನಹಳ್ಳಿ, ಜಿಲ್ಲಾ ಸಹಾಯಕ ಆಯುಕ್ತ ಎನ್.ಕೆ ಕೊಟ್ರೇಶ್, ಸಹ ಕಾರ್ಯದರ್ಶಿ ಸುಖವಾನಿ. ಅಂತರರಾಷ್ಟ್ರೀಯ ಯೋಗ ಕ್ರೀಡಾಪಟುಗಳಾದ ಹೋಲೂರ್ ತೀರ್ಥರಾಜ್, ಅನಿಲ್ ರಾಯ್ಕರ್, ಪರಶುರಾಮ್ ವಿದ್ಯಾರ್ಥಿಗಳಿಗೆ ಯೋಗ ಪ್ರಾತ್ಯಕ್ಷಿಕೆ ನಡೆಸಿಕೊಟ್ಟರು.

520 ಸ್ಕೌಟ್ಸ್ ಮತ್ತು ಗೈಡ್ ವಿದ್ಯಾರ್ಥಿಗಳು ಹಾಗೂ ದಳ ನಾಯಕ ನಾಯಕಿಯರು ಮತ್ತು ಯೋಗ ಒಕ್ಕೂಟದ ಸಿಬ್ಬಂದಿಗಳು ಭಾಗವಹಿಸಿದ್ದರು. ಅಶ್ವಿನಿ ಸ್ವಾಗತಿಸಿ, ನಿರೂಪಿಸಿದರು, ಜಿಲ್ಲಾ ಕಾರ್ಯದರ್ಶಿ ಎಂ. ರತ್ನ ವಂದಿಸಿದರು.

## ಪೆಟ್ರೋಲ್ ದರ ಹೆಚ್ಚಳಕ್ಕೆ ಬಿಜೆಪಿಯಿಂದ ಇಂದು ಪ್ರತಿಭಟನೆ

ಪಂಚ ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ಹರಸಾಹಸ ಪಡುತ್ತಿರುವ ರಾಜ್ಯದ ಕಾಂಗ್ರೆಸ್ ಸರ್ಕಾರ ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆ ಮಾಡಿ ಭೀಕರ ಬರದಿಂದ ಬಸವಳಿದ ರೈತರ ಮತ್ತು ಶ್ರೀಸಾಮಾನ್ಯನ ಜೀವ ಹಿಂಡಿದೆ.

ಇದನ್ನು ವಿರೋಧಿಸಿ ಇಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಬಿಜೆಪಿ ಕಚೇರಿಯಿಂದ ಎ.ಸಿ ಕಚೇರಿಯವರೆಗೆ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ದಾವಣಗೆರೆ ಉತ್ತರ ಮಂಡಲ ಅಧ್ಯಕ್ಷ ಬೇತೂರು ಸಂಗನಗೌಡ್ರು, ದಕ್ಷಿಣ ಮಂಡಲ ಅಧ್ಯಕ್ಷ ಆನಂದರಾವ್ ಸಿಂಧೆ ಮತ್ತು ಮಾಯಕೊಂಡ ಮಂಡಲ ಅಧ್ಯಕ್ಷ ಶ್ಯಾಗಲೆ ದೇವೇಂದ್ರಪ್ಪ ತಿಳಿಸಿದ್ದಾರೆ.

ಪ್ರತಿಭಟನೆಯಲ್ಲಿ ಮಾಜಿ ಮುಖ್ಯಮಂತ್ರಿ, ಹಾವೇರಿ ಸಂಸದ ಬಸವರಾಜ ಬೊಮ್ಮಾಯಿ ಭಾಗವಹಿಸಲಿದ್ದು, ಜಿಲ್ಲೆಯ ಮುಖಂಡರು ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕು ಎಂದು ಅವರು ಕೋರಿದ್ದಾರೆ.

ಗ್ಯಾರೆಂಟಿಗಳ ಹೆಸರಿನಲ್ಲಿ ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯದೇ ರಾಜ್ಯದ ಪ್ರಗತಿ ಶೂನ್ಯವಾಗಿದೆ. ರಾಜ್ಯ ಆರ್ಥಿಕವಾಗಿ ದಿವಾಳಿಯಾಗಿದ್ದು, ಇದನ್ನು ಸರಿಪಡಿಸಲು ಹಲವಾರು ವರ್ಷ ಬೇಕು. ಇದಕ್ಕೆ ರಾಜ್ಯ ಕಾಂಗ್ರೆಸ್ ಸರ್ಕಾರವೇ ನೇರ ಹೊಣೆಯಾಗಿದೆ ಎಂದು ಸಂಗನಗೌಡ್ರು, ಆನಂದರಾವ್ ಸಿಂಧೆ, ದೇವೇಂದ್ರಪ್ಪ ಹೇಳಿದರು.

## ಬನ್ನಿಕೋಡು : ಎನ್ನೆಸ್ಸೆಸ್ ಶಿಬಿರದಲ್ಲಿ ಇಂದು ಉಪನ್ಯಾಸ

ಹರಿಹರ ತಾಲ್ಲೂಕು ಬನ್ನಿಕೋಡು ಗ್ರಾಮದಲ್ಲಿ ದಾವಣಗೆರೆ ಡಿಆರ್‌ಎಂ ಕಾಲೇಜು ಹಾಗೂ ಬನ್ನಿಕೋಡು ಗ್ರಾಮಸ್ಥರ ಸಹಯೋಗದಲ್ಲಿ ಹಮ್ಮಿಕೊಂಡಿರುವ 2023-24 ನೇ ಸಾಲಿನ ವಾರ್ಷಿಕ ವಿಶೇಷ ಶಿಬಿರದಲ್ಲಿ ಇಂದು ಬೆಳಿಗ್ಗೆ 10.30ಕ್ಕೆ ವಾಸನ್ ಕಣ್ಣಿನ ಆಸ್ಪತ್ರೆಯ ನಾಗರಾಜ್ ಮತ್ತು ಸಿಬ್ಬಂದಿಯವರಿಂದ ಉಚಿತ ನೇತ್ರ ತಪಾಸಣೆ ಕಾರ್ಯಕ್ರಮ ನಡೆಯಲಿದೆ.

ಡಾ. ನಟರಾಜ್ ಅವರು ಗರ್ಭ ಧರಿಸಿದ ರಾಸುಗಳ ನಿರ್ವಹಣೆ ಮತ್ತು ಜಾನುವಾರುಗಳಲ್ಲಿ ಲಸಿಕೆಯ ಮಹತ್ವ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡುವರು.

ಸಂಜೆ 7.30ಕ್ಕೆ ನಡೆಯುವ ವೇದಿಕೆಯ ಕಾರ್ಯಕ್ರಮದಲ್ಲಿ ದೇಶದ ಏಕತೆ ಮತ್ತು ಸಮಗ್ರತೆ ಸಾಧಿಸುವ ಸಂಕೇತವಾಗಿ ಭಾರತ ಮಾತೆಗೆ ದೀಪದ ಹಣತೆ ಬೆಳಗಿಸುವ ಮೂಲಕ ಗೌರವ ಸಮರ್ಪಣೆ ಮಾಡಲಾಗುವುದು.

## ಶಿವ ಧ್ಯಾನ ಮಂದಿರದಲ್ಲಿ ಇಂದು ಯೋಗ ತರಬೇತಿ ಶಿಬಿರ

ಜಿಲ್ಲಾ ಆಯುಷ್ ಇಲಾಖೆ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ದಾವಣಗೆರೆ ಜಿಲ್ಲಾ ಯೋಗ ಒಕ್ಕೂಟದ ಸಹಯೋಗದಲ್ಲಿ 10ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಇಂದು ದೇವರಾಜ ಅರಸು ಬಡಾವಣೆ 'ಬಿ'ಬ್ಲಾಕ್‌ನಲ್ಲಿರುವ ಶಿವ ಧ್ಯಾನ ಮಂದಿರದಲ್ಲಿ ಯೋಗ ತರಬೇತಿ ಶಿಬಿರ ನಡೆಯಲಿದೆ.

ಸಂಜೆ 5 ರಿಂದ 6ರವರೆಗೆ ನಡೆಯುವ ಶಿಬಿರದಲ್ಲಿ ಯೋಗ ಶಿಕ್ಷಕ ಬಿ.ಎಸ್. ನೀಲಪ್ಪ ಅವರು (94812 17798) ಯೋಗ ತರಬೇತಿ ನೀಡಲಿದ್ದಾರೆ.

# ಆಲೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ : ವೈದ್ಯರು ಇಲ್ಲದ್ದನ್ನು ಕಂಡು ಶಾಸಕ ಬಸವಂತಪ್ಪ ಗರಂ





ದಾವಣಗೆರೆ, ಜೂ. 19 - ಆರೋಗ್ಯ ಹದಗೆಟ್ಟರೆ ರೋಗಿಗಳು ಆರೋಗ್ಯ ಕೇಂದ್ರಗಳತ್ತ ದೌಡಾಯಿಸುವುದು ಸಾಮಾನ್ಯ. ಆದರೆ ಆರೋಗ್ಯ ಕೇಂದ್ರದಲ್ಲಿ ಆಡಳಿತ ವೈದ್ಯಾಧಿಕಾರಿ ಇರದಿದ್ದರೆ ಆಸ್ಪತ್ರೆಗೆ ಬರುವ ರೋಗಿಗಳ ಗತಿಯೇನು ಎಂದು ಶಾಸಕ ಕೆ.ಎಸ್. ಬಸವಂತಪ್ಪ ಆಸ್ಪತ್ರೆಯ ವೈದ್ಯರ ನಿರ್ಲಕ್ಷ್ಯಕ್ಕೆ ಗರಂ ಆದರು.

ಮಾಯಕೊಂಡ ಕ್ಷೇತ್ರದ ವ್ಯಾಪ್ತಿಯ ಆಲೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಬುಧವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ವೇಳೆ ಆಡಳಿತ ವೈದ್ಯಾಧಿಕಾರಿಗಳು ಕಾಣದಿದ್ದಾಗ, ವೈದ್ಯಾಧಿಕಾರಿಗಳು, ಲ್ಯಾಬ್ ಟೆಕ್ನೀಶಿಯನ್, ವೈದ್ಯರು ಎಲ್ಲಿಗೆ ಹೋಗಿದ್ದಾರೆ ಎಂದು ಸಿಬ್ಬಂದಿಗಳನ್ನು ಪ್ರಶ್ನಿಸಿದರು. ಕರ್ತವ್ಯದ ಮೇರೆಗೆ ಹೊರಗೆ ಹೋಗಿದ್ದಾರೆ ಎಂದು ನರ್ಸ್‌ಗಳು, ಸಿಬ್ಬಂದಿಗಳು ಉತ್ತರಿಸಿದರು.

ಶಾಸಕರು ಭೇಟಿ ನೀಡುವಾಗ ಸ್ಥಳದಲ್ಲಿ ಇರಬೇಕು. ಭೇಟಿ ವೇಳೆ ಇಲ್ಲಿನ ಸಮಸ್ಯೆಗಳು, ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಹೇಳುವವರು ಯಾರು. ಈ ಬಗ್ಗೆ ಮಾಹಿತಿ ತಿಳಿದುಕೊಳ್ಳುತ್ತೇನೆ. ಮುಂದಿನ ದಿನಗಳಲ್ಲಿ ದಿಢೀರ್ ಭೇಟಿ ನೀಡುತ್ತೇನೆ. ಆಗಲೂ ಇದೇ ರೀತಿಯ ಕರ್ತವ್ಯ ಲೋಪ ಕಂಡು ಬಂದರೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಜನಸಂಖ್ಯೆ ಮತ್ತು ಅಗತ್ಯಕ್ಕೆ ಅನುಗುಣವಾಗಿ ಔಷಧಿಗಳನ್ನು ಇಂಡೇಟ್ ಆಗಿ ತೆಗೆದುಕೊಳ್ಳಬೇಕು. ಅಗತ್ಯಕ್ಕಿಂತ ಹೆಚ್ಚು ಔಷಧಿಗಳನ್ನು ತರಿಸಿಕೊಂಡು ಅವಧಿ ಮೀರಿದ ಮೇಲೆ ತೆಗೆದು ಬಿಸಾಡಿ ಸರ್ಕಾರದ ಹಣ ಪೋಲು ಮಾಡುವುದಲ್ಲ.

ಜೊತೆಗೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಗ್ರಾಮೀಣ ಪ್ರದೇಶದಲ್ಲಿ ಇತ್ತೀಚಿಗೆ ಡೆಂಗೀ ಪ್ರಕರಣಗಳು ಹೆಚ್ಚು ಕಂಡು ಬರುತ್ತಿವೆ. ಈ ಬಗ್ಗೆ ಹೆಚ್ಚಿನ ನಿಗಾ ವಹಿಸಬೇಕು. ರೋಗಿಗಳ ತಪಾಸಣೆ ಮಾಡಿದ ಪುಸ್ತಕದಲ್ಲಿ 380ಕ್ಕೂ ಹೆಚ್ಚು ಆರ್ ಬಿಎಸ್ (ಸಕ್ಕರೆ ಕಾಯಿಲೆ) ಇರುವ ರೋಗಿಗಳ ಮಾಹಿತಿ ಇದೆ. ಇಷ್ಟೊಂದು ಆರ್ ಬಿಎಸ್ ಹೊಂದಿದ್ದರೆ ರೋಗಿಗಳ ಜೀವಕ್ಕೆ ಹಾನಿ ಹಳ್ಳಿ ಜನರು ಮುಗ್ದರು. ಅವರಿಗೆ ಈ ರೋಗದ ಬಗದಗೆ ಸರಿಯಾದ ಮಾಹಿತಿ ನೀಡಿ, ಅರಿವು ಮೂಡಿಸಿ ಹೆಚ್ಚಿನ ಚಿಕಿತ್ಸೆಗೆ ದಾವಣಗೆರೆ ಜಿಲ್ಲಾಸ್ಪತ್ರೆಗೆ ಕಳುಹಿಸಬೇಕೆಂದು ಸೂಚನೆ ನೀಡಿದರು.

**ಸಿಸಿ ಟಿವಿ ಕ್ಯಾಮೆರಾ ಕಳವು :** ಪ್ರಾಥಮಿಕ ಆರೋಗ್ಯ ಕೇಂದ್ರ ಊರ ಹೊರಗೆ ಇರುವುದರಿಂದ ರಾತ್ರಿಯ ವೇಳೆ ಕಳ್ಳರ ಕಾಟ ಹೆಚ್ಚಾಗಿದೆ. ಈಚೆಗೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಅಳವಡಿಸಿದ್ದ ಸಿಸಿ ಟಿವಿ ಕ್ಯಾಮೆರಾಗಳನ್ನು ಕಳವು ಮಾಡಲಾಗಿದೆ ಎಂದು ನರ್ಸ್‌ಗಳು ಶಾಸಕರ ಗಮನಕ್ಕೆ ತಂದರು. ಕೂಡಲೇ ದಾವಣಗೆರೆ ಗ್ರಾಮಾಂತರ ಪಿಎಸ್‌ಐ ದೂರವಾಣಿ ಮೂಲಕ ಸಂಪರ್ಕಿಸಿ ಸಿಸಿ ಟಿವಿ ಕ್ಯಾಮೆರಾ ಕಳವು ಮಾಡಿರುವ ಬಗ್ಗೆ ಮಾಹಿತಿ ನೀಡಿ, ಈ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದರು.

ಈ ಸಂದರ್ಭದಲ್ಲಿ ಗ್ರಾಮದ ಕೆರೆ ಹೋರಾಟಗಾರ ಹೇಮಂತ್, ಸೋಮಣ್ಣ, ಸಿದ್ದೇಶ್, ಶಿವಣ್ಣ ಸೇರಿದಂತೆ ಇನ್ನಿತರರಿದ್ದರು.

## ಅಂಗನವಾಡಿ ಕೇಂದ್ರಗಳಲ್ಲಿ ಕಳಪೆ ಆಹಾರ : ದೂರು

ದಾವಣಗೆರೆ, ಜೂ.19- ಇತ್ತೀಚಿನ ದಿನಗಳಲ್ಲಿ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ಹಾಗೂ ಗರ್ಭಿಣಿಯರಿಗೆ ಮತ್ತು ಬಾಣಂತಿಯರಿಗೆ ಕೊಡುವ ಆಹಾರ ಕಳಪೆ ಗುಣಮಟ್ಟದ್ದಾಗಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ (ಸ್ವಾಭಿಮಾನ ಬಣ) ಮಹಿಳಾ ಘಟಕದ ಅಧ್ಯಕ್ಷರಾದ ಕವಿತಾ ದೂರಿದ್ದಾರೆ.

ಈ ಸಂಬಂಧ ಜಿಲ್ಲಾಧಿಕಾರಿಗಳಿಗೆ ಸುದೀರ್ಘ ಮನವಿ ಪತ್ರ ಸಲ್ಲಿಸಿರುವ ಅವರು ಅಂಗನವಾಡಿ ಮತ್ತು ಮುರಾರ್ಜಿ ದೇಸಾಯಿ ಶಾಲೆಗಳಲ್ಲಿ ಸುಧಾರಣೆ ತರುವಂತೆ ಒತ್ತಾಯಿಸಿದ್ದಾರೆ.

ಪ್ರಾಥಮಿಕ ಕನ್ನಡ ಮತ್ತು ಉರ್ದು ಶಾಲೆಗಳಲ್ಲಿ ಕೆಲವು ಶಿಕ್ಷಕರು ಶಾಲೆಗೆ ಹೋಗದೇ ಮನೆಯಲ್ಲಿಯೇ ಕುಳಿತು ಸಂಬಳ ಪಡೆಯುತ್ತಿದ್ದಾರೆ. ಹಾಗಾಗಿ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಕೆಲವೊಂದು ಪದವಿ ಪೂರ್ವ ಕಾಲೇಜುಗಳಲ್ಲಿಯೂ ಸರ್ಕಾರದ ಹಣ ಸದ್ಬಳಕೆ ಮಾಡುತ್ತಿಲ್ಲ, ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿಯೂ ಸರ್ಕಾರದ ಆದೇಶ ಪಾಲಿಸುತ್ತಿಲ್ಲ. ಮಹಾತ್ಮ ಗಾಂಧೀಜಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಹಣ ದುರುಪಯೋಗವಾಗುತ್ತಿದೆ. ಜೆಸಿಬಿ ಬಳಸಿ ಕಾಮಗಾರಿ ಮಾಡಿ, ತಮಗೆ ಬೇಕಾದವರ ಹೆಸರನ್ನು ಕಳುಹಿಸಿ ಕೂಲಿ ಹಣವನ್ನು ಪಡೆದು ವಂಚಿಸಲಾಗುತ್ತಿದೆ. ಇದರಲ್ಲಿ ಪಂಚಾಯಿತಿಯ ಎಲ್ಲರೂ ಶಾಮೀಲಾಗಿರುತ್ತಾರೆ ಎಂದು ಅವರು ಆಪಾದಿಸಿದ್ದಾರೆ.

ಪಂಚಾಯತ್ ರಾಜ್ ಇಲಾಖೆಯು ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ ರಕ್ಷಣಾ ವೇದಿಕೆಯಿಂದ ರಾಜ್ಯಾದ್ಯಂತ ಉಗ್ರ ಹೋರಾಟ ಮಾಡುವುದಾಗಿ ಕವಿತಾ ತಿಳಿಸಿದ್ದಾರೆ.

## ರೇಣುಕಸ್ವಾಮಿ ಹತ್ಯೆ ಬಗ್ಗೆ ಮುಲಾಜಿಲ್ಲದೇ ತನಿಖೆ ನಡೆಯುತ್ತಿದೆ : ಪರಮೇಶ್ವರ್

ಬೆಂಗಳೂರು, ಜೂ. 19 - ಚಿತ್ರ ನಟ ದರ್ಶನ್ ವಿರುದ್ಧದ ರೇಣುಕಸ್ವಾಮಿ ಕೊಲೆ ಪ್ರಕರಣದ ತನಿಖೆ ಮುಲಾಜಿಲ್ಲದೇ, ಯಾವುದೇ ಒತ್ತಡಕ್ಕೆ ಒಳಗಾಗದೇ ನಡೆಯುತ್ತಿದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೊಲೆ ಪ್ರಕರಣದ ತನಿಖೆ ಸಡಿಲಗೊಳಿಸುವ ಉದ್ದೇಶ ಸರ್ಕಾರಕ್ಕಿಲ್ಲ ಎಂದು ಸ್ಪಷ್ಟಪಡಿಸಿದರು. ರೇಣುಕಸ್ವಾಮಿ ಕೊಲೆ ಪ್ರಕರಣದ ಸರ್ಕಾರಿ ಅಭಿಯೋಜಕರ ಬದಲಾವಣೆ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ. ಎಸ್‌ಪಿಪಿ ಬದಲಾವಣೆ ಮಾಡಿದರೂ ಅದರಲ್ಲೇನು ತಪ್ಪಿಲ್ಲ. ಕಾರಣ ಇಟ್ಟುಕೊಂಡೇ ತೀರ್ಮಾನ ತೆಗೆದುಕೊಳ್ಳಲಾಗಿರುತ್ತದೆ ಎಂದು ಹೇಳಿದರು.

ಪಬ್ಲಿಕ್ ಪ್ರಾಸಿಕ್ಯೂಟರ್ ಬದಲಾಯಿಸುವ ಸಂದರ್ಭ ಬಂದರೆ ಕಾರಣ ಇರುತ್ತದೆ, ಇಲ್ಲದೇ ಮಾಡುವುದಿಲ್ಲ. ಕಾನೂನು ಸಲಹೆಗಾರರು ನೀಡುವ ಸಲಹೆಗಳ ಆಧಾರದ ಮೇಲೆ ಮುಂದಿನ ನಿರ್ಧಾರ ಕೈಗೊಳ್ಳಬೇಕಾಗುತ್ತದೆ.

ಎಲ್ಲರೂ ಕಾನೂನಿಗೆ ಬದ್ಧವಾಗಿಯೇ ಕೆಲಸ ಮಾಡಬೇಕಾಗುತ್ತದೆ, ಕಾನೂನು ಬಿಟ್ಟು ಹೋಗಲಾಗದು. ಕಾನೂನು ಪ್ರಕಾರವೇ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳು ಸಹಾ ಕೆಲಸ ಮಾಡಬೇಕು. ಯಾರನ್ನೇ ನೇಮಿಸಿದರೂ ಕಾನೂನು ಪುಸ್ತಕ ಒಂದೇ ಅಲ್ಲವೇ? ಅದರ ಪ್ರಕಾರವೇ ಕೆಲಸ ಮಾಡಬೇಕಾಗುತ್ತದೆ ಎಂದರು. ನಟ ದರ್ಶನ್ ಅವರ ಮಾಜಿ ಮ್ಯಾನೇಜರ್ ಮಲ್ಲಿಕಾರ್ಜುನ್ ನಾಪತ್ತೆ ಪ್ರಕರಣವನ್ನು ಪೊಲೀಸರು ಪರಿಶೀಲನೆ ಮಾಡುತ್ತಾರೆ. ಪ್ರಕರಣದ ತನಿಖೆ ಅಗತ್ಯವಿದ್ದರೆ ಮಾಡುತ್ತಾರೆ, ಬೇಕಿದ್ದರೆ ಸರ್ಕಾರದ ಅನುಮತಿಯನ್ನೂ ನೀಡಲಾಗುವುದು.

ದರ್ಶನ್ ಪ್ರಕರಣಕ್ಕೂ ಶ್ರೀಧರ್ ಎಂಬುವರ ಆತ್ಮಹತ್ಯೆಗೂ ಸಂಬಂಧ ಇದ್ದರೆ ತನಿಖೆ ಮಾಡುತ್ತಾರೆ. ಪ್ರತ್ಯೇಕವಾಗಿ ತನಿಖೆ ನಡೆಸಬೇಕು ಅಂತ ಸರ್ಕಾರವನ್ನು ಕೇಳುತ್ತಾರೆ. ಕಾರಣಗಳನ್ನು ಆಧರಿಸಿ ತೀರ್ಮಾನ ಕೈಗೊಳ್ಳು ತ್ತೇವೆ. ಮರು ತನಿಖೆ ನಡೆಸಲು ಅನುಮತಿ ಕೇಳಿದರೆ ನೀಡಲಾಗುವುದು ಎಂದರು.

## ಎಸ್ಸೆಸ್-94: 'ಕಿಂಗ್' ನೆನಪಿನ ಕಾಣಿಕೆ



ದಾವಣಗೆರೆ, ಜೂ.19- ಹಿರಿಯ ಶಾಸಕರಾದ ಡಾ. ಶಾಮನೂರು ಶಿವಶಂಕರಪ್ಪನವರು 94ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದ ಹಿನ್ನೆಲೆಯಲ್ಲಿ ನಗರದ ಸ್ಟೇಡಿಯಂ ಸ್ನೇಹ ಬಳಗ, ದಿನೇಶ್ ಕೆ.ಶೆಟ್ಟಿ ಅಭಿಮಾನಿ ಬಳಗ ಹಾಗೂ ದಾವಣಗೆರೆ ಜಿಲ್ಲಾ ಚೆಸ್ ಅಸೋಸಿಯೇಷನ್ ವತಿಯಿಂದ ಚೆಸ್‌ನ 'ಕಿಂಗ್' ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಉದ್ಯಮಿಗಳೂ, ಕ್ರೀಡಾ ಪ್ರೋತ್ಸಾಹಕರಾದ ಅಥಣಿ ವೀರಣ್ಣ, ಕ್ರೀಡಾಪಟುಗಳ ಸಂಘದ ಜಿಲ್ಲಾಧ್ಯಕ್ಷ ದಿನೇಶ್ ಕೆ.ಶೆಟ್ಟಿ, ಶಿವಕುಮಾರ್ ಡಿ., ಕುರುಡಿ ಗಿರೀಶ್ ಮತ್ತಿತರರಿದ್ದರು.

## ಶ್ರೀರಾಮ ದೇವಸ್ಥಾನದಲ್ಲಿ ಇಂದು

ಘಾಟಕ್ ಯಕ್ಷ ಸಂಸ್ಕೃತಿ ಟ್ರಸ್ಟ್, ಬೆಂಗಳೂರು ವತಿಯಿಂದ 'ಯಕ್ಷಪಕ್ಷ' ತಾಳ ಮದ್ದಲೆ ಕೂಟಗಳು ದಾವಣಗೆರೆ ಪಿ.ಜೆ.ಬಡಾವಣೆಯಲ್ಲಿರುವ ಖಿಮಿತ್ಕರ್ ಈಶ್ವರಪ್ಪನವರ ಶ್ರೀರಾಮ ದೇವಸ್ಥಾನದಲ್ಲಿ ಇಂದು ನಡೆಯಲಿದೆ. ಸಂಜೆ 6 ಗಂಟೆಗೆ 'ಶ್ರೀರಾಮ ನಿರ್ಯಾಣ' ಪ್ರದರ್ಶನಗೊಳ್ಳಲಿದೆ. ಹಿಮ್ಮೇಳದಲ್ಲಿ ವಿದ್ವಾನ್ ಗಣಪತಿ ಭಟ್, ಎ.ಪಿ.ಘಾಟಕ್ ಮತ್ತು ಅರ್ಥಧಾರಿಗಳಾಗಿ ಉಮಾಕಾಂತ್ ಭಟ್, ವಾಸುದೇವ ರಂಗ ಭಟ್, ಶೇಣಿ ವೇಣುಗೋಪಾಲ್ ಭಟ್, ಅಜಿತ್ ಕಾರಂತ್ ಮತ್ತು ಸುಹಾಸ್ ಮರಾಠೆ ಪಾಲ್ಗೊಳ್ಳುವರು.

## ಮಲೇಬೆನ್ನೂರಿನಲ್ಲಿಂದು ವನಮಹೋತ್ಸವ

ಪಟ್ಟಣದ ಪೊಲೀಸ್ ಠಾಣೆಯ ಆವರಣದಲ್ಲಿ ಇಂದು ಬೆಳಗ್ಗೆ 10 ಕ್ಕೆ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಅರಣ್ಯ ಇಲಾಖೆ ಮತ್ತು ಬಸವ ಹಾಗೂ ಅಕ್ಕನ ಬಳಗದ ಸಹಯೋಗದಲ್ಲಿ ಸಸಿ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಮಲೇಬೆನ್ನೂರು ಲಯನ್ಸ್ ಕ್ಲಬ್ ಅಧ್ಯಕ್ಷ ಚಿಟ್ಟಕ್ಕಿ ತಿಳಿಸಿದ್ದಾರೆ.

## ಮಲೇಬೆನ್ನೂರು : ಇಂದು ಆರೋಗ್ಯ ಶಿಬಿರ

ಇಲ್ಲಿನ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ಇಂದು ಬೆಳಗ್ಗೆ 11 ಕ್ಕೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಮಹಿಳಾ ಜ್ಞಾನ ವಿಕಾಸ ಮೇಲ್ವಿಚಾರಕಿ ಸವಿತಾ ತಿಳಿಸಿದ್ದಾರೆ.



## ರಾಷ್ಟ್ರೀಯ ಪವರ್ ಲಿಫ್ಟಿಂಗ್ ಸ್ಪರ್ಧೆಗೆ ಡಿ. ಸುಜೀಲ್ ಆಯ್ಕೆ

ದಾವಣಗೆರೆ, ಜೂ. 19 - ಪಂಜಾಬ್ ರಾಜ್ಯದ ಪಾಟಿಯಾಲದಲ್ಲಿ ನಡೆಯುತ್ತಿರುವ ರಾಷ್ಟ್ರಮಟ್ಟದ ಪವರ್ ಲಿಫ್ಟಿಂಗ್ ಸ್ಪರ್ಧೆಗೆ ನಗರದ ಮಹಾನಗರ ಪಾಲಿಕೆ ವ್ಯಾಯಾಮ ಶಾಲೆಯ ಕ್ರೀಡಾಪಟು ಡಿ. ಸುಜೀಲ್ ಅಹಮದ್ ರಾಷ್ಟ್ರ ತಂಡಕ್ಕೆ ಆಯ್ಕೆಯಾಗಿದ್ದಾರೆ. ಸುಜೀಲ್, ಅಂತರ ರಾಷ್ಟ್ರೀಯ ಪವರ್ ಲಿಫ್ಟರ್ ಹೆಚ್. ದಾದಾಪೀರ್ ಹಾಗೂ ಅಂತರರಾಷ್ಟ್ರೀಯ ಕ್ರೀಡಾಪಟು, ಪೊಲೀಸ್ ಅಧಿಕಾರಿ ಕೆ.ಎನ್. ಶೈಲಜಾ ದಂಪತಿಯ ಪುತ್ರ.

# 'ಬಿಜೆಪಿಗೆ ಗೆದ್ದ ಹುಮ್ಮಸ್ಸಿಲ್ಲ, ಕಾಂಗ್ರೆಸ್‌ಗೆ ಸೋತ ನೋವಿಲ್ಲ'

## ರಾಣೇಬೆನ್ನೂರಿನ ಕಾಂಗ್ರೆಸ್ ಆತ್ಮಾವಲೋಕನ ಸಭೆಯಲ್ಲಿ ಶಾಸಕ ಪ್ರಕಾಶ್ ಕೋಳಿವಾಡ



ರಾಣೇಬೆನ್ನೂರು, ಜೂ.19- ಕಳೆದ ನಾಲ್ಕು ಲೋಕಸಭೆ ಚುನಾವಣೆಗಳಲ್ಲಿ ಒಂದೂವರೆ ಲಕ್ಷದಿಂದ, ಎರಡೂವರೆ ಲಕ್ಷ ಮತಗಳ ಅಂತರದಿಂದ ನಾವು ಸೋಲುತ್ತಾ ಬಂದಿದ್ದೇವೆ. ಈ ಬಾರಿ ಕೇವಲ ನಲವತ್ತು ಸಾವಿರ ಅಂತರದಲ್ಲಿ ಸೋತಿದ್ದೇವೆ. ಅಂದರೆ, ಜನತೆ ಬಿಜೆಪಿ ತೊರೆದು ನಮ್ಮನ್ನು ಬೆಂಬಲಿಸಿದ್ದಾರೆ. ಹಾಗಾಗಿ 'ಬಿಜೆಪಿಗೆ ಗೆಲುವಿನ ಹುಮ್ಮಸ್ಸಿಲ್ಲ, ನಮಗೆ ಸೋಲಿನ ನೋವಿಲ್ಲ' ಎಂದು ಶಾಸಕ ಪ್ರಕಾಶ ಕೋಳಿವಾಡ ಹೇಳಿದರು.

ವಿನಾಯಕ ನಗರದ ಕಾಂಗ್ರೆಸ್ ಕಛೇರಿಯಲ್ಲಿ ನಿನ್ನೆ ನಡೆದ ಲೋಕಸಭಾ ಚುನಾವಣೆಯ ಫಲಿತಾಂಶ ಕುರಿತು ನಡೆದ ಆತ್ಮಾವಲೋಕನ ಸಭೆಯಲ್ಲಿ ಅವರು ಮಾತನಾಡಿದರು.

ಚುನಾವಣೆಯಲ್ಲಿ ಬಿಜೆಪಿಗೆ ಮತ ನೀಡಿದ ಕಾಂಗ್ರೆಸ್ ನವರ ಮನವೊಲಿಸಬೇಕು. ಅವರು ಅನೇಕ ಕಾರಣಗಳಿಂದ ಬಿಜೆಪಿಗೆ ಮತ ನೀಡಿರುತ್ತಾರೆ. ಅವರ ತೊಂದರೆಗಳನ್ನು ಅರಿತು ಮತ್ತೆ ಕಾಂಗ್ರೆಸ್ಸಿಗೆ ಮರಳಿ ಕರೆತರಬೇಕಾಗಿದೆ. ಬರಲಿರುವ ಜಿಪಂ, ತಾಪಂ, ಎಪಿಎಂಸಿ, ಪಿಎಲ್‌ಡಿ ಬ್ಯಾಂಕ್ ಎಲ್ಲ ಚುನಾವಣೆಗಳಲ್ಲಿ ನಮ್ಮ ಕಾಂಗ್ರೆಸ್ ಪಕ್ಷ ಗೆಲುವು ಸಾಧಿಸುವಂತೆ ಪಕ್ಷವನ್ನು ಸಂಘಟಿಸಬೇಕು ಎಂದು ಕಾರ್ಯಕರ್ತರಲ್ಲಿ ಶಾಸಕರು ಮನವಿ ಮಾಡಿದರು.

ಅಭಿವೃದ್ಧಿ ಕೆಲಸಗಳನ್ನು ಯಾವುದೇ ಭೇದಗಳನ್ನು ಎಣಿಸದೇ ಮಾಡುತ್ತೇನೆ ನಿಮ್ಮ ವೈಯಕ್ತಿಕ ಕೆಲಸಗಳಿದ್ದಲ್ಲಿ ಅವು ಕಾಂಗ್ರೆಸ್ ಕಾರ್ಯಕರ್ತರಿಗೆ ಮೀಸಲಿರಿಸುತ್ತೇನೆ. ತಾವು ನೀಡಿದ ಸಲಹೆಗಳೆಲ್ಲವನ್ನು ಗಣನೆಗೆ ತೆಗೆದುಕೊಂಡು ಅದರಂತೆ ನಡೆಯುತ್ತೇನೆ. ನಿಮ್ಮ ಪ್ರತಿ ಹಂತದಲ್ಲೂ ನಾನು ನಿಮ್ಮ ಜೊತೆ ಇರುತ್ತೇನೆ ಎಂದು ಅವರು ಕಾರ್ಯಕರ್ತರ ಅಭಿಪ್ರಾಯಗಳಿಗೆ ಉತ್ತರಿಸಿದರು.

ನಗರ, ಪಟ್ಟಣಗಳಲ್ಲಿ ಕಾಂಗ್ರೆಸ್ ಮತಗಳಿಕೆ ಪ್ರಮಾಣ ಕಡಿಮೆ ಇದೆ. ಹಳ್ಳಿಗಳಲ್ಲಿ ಹೆಚ್ಚಿದೆ. ಶಹರ, ಪಟ್ಟಣಗಳಲ್ಲಿ ನಾವು ಪಕ್ಷದ ಸಂಘಟನೆಗೆ ಹೆಚ್ಚು ಆದ್ಯತೆ ಕೊಡಬೇಕು ಎಂದು ಹೇಳಿದ ಅವರು ಲೋಕಸಭೆ ಪರಾಜಿತ ಅಭ್ಯರ್ಥಿ ಆನಂದ ಗಡ್ಡದೇವರಮಠ ಅವರು, ನಾವು ಸೋತಿದ್ದರೂ ಸಹ ಆತ್ಮಾವಲೋಕನ ಸಭೆಗೆ ಆಗಮಿಸಿದ ಅಪಾರ ಸಂಖ್ಯೆಯ ಕಾರ್ಯಕರ್ತರ ಬಗ್ಗೆ ಸಂತಸ ವ್ಯಕ್ತಪಡಿಸಿ, ನಿಮ್ಮೆಲ್ಲ ಸಂದರ್ಭಗಳಲ್ಲೂ ಜೊತೆಯಾಗಿರುವುದಾಗಿ ತಿಳಿಸಿದರು.

ಕಾಂಗ್ರೆಸ್ ಅಧ್ಯಕ್ಷ ಮಂಜನಗೌಡ ಪಾಟೀಲ, ಕೆಸಿಸಿ ಬ್ಯಾಂಕ್ ನಿರ್ದೇಶಕ ಮಳ್ಳಪ್ಪ ನಿಂಗಜ್ಜನವರ, ಶೇರು ಕಾಬೂಲಿ, ಏಕನಾಥ ಭಾನುವಳ್ಳಿ, ಪುಟ್ಟಪ್ಪ ಮರಿಯಮ್ಮ ನವರ, ಬಿ.ಎಸ್.ಮರದ, ರುಕ್ಮಿಣಿ ಸಾವುಕಾರ, ಕೃಷ್ಣಪ್ಪ ಕಂಬಳಿ, ಸಣ್ಣತಮ್ಮಪ್ಪ ಬಾರ್ಕಿ, ಚಂದ್ರಪ್ಪ ಬೇಡರ, ರವಿ ಪಾಟೀಲ, ರಾಜು ಮೋಟಗಿ, ರಾಜು ಅಡಿವೆಪ್ಪನವರ ಮತ್ತಿತರರಿದ್ದರು.

## ಹರಪನಹಳ್ಳಿಯಲ್ಲಿ ನಾಳೆ ಶ್ರೀ ಗುರು ಕೆಂಪೇಶ್ವರ ಸ್ವಾಮಿ ರಥೋತ್ಸವ

ಹರಪನಹಳ್ಳಿ,ಜೂ.19- ಪಟ್ಟಣದ ಮೇಗಳಪೇಟೆಯಲ್ಲಿರುವ ಪಂಚಗಣಾಧೀಶ್ವರರಲ್ಲೊಬ್ಬರಾದ ಶ್ರೀ ಗುರು ಕೆಂಪೇಶ್ವರ ಸ್ವಾಮಿ ರಥೋತ್ಸವವು ನಾಡಿದ್ದು ದಿನಾಂಕ 21ರ ಶುಕ್ರವಾರ ಸಂಜೆ 6.05 ಕ್ಕೆ ವಿಜೃಂಭಣೆಯಿಂದ ಜರುಗಲಿದೆ ಎಂದು ಶ್ರೀ ಗುರು ಕೆಂಪೇಶ್ವರ ಜೀರ್ಣೋದ್ಧಾರ ಸಮಿತಿ ಕಾರ್ಯದರ್ಶಿ ಪಟೇಲ್ ಬೆಟ್ಟನಗೌಡ ತಿಳಿಸಿದ್ದಾರೆ.

# ನಗರದಲ್ಲಿ ನಾಳೆ 10ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ, ಜಿಲ್ಲಾ ಉಸ್ತುವಾರಿ ಸಚಿವರಿಂದ ಉದ್ಘಾಟನೆ

ದಾವಣಗೆರೆ, ಜೂ. 19 - ನಾಡಿದ್ದು ದಿನಾಂಕ 21 ರಂದು ಬೆಳಿಗ್ಗೆ 5.30ಕ್ಕೆ ನಗರದ ಹೈಸ್ಕೂಲ್ ಮೈದಾನದಲ್ಲಿ ಸ್ವಂತ ಸಮಾಜಕ್ಕಾಗಿ ಯೋಗ ಎಂಬ ಘೋಷ ವಾಕ್ಯದೊಂದಿಗೆ 10ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು.

ಕಾರ್ಯಕ್ರಮವನ್ನು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆಯುಷ್ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಾನಗರಪಾಲಿಕೆ, ಜಿಲ್ಲಾ ಯೋಗ ಒಕ್ಕೂಟ, ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಜಿಲ್ಲಾ ಪೊಲೀಸ್ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ, ತಪೋವನ ಆಯುರ್ವೇದ, ಯೋಗ ಮತ್ತು ನ್ಯಾಚುರೋಪತಿ ಮೆಡಿಕಲ್ ಕಾಲೇಜ್, ಅಶ್ವಿನಿ ಆಯುರ್ವೇದ ಮೆಡಿಕಲ್ ಕಾಲೇಜ್, ಎನ್.ಸಿ.ಸಿ., ಎನ್.ಎಸ್.ಎಸ್. ಘಟಕ, ಪ್ರಜಾಪಿತ ಬ್ರಹ್ಮಾಕುಮಾರೀಸ್, ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ಪತಂಜಲಿ ಯೋಗ ಸಮಿತಿ ಇವರುಗಳ ಸಹಕಾರದೊಂದಿಗೆ ಕಾರ್ಯಕ್ರಮ ಆಯೋಜಿಸಲಾಗಿದೆ. ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಶಾಸಕರಾದ ಶಾಂತನಗೌಡ ಡಿ.ಜಿ, ಬಿ.ಪಿ. ಹರೀಶ್, ಕೆ.ಎಸ್. ಬಸವಂತಪ್ಪ, ಬಸವರಾಜು ವಿ. ಶಿವಗಂಗಾ, ಬಿ. ದೇವೇಂದ್ರಪ್ಪ, ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್, ಎಂ.ಗೌಡ. ಚಿದಾನಂದ, ಕೆ.ಎಸ್. ನವೀನ್, ಡಿ.ಟಿ. ಶ್ರೀನಿವಾಸ್, ಎಸ್.ಎಲ್. ಭೋಜೇಗೌಡ, ಡಿ.ಎಸ್ ಅರುಣ್, ಕೆ. ಅಬ್ದುಲ್ ಜಬ್ಬಾರ್, ಡಾ. ಧನಂಜಯ ಸರ್ಜಿ, ಪಾಲಿಕೆ ಮೇಯರ್ ವಿನಾಯಕ. ಬಿ.ಹೆಚ್, ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಡಾ. ಬಿ. ಸುರೇಶ್ ಇಟ್ನಾಳ್, ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಉಮಾಪ್ರಶಾಂತ್ ಭಾಗವಹಿಸುವರೆಂದು ಜಿಲ್ಲಾ ಆಯುಷ್ ಅಧಿಕಾರಿ ಡಾ. ಬಿ.ಯು. ಯೋಗೇಂದ್ರಕುಮಾರ್ ತಿಳಿಸಿದ್ದಾರೆ.

# ಬಸ್ ನಿಲ್ದಾಣಗಳಲ್ಲಿ ಮಾರುವ ಆಹಾರದ ಬಗ್ಗೆ ಸರ್ಕಾರದ ಎಚ್ಚರಿಕೆ


(ಸಂಗ್ರಹ ಚಿತ್ರ)

**ಅವಧಿ ಮೀರಿದ ಆಹಾರ ಮಾರಾಟ, ಸ್ವಚ್ಛತೆ ಕೊರತೆ ಸೇರಿದಂತೆ ಲೋಪದೋಷ ಸರಿಪಡಿಸಿಕೊಳ್ಳಲು ಸೂಚನೆ**

ಬೆಂಗಳೂರು, ಜೂ. 19 - ರಾಜ್ಯದ ಬಸ್ ನಿಲ್ದಾಣಗಳಲ್ಲಿನ ವ್ಯಾಪಾರ ಮಳಿಗೆಗಳು ಮತ್ತು ಆಹಾರ ಉದ್ದಿಮೆಗಳಲ್ಲಿ ಅವಧಿ ಮೀರಿದ ಆಹಾರ ಮಾರಾಟ ಹಾಗೂ ಸ್ವಚ್ಛತೆ ಕೊರತೆ ಸೇರಿದಂತೆ ಹಲವು ಲೋಪದೋಷಗಳನ್ನು ಸರಿಪಡಿಸಿಕೊಳ್ಳದಿದ್ದರೆ ಅಂತಹ ಉದ್ದಿಮೆಗಳ ಮಾಲೀಕರ ವಿರುದ್ಧ ಕ್ರಮಕೈಗೊಳ್ಳಲಾಗುವುದು ಎಂದು ಸರ್ಕಾರ ಎಚ್ಚರಿಸಿದೆ.

ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006 ಮತ್ತು ನಿಯಮಗಳು 2011ರ ಅನ್ವಯ ಈ ತಿಂಗಳಲ್ಲಿ ಕೈಗೊಂಡ ಪರಿಶೀಲನೆ ಸಂದರ್ಭದಲ್ಲಿ ಕಂಡುಬಂದ ಲೋಪದೋಷಗಳನ್ನು ಸರಿಪಡಿಸಿಕೊಳ್ಳುವಂತೆ ಸೂಚಿಸಲಾಗಿದೆ.

ಈ ಸಂಬಂಧ ಪತ್ರಿಕಾ ಪ್ರಕಟಣೆ ನೀಡಿರುವ ಮುಖ್ಯಮಂತ್ರಿಗಳ ಕಾರ್ಯಾಲಯ, ಸಾಮಾಜಿಕ ಮಾಧ್ಯಮಗಳಲ್ಲಿ ಬಿತ್ತರವಾದ ವರದಿಗಳನ್ನು ಆಧರಿಸಿ, ಮುಖ್ಯಮಂತ್ರಿ ಕಚೇರಿಯ ಸಾರ್ವಜನಿಕ ಕುಂದುಕೊರತೆ ವಿಭಾಗದ ವಿಶೇಷ ಕರ್ತವ್ಯಾಧಿಕಾರಿಗಳು ತಕ್ಷಣವೇ ಅಗತ್ಯ ಕ್ರಮ ಕೈಗೊಂಡಿರುತ್ತಾರೆ ಎಂದು ತಿಳಿಸಿದೆ.

ಆಹಾರ ಸುರಕ್ಷತೆ ಮತ್ತು ಗುಣಮಟ್ಟ ನಿಯಮ ಪಾಲನೆ ಕುರಿತು ಪ್ರಸಕ್ತ ಜೂನ್ ತಿಂಗಳಲ್ಲಿ ವಿಶೇಷ ಅಭಿಯಾನ ಕೈಗೊಳ್ಳಲಾಗಿದೆ. ವ್ಯಾಪಾರ ಮಳಿಗೆಗಳು ಹಾಗೂ ಆಹಾರ ಉದ್ದಿಮೆಗಳಲ್ಲಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದುಕೊಳ್ಳುವಂತೆ ಮಾಲೀಕರಿಗೆ ಎಚ್ಚರಿಕೆ ನೀಡಲಾಗಿರುತ್ತದೆ. ರಾಜ್ಯಾದ್ಯಂತ 201 ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳ ಕಚೇರಿ ಹಾಗೂ ಖಾಸಗಿ ಬಸ್ ನಿಲ್ದಾಣಗಳಲ್ಲಿನ 748 ವ್ಯಾಪಾರ ಮಳಿಗೆಗಳು ಮತ್ತು ಆಹಾರ ಉದ್ದಿಮೆಗಳನ್ನು ಪರಿಶೀಲನೆ ಮಾಡಲಾಗಿದ್ದು, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ನಿಯಮ ಪಾಲಿಸುವಂತೆ ಅರಿವು ಮೂಡಿಸಲಾಗಿದೆ.

ಮುಂದಿನ ದಿನಗಳಲ್ಲಿ ನಡೆಯಲಿರುವ ಪುನರ್ ಪರಿಶೀಲನೆ ವೇಳೆ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ ಮತ್ತು ನಿಯಮಗಳ ಪಾಲನೆಯಾಗಿರಬೇಕು, ತಪ್ಪಿದಲ್ಲಿ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಕಾರ್ಯಾಲಯ ಎಚ್ಚರಿಸಿದೆ.

# 45ನೇ ವಸಂತಕ್ಕೆ ಕಾಲಿಟ್ಟ ರಾಜನಹಳ್ಳಿ ಶ್ರೀಗಳು



ಮಲೇಬೆನ್ನೂರು, ಜೂ. 19- ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಪೀಠಾಧಿಪತಿಗಳಾದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರು ತಮ್ಮ ಸಾರ್ಥಕ ಬದುಕಿನ 44 ವರ್ಷಗಳನ್ನು ಪೂರೈಸಿ, ಮಂಗಳವಾರ 45ನೇ ವಸಂತಕ್ಕೆ ಕಾಲಿಟ್ಟರು.

ಶ್ರೀಗಳು ತಮ್ಮ ಜನ್ಮ ದಿನದ ಅಂಗವಾಗಿ ಮಂಗಳವಾರ ಬೆಳಿಗ್ಗೆ ವಾಲ್ಮೀಕಿ ಗುರುಪೀಠದಲ್ಲಿರುವ ಲಿಂ. ಜಗದ್ಗುರುಗಳಾದ ಶ್ರೀ ಪುಣ್ಯಾನಂದಪುರಿ ಶ್ರೀಗಳವರ ಗದ್ದುಗೆಗೆ ಮಾಲಾರ್ಪಣೆ ಮಾಡಿ ಪೂಜೆ ಸಲ್ಲಿಸಿದರು. ನಂತರ ಮಠದ ಶಾಲೆಯಲ್ಲಿ ಮಕ್ಕಳೊಂದಿಗೆ ಕೇಕ್ ಕತ್ತರಿಸುವ ಮೂಲಕ ಶ್ರೀಗಳು ತಮ್ಮ ಹುಟ್ಟುಹಬ್ಬವನ್ನು ಸರಳವಾಗಿ ಆಚರಿಸಿಕೊಂಡರು.

ಈ ವೇಳೆ ಹಾಜರಿದ್ದ ಶಾಸಕ ಬಿ.ಪಿ. ಹರೀಶ್ ಅವರು ಶ್ರೀಗಳ ಹುಟ್ಟುಹಬ್ಬಕ್ಕೆ ಕೊಡುಗೆಯಾಗಿ ಶಾಲೆಯ ಮುಂಭಾಗದಲ್ಲಿ ಶಾಸಕರ ಅನುದಾನದಲ್ಲಿ ಮಕ್ಕಳ ಉದ್ಯಾನವನ ನಿರ್ಮಿಸಿಕೊಡುವುದಾಗಿ ಹೇಳಿದರು. ಸದಾ ಸಮಾಜಮುಖಿಯಾಗಿ ಹೋರಾಟ ಮಾಡುವ ಶ್ರೀಗಳಿಗೆ ಭಗವಂತ ಆಯುರಾರೋಗ್ಯ ಭಾಗ್ಯ ನೀಡಲೆಂದು ಪ್ರಾರ್ಥಿಸಿದರು.

ತಣಿಗೆರೆಯ ಸನ್ನಿ ರಾಜಮನೆ ಅವರು ರಾಜಮನೆ ಫೌಂಡೇಷನ್ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ಶ್ರೀಗಳ ಹುಟ್ಟುಹಬ್ಬದ ಅಂಗವಾಗಿ ಮಕ್ಕಳಿಗೆ ನೋಟ್‌ಬುಕ್, ಪೆನ್ನುಗಳನ್ನು ವಿತರಿಸಿದರು.

ಕಳೆದ 19 ವರ್ಷಗಳಿಂದ ಪ್ರತಿ ವರ್ಷ ಸುಮಾರು 20 ಲಕ್ಷ ರೂ. ವೆಚ್ಚದಲ್ಲಿ 10 ಸಾವಿರ ವಿದ್ಯಾರ್ಥಿಗಳಿಗೆ ಅಗತ್ಯವಾದ ನೋಟ್ ಬುಕ್, ರ್‍ಯಾಪಿಡೆಕ್ಸ್ ಕೋರ್ಸ್ ಪುಸ್ತಕಗಳನ್ನು ನೀಡುವ ಮೂಲಕ ಮಕ್ಕಳಿಗೆ ನೆರವಾಗುತ್ತಿರುವ ಸನ್ನಿ ರಾಜಮನೆ ಅವರನ್ನು ಶ್ರೀಗಳು ಹಾಗೂ ಶಾಸಕ ಹರೀಶ್ ಅವರು ಸನ್ಮಾನಿಸಿ, ಅಭಿನಂದಿಸಿದರು.

ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಗುತ್ತೂರು ಚಂದ್ರಪ್ಪ, ಮಠದ ಧರ್ಮದರ್ಶಿ ಕೆ.ಬಿ. ಮಂಜುನಾಥ್, ನಗರಸಭೆ ಸದಸ್ಯ ದಿನೇಶ್ ಬಾಬು, ಮಕರಿ ಪಾಲಾಕ್ಷಪ್ಪ, ಪಾರ್ವತಿ ಬೋರಯ್ಯ, ಗೌರಮ್ಮ ಮಂಜುನಾಥ್, ನಿವೃತ್ತ ಶಿಕ್ಷಕ ಜಿ.ಆರ್. ನಾಗರಾಜ್, ಪತ್ರಕರ್ತ ಜಿಗಳಿ ಪ್ರಕಾಶ್, ಹಂಚಿನಮನೆ ದೇವೇಂದ್ರಪ್ಪ, ಕೆ. ರಾಜು, ಶಾಲಾ ಮುಖ್ಯ ಶಿಕ್ಷಕ ಸಿದ್ದೇಶ್, ಮಠದ ವ್ಯವಸ್ಥಾಪಕ ರಾಜನಹಳ್ಳಿ ಭೀಮಣ್ಣ, ಮಠದ ಹುಡುಗರಾದ ಡ್ರೈವರ್ ಮಂಜು, ರವಿ, ತಿಪ್ಪೇಸ್ವಾಮಿ, ಸಿದ್ದು ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

ಸಂಜೆ ನೂತನ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಜಗಳೂರು ಶಾಸಕ ದೇವೇಂದ್ರಪ್ಪ ಸೇರಿದಂತೆ ಇನ್ನೂ ಅನೇಕರು ಮಠಕ್ಕೆ ಆಗಮಿಸಿ, ಶ್ರೀಗಳಿಗೆ ಶುಭಾಶಯ ಕೋರಿದರು.

## ಮಠಾಧೀಶರಿಂದ ಪುಷ್ಪಾರ್ಚನೆ

**ಮಧ್ಯಾಹ್ನ ವಾಲ್ಮೀಕಿ ಗುರುಪೀಠಕ್ಕೆ ಆಗಮಿಸಿದ ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಭಗೀರಥ ಗುರುಪೀಠದ ಶ್ರೀ ಪುರುಷೋತ್ತಮಾ ನಂದಪುರಿ ಸ್ವಾಮೀಜಿ, ಕುಂಚಿಟಿಗ ಗುರುಪೀಠದ ಶ್ರೀ ಶಾಂತವೀರ ಸ್ವಾಮೀಜಿ, ಶ್ರೀ ಮಡಿವಾಳ ಮಾಚಿ ದೇವ ಸ್ವಾಮೀಜಿ, ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮೀಜಿ ಸೇರಿದಂತೆ 20ಕ್ಕೂ ಹೆಚ್ಚು ವಿವಿಧ ಮಠಗಳ ಶ್ರೀಗಳು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಶ್ರೀಗಳಿಗೆ ಪುಷ್ಪಾರ್ಚನೆ ಮಾಡಿ, ನಂತರ ಸಸಿ ನೆಡುವ ಮೂಲಕ ವಿಶೇಷವಾಗಿ ಹುಟ್ಟುಹಬ್ಬ ಆಚರಿಸಿ, ಗಮನ ಸೆಳೆದರು.**

# ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ ಕಾರ ಹುಣ್ಣಿಮೆ ವಿಶೇಷ ಪೂಜೆ



ದಾವಣಗೆರೆ, ಜೂ. 19- ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಕಾರ ಹುಣ್ಣಿಮೆ ಪ್ರಯುಕ್ತ ನಾಡಿದ್ದು 21ರ ಶುಕ್ರವಾರ ನವಗ್ರಹ ಹೋಮ, ಶ್ರೀ ಸತ್ಯ ನಾರಾಯಣ ಸ್ವಾಮಿ ಪೂಜಾ ಕಥಾ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

ಶ್ರೀಮತಿ ಗೌರಾಂಬಿಕ, ವಿಜಯಕುಮಾರ್ ಅನ್ನಪೂರ್ಣ ಮತ್ತು ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

# ವೀರೇಶ್ವರ ಪುಣ್ಯಾಶ್ರಮದಲ್ಲಿ ನಾಳೆ ಶಿವಾನುಭವ ಗೋಷ್ಠಿ



ದಾವಣಗೆರೆ, ಜೂ. 19- ಬಾಡಾ ಕ್ರಾಸ್‌ನಲ್ಲಿರುವ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ನಾಡಿದ್ದು ಶುಕ್ರವಾರ ಬೆಳಿಗ್ಗೆ 11.30ಕ್ಕೆ ಕಾರ ಹುಣ್ಣಿಮೆ, ಶಿವಾನುಭವ ಗೋಷ್ಠಿ ಮತ್ತು ಸಂಗೀತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಸಾನ್ನಿಧ್ಯವನ್ನು ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ (ಆವರಗೊಳ್ಳ), ಶ್ರೀ ಕಲ್ಲಯ್ಯಜ್ಜನವರು (ಶ್ರೀ ವೀರೇಶ್ವರ ಪುಣ್ಯಾಶ್ರಮ) ವಹಿಸುವರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕರಾದ ಡಾ. ಶಾಮನೂರು ಶಿವಶಂಕರಪ್ಪ ಹಾಗೂ ಅಥಣಿ ಎಸ್. ವೀರಣ್ಣ ವಹಿಸುವರು. ಮುಖ್ಯ ಅತಿಥಿಗಳಾಗಿ ದೇವರಮನಿ ಶಿವಕುಮಾರ್, ಡಾ. ಜೆ.ಎನ್. ಕರಿಬಸಪ್ಪ, ಜಿ.ಹೆಚ್. ಯಲ್ಲಪ್ಪ, ಎಸ್.ಕೆ ವೀರಣ್ಣ, ಶ್ರೀಮತಿ ಎಂ.ಜಿ. ಶಶಿಕಲಾ ಮೂರ್ತಿ ಆಗಮಿಸುವರು.

# 'ಹಮಾರೆ ಬಾರಹ್' ಬಿಡುಗಡೆಗೆ ಬಾಂಬೆ ಹೈಕೋರ್ಟ್ ಅನುಮತಿ

ಮುಂಬೈ, ಜೂ. 19 – ಅನ್ನು ಕಪೂರ್ ನಟಿಸಿರುವ ಹಿಂದಿ ಚಿತ್ರ 'ಹಮಾರೆ ಬಾರಹ್' ಬಿಡುಗಡೆಗೆ ಬಾಂಬೆ ಹೈಕೋರ್ಟ್ ಅನುಮತಿ ನೀಡಿದೆ. ಚಿತ್ರದ ನಿರ್ಮಾಪಕರು ಆಕ್ಷೇಪಾರ್ಹ ಅಂಶಗಳಿಗೆ ಕತ್ತರಿ ಹಾಕಲು ಸಮ್ಮತಿಸಿದ ನಂತರ ಈ ಅನುಮತಿ ನೀಡಲಾಗಿದೆ.

ಈ ಚಿತ್ರವನ್ನು ಜೂನ್ 7ರಂದು ಬಿಡುಗಡೆ ಮಾಡಲು ಈ ಹಿಂದೆ ನಿರ್ಧರಿಸಲಾಗಿತ್ತು. ನಂತರ ಜೂನ್ 14ಕ್ಕೆ ಮುಂದೂಡಲಾಗಿತ್ತು. ಈಗ ಜೂನ್ 21ರಂದು ಬಿಡುಗಡೆಯಾಗುವ ಸಾಧ್ಯತೆ ಇದೆ.

ಈ ಚಿತ್ರದಲ್ಲಿ ಇಸ್ಲಾಂಗೆ ಸಂಬಂಧಿಸಿದಂತೆ ಆಕ್ಷೇಪಾರ್ಹ ಅಂಶಗಳಿವೆ ಎಂದು ಹೈಕೋರ್ಟ್‌ನಲ್ಲಿ ತಕರಾರು ಅರ್ಜಿ ದಾಖಲಿಸಲಾಗಿತ್ತು. ನಂತರ ವಿಷಯ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಈ ಚಲನಚಿತ್ರದ ಬಗ್ಗೆ ನಿರ್ಧಾರ ತೆಗೆದುಕೊಳ್ಳುವಂತೆ ಬಾಂಬೆ ಹೈಕೋರ್ಟ್‌ಗೆ ಸುಪ್ರೀಂ ಕೋರ್ಟ್ ತಿಳಿಸಿತ್ತು.

ಸಿ.ಬಿ.ಎಫ್.ಸಿ. ಅನುಮತಿ ಪಡೆಯದೇ ಚಿತ್ರದ ಟ್ರೇಲರ್ ಬಿಡುಗಡೆ ಮಾಡಿದ್ದಕ್ಕಾಗಿ ಹೈಕೋರ್ಟ್ 5 ಲಕ್ಷ ರೂ.ಗಳ ದಂಡ ವಿಧಿಸಿದೆ.




ನೀರಿನ ಮಟ್ಟ : 119 ಅಡಿ ಇಂಚು
ಒಳ ಹರಿವು : 447 ಕ್ಯೂಸೆಕ್ಸ್
ಹೊರ ಹರಿವು : 342 ಕ್ಯೂಸೆಕ್ಸ್
ಕಳೆದ ವರ್ಷ : 137 ಅಡಿ 2 ಇಂಚು

# ವಿಶ್ವ ಯೋಗ ದಿನ : ಯಶಸ್ವಿಯಾದ ಯೋಗ ಶಿಬಿರ



ದಾವಣಗೆರೆ, ಜೂ.19- ಜಿಲ್ಲಾಡಳಿತ, ಜಿಲ್ಲಾ ಆಯುಷ್ ಇಲಾಖೆ, ಜಿಲ್ಲಾ ಯೋಗ ಒಕ್ಕೂಟ ಇವರ ಸಹಯೋಗದಲ್ಲಿ ನಗರದ ಶಿವಯೋಗಿ ಮಂದಿರದಲ್ಲಿ ಮಂಗಳವಾರ 10ನೇ ಅಂತರ ರಾಷ್ಟ್ರೀಯ ಯೋಗ ದಿನದ ಪ್ರಯುಕ್ತ ಉಚಿತವಾಗಿ ಯೋಗ ತರಬೇತಿ ಶಿಬಿರ ನಡೆಯಿತು.

ಜಿಲ್ಲಾ ಆಯುಷ್ ಅಧಿಕಾರಿ ಡಾ.ಬಿ.ಯು. ಯೋಗೇಂದ್ರ ಕುಮಾರ್ ಪ್ರಾಸ್ತಾವಿಕ ಮಾತನಾಡಿ, ಯೋಗ ಒಕ್ಕೂಟದ ಅಧ್ಯಕ್ಷ ವಾಸುದೇವ ರಾಯ್ಕರ್ ಅವರು ಆಯುಷ್ ಇಲಾಖೆಯ ಜತೆ ಕಳೆದ 10 ವರ್ಷಗಳಿಂದಲೂ ಅಂತರರಾಷ್ಟ್ರೀಯ ಯೋಗ ದಿನ ಆಚರಿಸುತ್ತಿದ್ದು, ಈ ವರ್ಷವೂ 10ನೇ ಅಂತರರಾಷ್ಟ್ರೀಯ ಯೋಗ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ಆಯುಷ್ ಪದ್ಧತಿಯ ಉಪಯೋಗ ಹಾಗೂ ಯೋಗದಿಂದಾಗುವ ಪ್ರಯೋಜನವನ್ನು ಸಾರ್ವಜನಿಕರಿಗೆ ವಿವರಿಸಿದರು.

ಶ್ರೀ ಬಸವ ಪ್ರಭು ಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸಿ, ಯೋಗದ ಮಹತ್ವ ತಿಳಿಸಿದರು.

ಯೋಗಪಟು ಚನ್ನಬಸವಣ್ಣ ಯೋಗ ಪ್ರಾತ್ಯಕ್ಷಿತೆ ನೆರವೇರಿಸಿದರು. 600ಕ್ಕೂ ಅಧಿಕ ಜನ ಕಾರ್ಯಕ್ರಮದಲ್ಲಿದ್ದರು.

ಯೋಗ ಒಕ್ಕೂಟದ ಪದಾಧಿಕಾರಿ ಪರಶುರಾಮ್, ಕೀರ್ತಿರಾಜು, ಪ್ರಕಾಶ್ ಉತ್ತಂಗಿ, ಮಾದೇಗೌಡ್ರು, ಅನಿಲ್ ರಾಯ್ಕರ್ ಹಾಗೂ ಇತರರಿದ್ದರು.

# ರಾಣೇಬೆನ್ನೂರಿಗೆ ಇಂದು ಬಸವರಾಜ ಬೊಮ್ಮಾಯಿ

ರಾಣೇಬೆನ್ನೂರು : ಹಾವೇರಿ -ಗದಗ ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಜಯ ಗಳಿಸಿದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದು ರಾಣೇಬೆನ್ನೂರಿಗೆ ಆಗಮಿಸಿ, ಸಂಜೆ 4ಕ್ಕೆ ಶ್ರೀ ಸಿದ್ದೇಶ್ವರ ಸಮುದಾಯ ಭವನದಲ್ಲಿ ನಡೆಯುವ ಮತದಾರರಿಗೆ ಕೃತಜ್ಞತೆ ಹಾಗೂ ಅಭಿನಂದನಾ ಸಮಾರಂಭದಲ್ಲಿ ಪಾಲ್ಗೊಳ್ಳುವರು.

# ಚನ್ನಪಟ್ಟಣದಿಂದ ಸ್ಪರ್ಧೆಗೆ ಡಿಕೆಶಿ ಒಲವು?



ಬೆಂಗಳೂರು, ಜೂ. 19- ಉಪಚುನಾವಣೆಯಲ್ಲಿ ಚನ್ನಪಟ್ಟಣದ ಜನ ನನ್ನ ಮೇಲೆ ಒಲವು ತೋರಿದರೆ, ಪಕ್ಷ ತೀರ್ಮಾನಿಸಿದರೆ ನಾನು ಸ್ಪರ್ಧೆ ಮಾಡದೇ ಬೇರೆ ವಿಧಿ ಇಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ಚನ್ನಪಟ್ಟಣ ಪ್ರವಾಸಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚನ್ನಪಟ್ಟಣ ನನ್ನ ಹೃದಯದಲ್ಲಿದೆ. ಹಿಂದೆ ಸಾತನೂರು ವಿಧಾನಸಭಾ ಕ್ಷೇತ್ರದ ಭಾಗವಾಗಿತ್ತು. ಈ ಭಾಗ ನನಗೆ ರಾಜಕೀಯವಾಗಿ ಜನ್ಮನೀಡಿದ ಸ್ಥಳ. ಜನ ಕಷ್ಟಕಾಲದಲ್ಲಿ ನಮಗೆ ಹೆಚ್ಚಿನ ಮತ ನೀಡಿ ಬೆಂಬಲ ನೀಡಿದ್ದಾರೆ, ನಾನು ಅವರ ಋಣ ತೀರಿಸಬೇಕು ಎಂದರು.

ಕನಕಪುರ ಯಾವ ರೀತಿ ಅಭಿವೃದ್ಧಿ ಮಾಡಿದ್ದೇನೋ ಅದಕ್ಕಿಂತ ಹೆಚ್ಚಿನ ಅಭಿವೃದ್ಧಿಗೆ ಅವಕಾಶವಿದೆ. ಕ್ಷೇತ್ರದ ಮೇಲೆ ನನಗೆ ವಿಶೇಷವಾದ ಕಾಳಜಿ ಇದೆ. ಚನ್ನಪಟ್ಟಣ ಅಭಿವೃದ್ಧಿ ಹಾಗೂ ಬದಲಾವಣೆಗೆ ನಾನು ಬದ್ಧವಾಗಿದ್ದೇನೆ, ಜನ ಏನು ಹೇಳುತ್ತಾರೆ ಎಂದು ತಿಳಿದು ನಂತರ ತೀರ್ಮಾನ ಮಾಡುತ್ತೇನೆ.

ಚನ್ನಪಟ್ಟಣದಲ್ಲಿ ಸಹೋದರ ಸುರೇಶ್ ಸ್ಪರ್ಧೆ ವಿಚಾರ ಇನ್ನೂ ತೀರ್ಮಾನವಾಗಿಲ್ಲ. ನನಗೆ ಮತ ನೀಡಿ ಎಂದು ಅಲ್ಲಿನ ಮತದಾರರಿಗೆ ಮನವಿ ಮಾಡುತ್ತೇನೆ ಎಂದವರು ಹೇಳಿದರು.

# ದಂಪತಿಗೆ ಅಮೆಜಾನ್ ಪ್ಯಾಕೇಜ್‌ನಲ್ಲಿ ದೊರೆತ ಹಾವು



ಬೆಂಗಳೂರು, ಜೂ. 19 – ಬೆಂಗಳೂರು ದಂಪತಿಗೆ ಅಮೆಜಾನ್ ಪ್ಯಾಕೇಜ್ ಮೂಲಕ ಹಾವೊಂದು ದೊರೆತು ಆಘಾತಕ್ಕೆ ಗುರಿಯಾಗಿದ್ದಾರೆ.

ನಾಗರ ಹಾವು ಎಂದು ಶಂಕಿಸಲಾಗುತ್ತಿರುವ ಹಾವನ್ನು ಪ್ಯಾಕೇಜಿಂಗ್‌ಗೆ ಬಳಸುವ ಟೇಪ್ ಮೂಲಕ ಅಂಟಿಸಿ ದಂಪತಿಗೆ ಕಳಿಸಲಾಗಿದೆ. ದಂಪತಿ ಎಕ್ಸ್‌ಬಾಕ್ಸ್ ಕಂಟ್ರೋಲರ್‌ಗಾಗಿ ಆನ್‌ಲೈನ್ ಮೂಲಕ ಆರ್ಡರ್ ಮಾಡಿದ್ದರು.

ಸರ್ಜಾಪುರದ ಐ.ಟಿ. ವೃತ್ತಿಪರ ದಂಪತಿ ಈ ಘಟನೆಯ ವಿಡಿಯೋ ಮಾಡಿರುವುದು ವೈರಲ್ ಆಗಿದೆ. ದಂಪತಿ ತಮ್ಮ ಹೆಸರು ಬಹಿರಂಗ ಪಡಿಸಲು ಬಯಸಿಲ್ಲ. ಕಂಪನಿ ಈ ಘಟನೆಯ ತನಿಖೆ ನಡೆಸಲಿದೆ ಎಂದು ಅಮೆಜಾನ್ ಇಂಡಿಯಾ ವಕ್ತಾರರು ಹೇಳಿದ್ದಾರೆ.

ಇತ್ತೀಚೆಗೆ ನಾವು ಎಕ್ಸ್‌ಬಾಕ್ಸ್ ಕಂಟ್ರೋಲರ್ ಅನ್ನು ಅಮೆಜಾನ್ ಮೂಲಕ ಖರೀದಿಸಿದ್ದೆವು. ಪ್ಯಾಕೇಜ್ ಅನ್ನು ನಮಗೆ ನೇರವಾಗಿ ತಲುಪಿಸಲಾಗಿತ್ತು. ಇದನ್ನು ಮನೆಯ ಹೊರಗೇನೂ ಇಟ್ಟು ಹೋಗಿರಲಿಲ್ಲ ಎಂದು ದಂಪತಿ ಹೇಳಿದ್ದಾರೆ. ಸರ್ಜಾಪುರ ರಸ್ತೆಯಲ್ಲಿರುವ ನಾವು ಪ್ಯಾಕೇಜ್ ವಿಡಿಯೋ ಮಾಡಿದ್ದೇವೆ. ಇದಕ್ಕೆ ಇನ್ನೊಬ್ಬರು ಪ್ರತ್ಯಕ್ಷದರ್ಶಿಯೂ ಇದ್ದಾರೆ ಎಂದು ದಂಪತಿ ಹೇಳಿದ್ದಾರೆ.

ಪ್ಯಾಕೇಜ್‌ನಲ್ಲಿ ಅತ್ಯಂತ ವಿಷಕಾರಿಯಾದ ಹಾವು ಅಂಟಿಸಿರುವುದು ಕಂಡು ಬಂದಿದೆ. ಈ ಹಾವು ನಮ್ಮ ಮನೆ ಇಲ್ಲವೇ ಅಪಾರ್ಟ್‌ಮೆಂಟ್‌ನಲ್ಲಿ ಯಾವುದೇ ಹಾನಿ ಮಾಡಿಲ್ಲ ಎಂದು ದಂಪತಿ ಹೇಳಿದ್ದಾರೆ.

ನಮ್ಮ ಹಣ ಮರಳಿಸುವಂತೆ ಕೋರಿಕೆ ಸಲ್ಲಿಸಿದ್ದೇವೆ. ಆದರೆ, ಈ ರೀತಿ ವಿಷಕಾರಿ ಹಾವನ್ನು ಪೆಟ್ಟಿಗೆಯಲ್ಲಿಟ್ಟು ನಮ್ಮ ಜೀವಕ್ಕೆ ಅಪಾಯ ತರುವುದರಿಂದ ಅವರಿಗೇನು ಸಿಗುತ್ತದೆ? ಇದು ಸಂಪೂರ್ಣವಾಗಿ ಅಮೆಜಾನ್ ಹಾಗೂ ಅವರ ಸಾಗಣೆ, ದಾಸ್ತಾನು ಸೌಲಭ್ಯ ಹಾಗೂ ಉಸ್ತುವಾರಿಯಲ್ಲಿನ ಲೋಪ ಎಂದು ದಂಪತಿ ಆರೋಪಿಸಿದ್ದಾರೆ.

# 76 ಸಾವಿರ ಕೋಟಿ ರೂ.ಗಳ ವಧವನ್ ಬಂದರು ಯೋಜನೆಗೆ ಸಮ್ಮತಿ

ನವದೆಹಲಿ, ಜೂ. 19 – ಮಹಾರಾಷ್ಟ್ರದ 76 ಸಾವಿರ ಕೋಟಿ ರೂ.ಗಳ ವಧವನ್ ಬಂದರು ಯೋಜನೆಗೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ.

ಜವಾಹರಲಾಲ್ ನೆಹರು ಬಂದರು ಪ್ರಾಧಿಕಾರ ಹಾಗೂ ಮಹಾರಾಷ್ಟ್ರ ಕಡಲ ಮಂಡಳಿ ರೂಪಿಸುವ ವಿಶೇಷ ವಾಹಕದ ಮೂಲಕ ವಧವನ್ ಬಂದರು ಯೋಜನೆ ಜಾರಿಗೆ ತರಲಾಗುವುದು. ಇದರಲ್ಲಿ ಪ್ರಾಧಿಕಾರವು ಶೇ.74 ಹಾಗೂ ಮಂಡಳಿ ಶೇ.26ರಷ್ಟು ಪಾಲುಗಾರಿಕೆ ಹೊಂದಿರಲಿದೆ. ಈ ಬಂದರು ವಿಶ್ವದ ಉನ್ನತ 10 ಬಂದರುಗಳಲ್ಲಿ ಒಂದಾಗಿರಲಿದೆ ಎಂದು ಸಂಪುಟದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಈ ಬಂದರು ಯೋಜನೆಯ ಮೂಲಕ 12 ಲಕ್ಷ ಜನರಿಗೆ ಉದ್ಯೋಗ ಸಿಗಲಿದೆ. ಜಮೀನು ವಶ ಸೇರಿದಂತೆ ಯೋಜನೆಗೆ 76,220 ಕೋಟಿ ರೂ. ವೆಚ್ಚವಾಗಲಿದೆ.

ಬಂದರನ್ನು ಹೆದ್ದಾರಿ ಹಾಗೂ ಸರಕು ಸಾಗಣೆ ರೈಲ್ವೆ ಮಾರ್ಗದ ಮೂಲಕ ಸಂಪರ್ಕಿಸುವ ಯೋಜನೆಗೂ ಸಂಪುಟ ಒಪ್ಪಿಗೆ ನೀಡಿದೆ. ಈ ಬಂದರು ಒಂಭತ್ತು ಕಂಟೈನರ್ ಟರ್ಮಿನಲ್ ಹೊಂದಿರಲಿದೆ. ಪ್ರತಿಯೊಂದು 1,000 ಮೀಟರ್ ಉದ್ದ, ನಾಲ್ಕು ಬಹು ಉಪಯೋಗಿ ಬರ್ತ್ ಹೊಂದಿರಲಿದೆ.

# ನಗರದಲ್ಲಿ ಇಂದು 'ಆಕ್ಟಗಾನ್-2024' ಉದ್ಘಾಟನಾ ಸಮಾರಂಭ

ನಗರದಲ್ಲಿಂದು ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ಮತ್ತು ಬಾಪೂಜಿ ಅಕಾಡೆಮಿ ಆಫ್ ಮ್ಯಾನೇಜ್ಮೆಂಟ್ ಅಂಡ್ ರಿಸರ್ಚ್ ವತಿಯಿಂದ 'ಆಕ್ಟಗಾನ್-2024' ಉದ್ಘಾಟನಾ ಸಮಾರಂಭವನ್ನು ಬಾಪೂಜಿ ಬಿ-ಸ್ಕೂಲ್ ಸಭಾಂಗಣದಲ್ಲಿ ಬೆಳಿಗ್ಗೆ 10.30ಕ್ಕೆ ಏರ್ಪಡಿಸಲಾಗಿದೆ.

ಬಾಪೂಜಿ ಬಿ ಸ್ಕೂಲ್‌ನ ಅಧ್ಯಕ್ಷ ಡಾ. ಅಥಣಿ ಎಸ್. ವೀರಣ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳು ಹಾಗೂ ಉದ್ಘಾಟಕರಾಗಿ ಮುಖ್ಯ ವಿಶ್ಲೇಷಣಾಧಿಕಾರಿ ಸಿ.ವಿ. ಗೌಡರ್ ಉಪಸ್ಥಿತರಿರುವರು ಎಂದು ಬಾಪೂಜಿ ಬಿ-ಸ್ಕೂಲ್ ನಿರ್ದೇಶಕ ಡಾ. ಸ್ವಾಮಿ ತ್ರಿಭುವಾನಂದ ಹೆಚ್.ವಿ. ತಿಳಿಸಿದ್ದಾರೆ.

# ನಗದೀಕರಣ ಯೋಜನೆಯಿಂದ 1.56 ಲಕ್ಷ ಕೋಟಿ ರೂ.

ನವದೆಹಲಿ, ಜೂ. 19 – 2023-24ರ ಸಾಲಿನಲ್ಲಿ ಕೇಂದ್ರ ಸರ್ಕಾರ ರಾಷ್ಟ್ರೀಯ ನಗದೀಕರಣ ಯೋಜನೆಯ ಮೂಲಕ 1.56 ಲಕ್ಷ ಕೋಟಿ ರೂ.ಗಳನ್ನು ಪಡೆದುಕೊಂಡಿದೆ ಎಂದು ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ.

ನಗದೀಕರಣ ಯೋಜನೆಯ ಮೂಲಕ 2022ರಿಂದ ಇಲ್ಲಿಯವರೆಗೆ 6 ಲಕ್ಷ ಕೋಟಿ ರೂ.ಗಳನ್ನು ಪಡೆದುಕೊಳ್ಳಲಾಗಿದೆ. ಆದರೂ, 2023-24ರ ಗುರಿಯನ್ನು ತಲುಪಲು ಸಾಧ್ಯವಾಗಿಲ್ಲ.

ಈ ಅವಧಿಯಲ್ಲಿ 1.8 ಲಕ್ಷ ಕೋಟಿ ರೂ.ಗಳನ್ನು ಪಡೆಯುವ ಗುರಿ ಹೊಂದಲಾಗಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ.







# ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಸಂಚಾರ ನಿಯಮಗಳ ಜಾಗೃತಿ



ದಾವಣಗೆರೆ, ಜೂ.19- ಜಿಲ್ಲಾ ಪೊಲೀಸ್ ಇಲಾಖೆಯಿಂದ ಮಂಗಳವಾರ ನಗರದ ವಿವಿಧ ಶಾಲಾ-ಕಾಲೇಜುಗಳಲ್ಲಿ ಶಿಕ್ಷಕರು, ಪಾಲಕರು ಮತ್ತು ವಿದ್ಯಾರ್ಥಿಗಳಿಗೆ ಸಂಚಾರ ನಿಯಮದ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಎಸ್ಪಿ ಉಮಾ ಪ್ರಶಾಂತ್, ಎಎಸ್ಪಿ ವಿಜಯಕುಮಾರ ಎಂ ಸಂತೋಷ್ ಮತ್ತು ಜಿ. ಮಂಜುನಾಥ್, ಡಿವೈಎಸ್ಪಿ ಮಲ್ಲೇಶ್ ದೊಡ್ಡಮನಿ ಅವರ ಮಾರ್ಗ ದರ್ಶನದಲ್ಲಿ ಸಂಚಾರ ಪೊಲೀಸ್ ವೃತ್ತ ನಿರೀಕ್ಷಕ ಮಂಜುನಾಥ ನಲವಾಗಲು ಹಾಗೂ ಸಂಚಾರಿ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯ ತಂಡ ಶಾಲಾ-ಕಾಲೇಜುಗಳಿಗೆ ಭೇಟಿ ನೀಡಿ ಜಾಗೃತಿ ಮೂಡಿಸಿತು.

ಜಿಲ್ಲೆಯಲ್ಲಿ ಇನ್ನು ಮುಂದೆ ಚುರುಕು ಸಂಚಾರಿ ನಿಯಮದ ಕಾರ್ಯಾಚರಣೆ ನಡೆಯಲಿದ್ದು, ಶಾಲಾ-ಕಾಲೇಜಿಗೆ ವಾಹನದಲ್ಲಿ ಬರುವ ಬೋಧಕರು, ಪಾಲಕರು ಮತ್ತು ವಿದ್ಯಾರ್ಥಿಗಳು ಕಡ್ಡಾಯವಾಗಿ ಚಾಲನಾ ಪರವಾನಿಗೆ ಹೊಂದಿರಬೇಕು. ದ್ವಿಚಕ್ರ ಚಾಲಕರು ಹೆಲ್ಮೆಟ್ ಧರಿಸುವುದು ಕಡ್ಡಾಯ ಮತ್ತು ಟ್ರಿಪಲ್ ರೈಡಿಂಗ್ ಮಾಡದಂತೆ ಸೂಚನೆ ನೀಡಿದರು.

ಏಕಮುಖ ಸಂಚಾರದ ವಿರುದ್ಧವಾಗಿ ಮತ್ತು ಅಪ್ರಾಪ್ತ ಮಕ್ಕಳಿಗೆ ವಾಹನ ಚಲಿಸಲು ಅನುಮತಿಸದಂತೆ ಪಾಲಕರಿಗೆ ಎಚ್ಚರಿಕೆ ನೀಡಿದರು. 9 ತಿಂಗಳಿಗಿಂತ ಹೆಚ್ಚಿನ ವಯಸ್ಸಿನ ಮಕ್ಕಳಿಗೂ ಕಡ್ಡಾಯವಾಗಿ safety harness / ಹೆಲ್ಮೆಟ್ ಧರಿಸಿಕೊಂಡು ಬರಬೇಕು ಎಂದಿದ್ದಾರೆ.

ಮಕ್ಕಳನ್ನು ಶಾಲೆಗೆ ಕರೆ ತರುವ ಆಟೋಗಳಲ್ಲಿ ಅನುಮತಿಗಿಂತ ಹೆಚ್ಚಿನ ಮಕ್ಕಳನ್ನು ಕರೆ ತರಬಾರದು. ಸರಿಯಾಗಿ ಟ್ರಾಫಿಕ್ ಸಿಗ್ನಲ್ ಅನುಸರಿಸಿ ರಸ್ತೆ ದಾಟುವ ಜತೆಗೆ ಶಾಲಾ ವಾಹನಗಳು ಸುರಕ್ಷತಾ ಕ್ರಮ ಅನುಸರಿಸುವಂತೆ ಹೇಳಿದರು.

ಇದೇ ವೇಳೆ ಸಂಚಾರ ನಿಯಮ ಉಲ್ಲಂಘಿಸಿದ ಪಾಲಕರು ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ದಂಡ ವಿಧಿಸಲಾಗಿದ್ದು, ಹೆಲ್ಮೆಟ್ ಧರಿಸದ ಒಟ್ಟು 28 ಪ್ರಕರಣಗಳಲ್ಲಿ 14 ಸಾವಿರ ರೂ. ದಂಡ, ಟ್ರಿಪಲ್ ರೈಡಿಂಗ್ ಸಂಬಂಧಿಸಿದಂತೆ 5 ಪ್ರಕರಣಗಳಿಗೆ 2500 ರೂ.ಗಳ ದಂಡ, ಹಾಗೂ ಏಕಮುಖ ಸಂಚಾರದ ವಿರುದ್ಧ ಚಾಲನೆ ಮತ್ತು ನಿರ್ಲಕ್ಷ್ಯ ಚಾಲನೆಯ 1 ಪ್ರಕರಣಕ್ಕೆ 500 ರೂ.ಗಳ ದಂಡ ವಿಧಿಸಿದ್ದಾರೆ.

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas